5681

ಎಂ. ಎನ್. ಸುಮಿತ್ರ

ಜ್ಯೋತಿಷ ಚಿಂತಾಮಣಿ



ಜ್ಯೋತಿಷ ಚಿಂತಾಮಣಿ


K 133.5
S 1113

ಡಿ. ವಿ. ಕೆ. ಮೂರ್ತಿ :: ಮೈಸೂರು ೪

ರೂ. 10

ಜ್ಯೋತಿಷ ಚಿಂತಾಮಣಿ

ಎಂ. ಎನ್. ಸುಮಿತ್ರಾ



ಡಿ. ವಿ. ಕೆ. ಮೂರ್ತಿ
ಕೃಷ್ಣಮೂರ್ತಿಪುರಂ :: ಮೈಸೂರು 4

JYOTISHA CHINTAMANI–A Handbook of Astrology in kannada by M. N. Sumitra. Third Edition : 1994. Published by D, V. K. Murthy, Krishnamurthipuram, Mysore 570 004.

ಮೊದಲನೆಯ ಮುದ್ರಣ : ೧೯೭೭
ಎರಡನೆಯ ಮುದ್ರಣ : ೧೯೮೩
ಮೂರನೆಯ ಮುದ್ರಣ : ೧೯೯೪

ಎಂ ಕೀ ಸ್ವಾರಕ ಪ್ರತಿಷ್ಠ

© ಎಂ. ಎನ್. ಸುಮಿತ್ರಾ
೧೦೯೬, ಚಾಮುರಾಜಪುರಂ, ಮೈಸೂರು ೪

5681
10/—
1·6·95

ಮುಖಚಿತ್ರ : ವೆಂಕಟೇಶ್

K133.5
SUM
eg 6021

ಮುದ್ರಕರು : ಎ. ಜಿ. ಸುವ್ರತೀಂದ್ರ
ವಾಣೀ ಪ್ರೆಸ್ :: ಚಾಮುರಾಜಪುರಂ :: ಮೈಸೂರು 570 004

ಅರಿಕೆ

ಚಿಕ್ಕವಳಾಗಿದ್ದಾಗ ನನ್ನ ಜಾತಕ ಬರೆದಿದ್ದ ಪುಸ್ತಕವನ್ನು ನೋಡುತ್ತ ಕುಳಿತಿರುತ್ತಿದ್ದ ನಾನು ಜ್ಯೋತಿಷ ಕಲಿತದ್ದು ಆಕಸ್ಮಿಕವಾಗಿ. ಯಾವುದೋ ಪುಸ್ತಕದಲ್ಲಿ ಸಂವತ್ಸರಗಳು, ನಕ್ಷತ್ರಗಳು, ವಾರ, ಗ್ರಹಗಳು, ರಾಶಿ ಮೊದಲಾದ ವಿವರವನ್ನು ಓದಿ ಆಸಕ್ತಿ ಮೂಡಿತು. ಲೈಬ್ರೆರಿಯಿಂದ ಜ್ಯೋತಿಷದ ಪುಸ್ತಕಗಳನ್ನು ತಂದು ಓದಿ ಮನನ ಮಾಡತೊಡಗಿಸೆ. ಆಗ ಹಿರಿಯ ವಿದ್ವಾಂಸರೊಬ್ಬರು ತಮ್ಮ ಮಗಳೊಡನೆ ನನಗೂ ಜ್ಯೋತಿಷ ಹೇಳಿಕೊಟ್ಟರು. ಈ ಪುಸ್ತಕ ಬರೆಯಲು ಸಲಹೆ, ಪ್ರೋತ್ಸಾಹ ನೀಡಿದ ಅವರಿಗೆ ಈ ಸಂದರ್ಭದಲ್ಲಿ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನು ತಿಳಿಸುವುದು ನನ್ನ ಆದ್ಯ ಕರ್ತವ್ಯ. ಜನಸಾಮಾನ್ಯರು ಇದರ ಪ್ರಯೋಜನ ಪಡೆದರೆ ನನ್ನ ಶ್ರಮ ಸಾರ್ಥಕ.

ಶಾಸ್ತ್ರೀಯವಾದ ಈ ಪುಸ್ತಕದ ಪ್ರಕಟಣೆಗೆ ಯಾರು ಒಪ್ಪುತ್ತಾರೆ ಎಂದು ಚಿಂತಿಸುತ್ತಿದ್ದಾಗ ಶ್ರೀಮಾನ್ ಡಿ. ವಿ. ಕೆ. ಮೂರ್ತಿಯವರು ಬಹಳ ಉತ್ಸಾಹದಿಂದ ಮುಂದೆ ಬಂದು ಇದನ್ನು ಪ್ರಕಟಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಮುಖಚಿತ್ರ ಬರೆದುಕೊಟ್ಟಿರುವ ಕಲಾವಿದ ಶ್ರೀಮಾನ್ ವೆಂಕಟೇಶ್‌ರವರಿಗೂ ಅಂದವಾಗಿ ಮುದ್ರಿಸಿರುವ ವಾಣೀ ಪ್ರೆಸ್ಸಿನವರಿಗೂ ನನ್ನ ವಂದನೆಗಳು.

೧೦೯೬
ಚಾಮರಾಜಪುರಂ
ಮೈಸೂರು-೪

ಎಂ. ಎನ್. ಸುಮಿತ್ರಾ

ಪರಿವಿಡಿ

1	ಪೀಠಿಕೆ	....	....	5
2	ರವಿ	....	....	12
3	ಚಂದ್ರ	....	....	19
4	ಕುಜ	....	....	26
5	ಬುಧ	....	....	34
6	ಗುರು	....	....	41
7	ಶುಕ್ರ	....	....	49
8	ಶನಿ	....	....	56
9	ರಾಹು	....	....	64
10	ಕೇತು	....	....	71
11	ಗೋಚಾರ	....	....	77
12	ಅನುಬಂಧ	....	....	88



ಪೀಠಿಕೆ

ಭವಿಷ್ಯದ ಬಗೆಗೆ ಕುತೂಹಲ ಮಾನವಸಹಜವಾದದ್ದು. ಕೋಟ್ಯಂತರ ಮೈಲಿ ದೂರದಲ್ಲಿರುವ ಗ್ರಹಗಳು ನಮ್ಮ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಗ್ರಹಗಳ ಚಲನೆಯನ್ನನುಸರಿಸಿ ಜನನದಿಂದ ಮರಣದವರೆಗೆ ಒಬ್ಬ ವ್ಯಕ್ತಿಯ ಜೀವನ ಹೀಗೇ ನಡೆಯುತ್ತದೆ ಎಂದು ಜ್ಯೋತಿಷ ತಿಳಿಸಬಲ್ಲದು.

ಜ್ಯೋತಿಷ ಎಂದರೆ ಏನು? ಜ್ಯೋತಿ ಎಂದರೆ ಬೆಳಕು. ಆ ಬೆಳಕಿನ ಸಹಾಯದಿಂದ ವೈಜ್ಞಾನಿಕವಾಗಿ ಗ್ರಹಗಳ ಚಲನೆಯಿಂದ ಮಾನವ ಜೀವನದಲ್ಲಿ ನಡೆಯುವ ಘಟನೆಗಳನ್ನು ತಿಳಿಸುವ ಶಾಸ್ತ್ರವೇ ಜ್ಯೋತಿಷ.

ದೂರದ ಆಕಾಶದಲ್ಲಿ ಮಿನುಗುತ್ತಿದ್ದ ಸೂರ್ಯ, ಚಂದ್ರ, ನಕ್ಷತ್ರಾದಿಗಳನ್ನು ಕಂಡು ಆದಿಮಾನವ ಭಯಪಟ್ಟ. ಕ್ರಮೇಣ ಗ್ರಹಗಳು, ನಕ್ಷತ್ರಗಳು ಆಗಾಗ ಇರುವ ದಿಕ್ಕನ್ನು ನೋಡಿಕೊಂಡು ಋತುಗಳನ್ನು ಮುಂದಾಗಿ ಗುರುತಿಸಲು ಕಲಿತುಕೊಂಡ. ವೇದಗಳನ್ನು ರಚಿಸಿದ ಮುನಿಗಳೇ ಆರು ವೇದಾಂಗಗಳನ್ನೂ ಯೋಜಿಸಿ, ಬೆಳಕಿಗೆ ತಂದರು. ಆರು ವೇದಾಂಗಗಳಲ್ಲಿ ಒಂದು ಜ್ಯೋತಿಷ. ಖಗೋಳ ಜ್ಯೋತಿಷ, ಹಾಗೂ ಗಣಿತ ಅದರ ಮೂರು ಮುಖಗಳು. ಖಗೋಳ ಗ್ರಹಗಳ ಚಲನೆಯನ್ನು ತಿಳಿಸುತ್ತದೆ. ಮಾನವನ ಜೀವನದ ಮೇಲೆ ಈ ಚಲನೆ ಬೀರುವ ಪ್ರಭಾವ ತಿಳಿಸುವುದು ಜ್ಯೋತಿಷ. ಇವುಗಳ ಲೆಕ್ಕಾಚಾರದಿಂದ ಫಲನಿರ್ಣಯ ಮಾಡುವುದು ಗಣಿತ. ಮಾನವನ ಜೀವನದ ಮೇಲೆ ಗ್ರಹಗಳ ಪ್ರಭಾವದಿಂದ ಉಂಟಾಗುವ ಪರಿಣಾಮವನ್ನು ಗಣನೆಮಾಡಿ ಭವಿಷ್ಯ ನಿರ್ಣಯಿಸುವುದೇ ಫಲಜ್ಯೋತಿಷ.

ಮುನಿಗಳು ಇದನ್ನು ವೇದಾಂಗ ಜ್ಯೋತಿಷ ಎಂದರು. ಅನೇಕ ಗ್ರಂಥಗಳನ್ನು ರಚಿಸಿದರು. ವ್ಯಾಸ, ವಸಿಷ್ಠ, ಪರಾಶರ, ಗಾರ್ಗ್ಯ ಮುಂತಾದವರ ಗ್ರಂಥಗಳಲ್ಲಿ ಅನೇಕವು ನಮಗೆ ದೊರಕಿಲ್ಲ. ಸಿಕ್ಕಿರುವ ಕೆಲವು ಕೂಡಾ ಅಪೂರ್ಣವಾಗಿವೆ. ಇವುಗಳನ್ನು ಆಧಾರವಾಗಿರಿಸಿಕೊಂಡು ಈಚಿನವರು ಗ್ರಂಥ

ರಚನೆಗೆ ತೊಡಗಿದರು.

ಭಾರತದ ಪ್ರಥಮ ಜ್ಯೋತಿಷಿ ಎಂದರೆ ಗಾರ್ಗ್ಯ ; ಇತರ ಮುನಿಗಳು ಇವರ ಶಿಷ್ಯರು ಎಂಬುದಾಗಿ ಇಲ್ಲಿಯವರೆಗಿನ ಸಂಶೋಧನೆಗಳಿಂದ ವ್ಯಕ್ತ ಪಟ್ಟಿದೆ. ಲಗಧ ಮುನಿ ಬರೆದ 'ವೇದಾಂಗ ಜ್ಯೋತಿಷ'ಕ್ಕೆ ಡಾ|| ಆರ್. ಶಾಮಾ ಶಾಸ್ತ್ರಿಗಳು ವ್ಯಾಖ್ಯಾನ ಬರೆದಿದ್ದಾರೆ. ಈಗ ದೊರೆತಿರುವ ಇತರ ಪ್ರಾಚೀನ ಗ್ರಂಥಗಳೆಂದರೆ ಆರ್ಚ ಜ್ಯೋತಿಷ, ಯಾಜುಷ ಜ್ಯೋತಿಷ ಹಾಗೂ ಅಥರ್ವ ಜ್ಯೋತಿಷ.

ಆರ್ಯಭಟ ಭಾರತೀಯ ಜ್ಯೋತಿಷದ ಆದ್ಯ ಪ್ರವರ್ತಕ. ಆತ ಖಗೋಳ ವಿಜ್ಞಾನಕ್ಕೆ ನಿಷ್ಕೃಷ್ಟ ಶಾಸ್ತ್ರೀಯ ಸ್ವರೂಪವನ್ನು ತಂದುಕೊಟ್ಟ. 'ಆರ್ಯಭಟೀಯ' ಖಗೋಳ ವಿಜ್ಞಾನಕ್ಕೆ ಸ್ಮರಣೀಯ ಕಾಣಿಕೆ ಎನಿಸಿದೆ.

'ಯವನ ಜಾತಕ' ನೇಪಾಳಿ ಲಿಪಿಯಲ್ಲಿರುವ ಗ್ರಂಥ. ಇದೇ ಹೆಸರಿನ ಎರಡು ಗ್ರಂಥಗಳು ದೊರಕಿವೆ. ಅವನ್ನು ಯಾರು ಬರೆದರು ಮತ್ತು ಯಾವಾಗ ಬರೆದರು ಎನ್ನುವ ವಿವರಗಳು ಗೊತ್ತಿಲ್ಲ. ಇವು ಯವನರಲ್ಲಿ ಪ್ರಚಲಿತವಾಗಿದ್ದ ಜಾತಕ ಪದ್ಧತಿಯನ್ನು ವಿವರಿಸುವಂತಹವು.

ಭಾರತೀಯ ಜ್ಯೋತಿಷ ವಿಜ್ಞಾನದಲ್ಲಿ ಮರೆಯಲಾಗದ ಹೆಸರು ವರಾಹ ಮಿಹಿರನದು. ಈತನು 'ಬೃಹಜ್ಜಾತಕ','ಪಂಚಸಿದ್ಧಾಂತಿಕ','ಲಘುಜಾತಕ', 'ಬೃಹತ್ಸಂಹಿತೆ' ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ. ಈ ಗ್ರಂಥಗಳಿಗೆ ಭಟ್ಟೋತ್ಪಲ ಟೀಕೆ ಬರೆದಿದ್ದಾನೆ. ಈತ ತಂತ್ರ, ಹೋರಾ ಮತ್ತು ಸಂಹಿತೆ ಎಂದು ಜ್ಯೋತಿಷವನ್ನು ಮೂರು ಭಾಗ ಮಾಡಿದ ಕೀರ್ತಿಗೆ ಪಾತ್ರನಾದ. 'ಹೋರಾಷಟ್ಪಂಚಾಶಿಕೆ'ಇವನ ಮಗ ಪೃಥುಯಶಸ್ಸು ಬರೆದಿರುವನು. ವರಾಹ ಮಿಹಿರನ ಹೆಜ್ಜೆಯಲ್ಲೇ ಹೆಜ್ಜೆ ಇರಿಸಿ ವ್ಯಾಘ್ರಭಟೇಶ್ವರ 'ಸಾರಾವಳಿ' ರಚಿಸಿದ್ದಾನೆ. ವರಾಹಮಿಹಿರ ಸಂಕ್ಷೇಪವಾಗಿ ಹೇಳಿದ್ದುದನ್ನು ಈತ ವಿಸ್ತಾರವಾಗಿ ಬರೆದಿದ್ದಾನೆ.

ಹತ್ತನೇ ಶತಮಾನದ ಉದ್ದಾಮ ಜ್ಯೋತಿಷಿಗಳೆಂದರೆ ಶ್ರೀಪತಿ ಹಾಗೂ ಪದ್ಮನಾಭಮಿಶ್ರ. 'ಶ್ರೀಪತಿಪದ್ಧತಿ' ಮತ್ತು 'ವ್ಯವಹಾರ ಪ್ರದೀಪ' ಇವರ ರಚನೆಗಳು.

ಭಾಸ್ಕರಾಚಾರ್ಯ ಹನ್ನೆರಡನೆಯ ಶತಮಾನದಲ್ಲಿ ಬೆಳಗಿದ ಉಜ್ವಲ

ಪಂಡಿತ. 'ಸಿದ್ಧಾಂತ ಶಿರೋಮಣಿ' ಒದಿದು ಅವುರನಾದ. ಈ ಮೂಲಕ ಜ್ಯೋತಿಷಕ್ಕೆ ಭದ್ರವಾದ ಅಡಿಪಾಯ ಹಾಕಿದ.

'ಜ್ಯೋತಿರ್ವಿದಾಭರಣಂ' ಎಂಬ ಕಾಳಿದಾಸನ ರಚನೆ ಹದಿಮೂರನೆಯ ಶತಮಾನದು. ಇದೇ ಕಾಲದಲ್ಲಿ ಕೇಶವಾರ್ಕನು 'ತಾಜಕಪದ್ಧತಿ', 'ವಿವಾಹ ವೃಂದಾವನ' ಬರೆದ.

ಹದಿನಾಲ್ಕು, ಹದಿನೈದನೆಯ ಶತಮಾನಗಳಲ್ಲಿ ಜ್ಯೋತಿಷ ಕುರಿತು ಗ್ರಂಥಗಳು ವಿಪುಲವಾಗಿ ಹೊರಬಂದುವು. ಇವುಗಳಲ್ಲಿ ಮುಖ್ಯವಾದುವು : ಮಹೇಂದ್ರಸೂರಿಯ 'ಯಂತ್ರರಾಜ', ಮಹಾದೇವನ 'ಕಾಮಧೇನು', ಗಂಗಾಧರನ 'ಚಾಂದ್ರಮಾನ', ಕೇಶವನ 'ಜಾತಕಪದ್ಧತಿ', 'ತಾಜಕಪದ್ಧತಿ', 'ವರ್ಷಗ್ರಹಸಿದ್ಧಿ' ಮುಖ್ಯವಾದವು. ಕೇರಳದ ಪರಮೇಶ್ವರ ಎಂಬುವನು ಒಂಬತ್ತು ಗ್ರಂಥಗಳನ್ನು ರಚಿಸಿದ್ದಾನೆ.

ನೀಲಕಂಠದೈವಜ್ಞ ಹದಿನಾರನೆಯ ಶತಮಾನದ ಸುಪ್ರಸಿದ್ಧ ಜ್ಯೋತಿಷಿ. ಇವನು ಅರಬ್ಬಿ–ಫಾರಸೀ ಮಿಶ್ರಭಾಷೆಯಲ್ಲಿ 'ನೀಲಕಂಠಿ' ಎಂಬ ಗ್ರಂಥವನ್ನು ಬರೆದ.'ಮುಹೂರ್ತ ಚಿಂತಾಮಣಿ' ಈತನ ತಮ್ಮ ರಾಮದೈವಜ್ಞ ಬರೆದುದು. ನಾರಾಯಣ ಬರೆದ 'ಮುಹೂರ್ತ ಮಾರ್ತಾಂಡ' ಬಹುಖ್ಯಾತಿ ಪಡೆದ ಗ್ರಂಥ. 'ಮುಹೂರ್ತ ಕಲ್ಪದ್ರುಮ' ವಿಠಲ ದೀಕ್ಷಿತನ ರಚನೆ.

'ಇಜಾಸ್ತಿ' ಎನ್ನುವ ಅರಬ್ಬೀ ಭಾಷೆಯ ಜ್ಯೋತಿಷ ಗ್ರಂಥವನ್ನು ಸಂಸ್ಕೃತದಲ್ಲಿ ಭಾಷಾಂತರಿಸಿದ ಕೀರ್ತಿ ಹದಿನೇಳನೆಯ ಶತಮಾನದಲ್ಲಿದ್ದ ಜಗನ್ನಾಥನಿಗೆ ಸಲ್ಲುತ್ತದೆ. ಕೃತಿಯ ಹೆಸರು 'ಸಿದ್ಧಾಂತ ಸಮ್ರಾಜಂ.'

ಮುಂದೆ ಪಾಶ್ಚಿಮಾತ್ಯ ಜ್ಯೋತಿಷ ಪದ್ಧತಿಯ ಪರಿಚಯ ಉಂಟಾಯಿತು. ಆ ಪದ್ಧತಿಗೂ, ಭಾರತೀಯ ಪದ್ಧತಿಗೂ ಬಹಳ ವ್ಯತ್ಯಾಸವಿದೆ. ಆ ಪದ್ಧತಿಯಲ್ಲಿರುವ ಒಳ್ಳೆಯ ಅಂಶಗಳನ್ನು ನಮ್ಮ ಪದ್ಧತಿಗೆ ಅಳವಡಿಸಿಕೊಳ್ಳಲು ಸಾಧ್ಯವೇ ಎಂದು ನೋಡಬೇಕಾಗಿದೆ. ಅದಕ್ಕೂ ಮಿಗಿಲಾಗಿ ಅತ್ಯಂತ ಪ್ರಾಚೀನವಾದ ಭಾರತೀಯ ಜ್ಯೋತಿಷ ಪದ್ಧತಿ ತನ್ನ ಸ್ಥಾನವನ್ನು ಕಾಪಾಡಿಕೊಳ್ಳಬೇಕಾಗಿದೆ.

ಜ್ಯೋತಿಷವು ವಿಜ್ಞಾನವೂ ಹೌದು, ಕಲೆಯೂ ಹೌದು. ಗ್ರಹಗಳ ಚಲನೆಯನ್ನು ಕರಾರುವಾಕ್ಕಾಗಿ ಲೆಕ್ಕ ಹಾಕಿ, ಅದರ ಆಧಾರದ ಮೇಲೆ ಫಲ

ಹೇಳುವುದರಿಂದ ಅದು ವಿಜ್ಞಾನ ಎನಿಸಿದೆ. ಫಲ ಹೇಳುವಾಗ ಸತ್ಯಕ್ಕೆ ಊನ ಬಾರದಂತೆ, ಕೇಳುವವರಿಗೆ ಮನನೋಯದಂತೆ ತಿಳಿಸುವುದೂ ಒಂದು ಕಲೆ.

ಜ್ಯೋತಿಷ ಸಾಗರದಂತೆ ವಿಶಾಲವಾದ ಜ್ಞಾನಭಂಡಾರ ಹೊಂದಿದೆ. ಅಷ್ಟನ್ನೂ ಓದಲು, ಅರ್ಥಮಾಡಿಕೊಳ್ಳಲು ಒಬ್ಬ ವ್ಯಕ್ತಿಯ ಜೀವಿತಕಾಲದಲ್ಲಿ ಅಸಾಧ್ಯವಾದದ್ದು. ಆದರೂ ಬಹಳ ಓದಿ, ಚರ್ಚೆ ಮಾಡಿ, ಚೆನ್ನಾಗಿ ತಿಳಿದು ಕೊಂಡಿರುವ ಮೇಧಾವಿಗಳಿದ್ದಾರೆ. ಜನಜೀವನಕ್ಕೆ ಅಗತ್ಯವಾದ ಜ್ಯೋತಿಷಕ್ಕೆ ತಕ್ಕ ಮನ್ನಣೆ ದೊರೆತಿಲ್ಲ. ಅದರ ಬಗ್ಗೆ ಏನೂ ತಿಳಿದುಕೊಳ್ಳದ ಜನ ಜ್ಯೋತಿಷ ಎಂದರೆ ಸುಳ್ಳಿನ ಕಂತೆ ಎನ್ನುತ್ತಾರೆ. ಜನನಾಯಕರು ವೇದಿಕೆಯಿಂದ ಜ್ಯೋತಿಷವನ್ನು ಹೀಗಳೆದು ಭಾಷಣ ಬಿಗಿಯುತ್ತಾರೆ. ಆದರೆ ಏನಾದರೂ ಕೊಂಚ ಏರುಪೇರಾದರೆ ಜಾತಕ ಹಿಡಿದುಕೊಂಡು ಜ್ಯೋತಿಷಿಯ ಮನೆಗೆ ಬರುತ್ತಾರೆ. ಇದರಲ್ಲಿ ಮುಚ್ಚುಮರೆ ಬೇರೆ. ಅವರು ಬಂದುದು ಯಾರಿಗೂ ತಿಳಿಯಬಾರದೆಂಬ ಅಪೇಕ್ಷೆ ವ್ಯಕ್ತಪಡಿಸುತ್ತಾರೆ. ಇನ್ನಾದರೂ ಜನ ಎಚ್ಚೆತ್ತು ಜ್ಯೋತಿಷಕ್ಕೆ ಗೌರವಸ್ಥಾನ ಕೊಡಲಿ ಎಂದು ಆಶಿಸುತ್ತೇನೆ.

ಜ್ಯೋತಿಷ ಬಲ್ಲವರಿಗೇ ಅಲ್ಲದೆ ಮಹಾಜನಗಳಿಗೂ ಗ್ರಹಗಳ ವಿಚಾರದಲ್ಲಿ ಸಂಪೂರ್ಣ ಮಾಹಿತಿ ದೊರೆಯುವಂತಾಗಬೇಕೆಂಬ ಉದ್ದೇಶದಿಂದ 'ಜ್ಯೋತಿಷ ಚಿಂತಾಮಣಿ' ಎಂಬ ಗ್ರಂಥವನ್ನು ರಚಿಸಿದ್ದೇನೆ. ನೃಸಿಂಹದೀಕ್ಷಿತ ವಿರಚಿತ 'ಜಾತಕ ಕಳಾನಿಧಿ', ಜಗನ್ನಾಥಶರ್ಮನ 'ಜಾತಕ ಕಳಾನಿಧಿ', ಯಜ್ಞನಾರಾಯಣನ 'ಜಾತಕ ಚಂದ್ರಿಕೆ', 'ಕೃಷ್ಣಮಿಶ್ರೀಯ ದಶಾಭುಕ್ತಿನಿರ್ಣಯ' ಹಾಗೂ ಪದ್ಮನಾಭ ದೈವಜ್ಞನ 'ನಕ್ಷತ್ರ ಚೂಡಾಮಣಿ' ಗ್ರಂಥಗಳಿಂದ ವಿಷಯಗಳನ್ನು ಸಂಗ್ರಹಿಸಿ, ಎಲ್ಲರಿಗೂ ಅನುಕೂಲವಾಗುವಂತೆ, ಸರಳವಾಗಿ ಬರೆದಿದ್ದೇನೆ.

ಕೆಲವು ಸಾಮಾನ್ಯ ನಿಯಮಗಳಿವೆ.[1] ರವಿ, ಚಂದ್ರ, ಕುಜ, ಬುಧ, ಶುಕ್ರ, ಗುರು ಮತ್ತು ಶನಿ ತಾವಿರುವ ಸ್ಥಾನದಿಂದ ಏಳನೆಯ ಮನೆಯನ್ನು ನೋಡುತ್ತಾರೆ. ಕುಜ, ಗುರು, ಶನಿಗಳಿಗೆ ವಿಶೇಷ ದೃಷ್ಟಿಯುಂಟು. ಕುಜ ಏಳನೆಯ ಮನೆಯ ಜೊತೆಗೆ ನಾಲಕ್ಕು-ಎಂಟನೆಯ ಮನೆಗಳನ್ನೂ ನೋಡುವನು.

---

1. ಜಾತಕ ಕಳಾನಿಧಿ (ಜಗನ್ನಾಥ ಶರ್ಮ)

ಗುರು ಏಳನೇ ಮನೆಯೊಂದಿಗೆ ಐದು ಮತ್ತು ಒಂಭತ್ತನೇ ಮನೆಗಳನ್ನೂ ನೋಡುತ್ತಾನೆ. ಶನಿ ಏಳನೆಯ ಮನೆಯಲ್ಲದೆ ಮೂರು ಹಾಗೂ ಹತ್ತನೆಯ ಮನೆಗಳನ್ನೂ ನೋಡುತ್ತಾನೆ. ಇದರಲ್ಲೇ ಇನ್ನೊಂದು ಅಭಿಪ್ರಾಯವುಂಟು. [2]ಎಲ್ಲ ಗ್ರಹಗಳೂ ಏಳನೆಯ ಮನೆಯನ್ನು ಪೂರ್ಣದೃಷ್ಟಿಯಿಂದ ನೋಡುತ್ತಾರೆ. ಕುಜ, ಗುರು, ಶನಿಗಳಿಗೆ ವಿಶೇಷ ದೃಷ್ಟಿ ಬಲವಾಗಿರುತ್ತದೆ. ಕುಜನದು $\frac{3}{4}$ ಭಾಗ ದೃಷ್ಟಿ, ಗುರುವಿನದು $\frac{1}{2}$ದಷ್ಟಾದರೆ ಶನಿಯದು $\frac{1}{4}$ಭಾಗ ಮಾತ್ರ. [3]ಇನ್ನೊಂದು ವಿಶೇಷವೆಂದರೆ ಕುಜನ ದೃಷ್ಟಿ ಉಪದ್ರವಕಾರಿಯಾದದ್ದು. ಗುರುದೃಷ್ಟಿಯಾದರೋ ಶುಭವನ್ನುಂಟುಮಾಡುತ್ತದೆ.

[4]ಯಾವುದೇ ಗ್ರಹ ಉಚ್ಚಸ್ಥಾನದಲ್ಲಿದ್ದರೆ ತನ್ನ ಕಾರಕತ್ವದಿಂದ ಉಂಟಾಗುವ ಫಲವನ್ನು, ತಾನಿರುವ ಕ್ಷೇತ್ರಕ್ಕೆ ಅತಿಶಯವಾಗಿ ಕೊಡುತ್ತದೆ. ಅಂತೆಯೇ ಒಂದು ಗ್ರಹ ನೀಚ ಸ್ಥಾನದಲ್ಲಿದ್ದರೆ ಮಿತ್ರ, ಶತ್ರು ಮುಂತಾದ ಸ್ಥಿತಿಗೆ ಅನುಸಾರವಾಗಿ ಫಲ ಕೊಡುತ್ತದೆ. ಸಮಗ್ರಹದ ಮನೆಯಲ್ಲಿದ್ದರೆ ಜಾತಕನ ವಯಸ್ಸು, ಅವರಿರುವ ಊರು, ಕರ್ಮ ಮಾಡುವ ಅಧಿಕಾರವಿರುವುದೋ ಇಲ್ಲವೋ; ಅನುಭವಿಸುವ ಯೋಗ್ಯತೆ ಉಳ್ಳವನೆ, ಮನೆತನ, ಜಾತಿ, ಗ್ರಹವಿರುವ ಭಾವ—ಇವುಗಳೆಲ್ಲವನ್ನೂ ನೋಡಿಕೊಂಡು ಮಿಶ್ರಫಲವನ್ನು ಹೇಳಬೇಕು. ಮೂಲ ತ್ರಿಕೋಣದಲ್ಲಿರುವ ಗ್ರಹಕ್ಕಾದರೆ ಅದಕ್ಕೆ ಉಕ್ತವಾಗಿರುವ ಫಲಗಳ ಎರಡರಷ್ಟು ಅಥವಾ ಮೂರರಷ್ಟು ಫಲ ಕೂಡಿಬರುತ್ತದೆ. ಸ್ವಕ್ಷೇತ್ರದಲ್ಲಿರುವ ಗ್ರಹವು ತಾನಿರುವ ಸ್ಥಾನದ ಫಲವನ್ನು ಏನೊಂದು ತೊಂದರೆ ಇಲ್ಲದೆ ಚೆನ್ನಾಗಿ ಕೊಡುವುದು. ಇನ್ನೊಂದು ಗ್ರಹದ ಮನೆಯಲ್ಲಿರುವ ಗ್ರಹವು, ಆ ಗ್ರಹವು ಕೊಡಬೇಕಾಗಿರುವ ಫಲವನ್ನೂ ಸೇರಿಸಿಕೊಂಡು, ತಾನು ಕೊಡಬೇಕಾದ ಫಲದಲ್ಲಿ ಮಾರ್ಪಾಡು ಹೊಂದಿ ಫಲ ಕೊಡುತ್ತದೆ. ಅಧಿಶತ್ರುಕ್ಷೇತ್ರ ಎಂದರೆ ಆರು, ಎಂಟು, ಹನ್ನೆರಡನೆಯ ಮನೆಗಳು. ಈ ಮನೆಗಳಲ್ಲಿರುವ ಗ್ರಹಗಳು ಅನುಕೂಲಕರವಾದ ಫಲಗಳನ್ನು ಕೊಡಬೇಕಾಗಿದ್ದರೂ ಪ್ರತಿಯಾಗಿ ವಿರುದ್ಧವಾದ ಅನನುಕೂಲ ಫಲಗಳನ್ನೇ ಕೊಡುತ್ತಾರೆ. ಮಿತ್ರಕ್ಷೇತ್ರದಲ್ಲಿರುವ ಗ್ರಹವು ಸ್ನೇಹಿತನಾದ ಗ್ರಹದಿಂದಾಗಿ ಜೊತೆಯಲ್ಲಿರುವ ಗ್ರಹ

---

2. ಜಾತಕ ಚಂದ್ರಿಕೆ

3, 4. ಜಾತಕ ಕಳಾನಿಧಿ (ಜಗನ್ನಾಥ ಶರ್ಮ)

ಗಳೂ ಮಿತ್ರರಾಗಿ ಒಳ್ಳೆಯ ಫಲವನ್ನು ಕೊಡುವರು. ಆ ಗ್ರಹವನ್ನು ನೋಡುವ ಗ್ರಹಗಳೂ ಸಮಾನತ್ವದಿಂದ ಶುಭ ಫಲವನ್ನೇ ಕೊಡುವರು. ಉಚ್ಚಸ್ಥಾನದ ಕಡೆ ಹೋಗುವ ಗ್ರಹ ಅಂದರೆ ಆರೋಹ ಗ್ರಹದ ದೆಶೆಯಲ್ಲಿ ಒಳ್ಳೆಯ ಫಲವೇ ದೊರಕುವುದು. ನೀಚಸ್ಥಾನದ ಕಡೆ ಹೋಗುವ ಅಂದರೆ ಅವರೋಹಿ ಗ್ರಹದ ದೆಶೆಯಲ್ಲಿ ಅದರ ಅಷ್ಟಕವರ್ಗದ ಪ್ರಕಾರ ಹೆಚ್ಚು ಬಿಂದು ಗಳಿರುವ ರಾಶಿಯಲ್ಲಿ ಇದ್ದರೆ ಅದಕ್ಕೆ ಹೇಳಿರುವ ಫಲಕ್ಕಿಂತ ಹೆಚ್ಚು ಫಲವನ್ನೇ ಕೊಡುವುದು.

[5]ಭಾವದ ಫಲ ಹೇಳುವಾಗ ಭಾವಾಧಿಪತಿ ಇರುವ ಸ್ಥಿತಿ, ಭಾವದಲ್ಲಿರುವ ಗ್ರಹ ಭಾವವನ್ನು ನೋಡುವ ಗ್ರಹಗಳು ಎಲ್ಲದರ ಬಲವನ್ನೂ ನೋಡಿಕೊಂಡು ಶುಭಾಶುಭ ಫಲವನ್ನು ಹೇಳಬೇಕು.

[6]ಒಂದು, ನಾಲ್ಕು, ಏಳು, ಹತ್ತನೆಯ ಮನೆಗಳಿಗೆ ಕೇಂದ್ರಸ್ಥಾನಗಳೆಂದು ಹೇಳುತ್ತಾರೆ. ಅಲ್ಲಿ ಶುಭಗ್ರಹಗಳಿದರೆ, ಶುಭಗ್ರಹಗಳು ಜೊತೆಯಲ್ಲಿ ಇದ್ದರೆ ಒಳ್ಳೆಯ ಫಲ ಕೊಡುವರು. ಹೀಗೆಯೇ ಪಾಪಗ್ರಹಗಳಿದರೆ, ಪಾಪಗ್ರಹಗಳ ಯುತಿ ಇದರೆ ಕೆಟ್ಟ ಫಲವನ್ನು ಕೊಡುವರು. ಶುಭಗ್ರಹಗಳಿಗೆ ಕೇಂದ್ರಾಧಿಪತ್ಯ ಒಳ್ಳೆಯದಲ್ಲ. ಆಗ ಆ ಶುಭಗ್ರಹಗಳು ಪಾಪಿಗಳಾಗುತ್ತಾರೆ. ಪಾಪಗ್ರಹಗಳು ಕೇಂದ್ರಾಧಿಪತಿಗಳಾದರೆ ಶುಭ ಫಲ ಕೊಡುವರು. ಒಂಭತ್ತು, ಹತ್ತನೆಯ ಮನೆಗಳ ಅಧಿಪತಿಗಳು ಏಕತ್ರ ಸೇರಿದರೆ ಶುಭ ಫಲ ಅಧಿಕವಾಗಿರುವುದು.

[7]ಕೇಂದ್ರಾಧಿಪತಿಯೊಡನೆ ತ್ರಿಕೋಣಾಧಿಪತಿ (ಐದು, ಒಂಬತ್ತನೆಯ ಮನೆಗಳು ತ್ರಿಕೋಣ ಸ್ಥಾನಗಳು) ಮಾತ್ರ ಸೇರಿದ್ದು, ಬೇರೆ ಯಾವ ಗ್ರಹದ ದೃಷ್ಟಿಯೂ ಇರದಿದರೆ ಅವರಿಬ್ಬರೂ ಮಂಗಳವನ್ನುಂಟುಮಾಡುವರು. ಕೇಂದ್ರ ಹಾಗೂ ತ್ರಿಕೋಣಾಧಿಪತಿಗಳಲ್ಲಿಬ್ಬರು ಸೇರಿದರೆ ಯೋಗವುಂಟು ಮಾಡುವರು. ಆ ಗ್ರಹಗಳಿಗೆ ಇತರ ದೋಷಗಳೇನಾದರೂ ಇದ್ದರೂ ಸಹಾ ಯೋಗಭಂಗವಾಗುವುದಿಲ್ಲ.

[8]ರಾಹು ಕೇತುಗಳು ಫಲದಾಯಕರಾಗುವಷ್ಟು ಬಲಿಷ್ಠರಾಗಿದ್ದರೆ

5, 6. ಜಾತಕ ಕಲಾನಿಧಿ (ಜಗನ್ನಾಥ ಶರ್ಮ)

7, 8. ಜಾತಕ ಚಂದ್ರಿಕೆ

ತಾವಿರುವ ಸ್ಥಾನದ ಫಲವನ್ನು, ಯಾವ ಗ್ರಹದ ಜೊತೆಯಲ್ಲಿರುತ್ತಾರೋ ಆ ಗ್ರಹದ ಫಲವನ್ನೂ ತಮ್ಮ ದಶಾಭುಕ್ತಿಗಳಲ್ಲಿ ಕೊಡುತ್ತಾರೆ. ರಾಹು ಕೇತುಗಳ ಕಾರಕತ್ವವನ್ನೂ ಗಣಿಸಬೇಕು.

[9]ಲಗ್ನದಿಂದ ಎಂಟನೆಯ ಮನೆ ಆಯುರ್ಭಾವ. ಅದರಿಂದ ಎಂಟನೇ ಮನೆಯಾದ ಮೂರನೇ ಮನೆಯೂ ಆಯುರ್ಭಾವವೇ. ಇವುಗಳ ವ್ಯಯ ಸ್ಥಾನಗಳಾದ ಏಳು ಹಾಗೂ ಎರಡನೆಯ ಮನೆಗಳು ಮಾರಕಸ್ಥಾನಗಳು. ದ್ವಿತೀಯಕ್ಕಿಂತ ಸಪ್ತಮವು ಪ್ರಬಲ ಮಾರಕಸ್ಥಾನ. ಆ ಮನೆಗಳಲ್ಲಿರುವ ಗ್ರಹ, ಆ ಮನೆಗಳ ಅಧಿಪತಿಗಳ ಜೊತೆಯಲ್ಲಿರುವ ಪಾಪಗ್ರಹಗಳ ದಶಾಭುಕ್ತಿಯಲ್ಲಿ ಮರಣ ಉಂಟಾಗುವುದು. ಮಾರಕಗ್ರಹಗಳು ಎಷ್ಟೇ ಪ್ರಬಲವಾಗಿದ್ದರೂ, ಶನಿ ಯಾವುದಾದರೊಂದು ಮಾರಕ ಗ್ರಹದ ಜೊತೆ ಸೇರಿದರೆ ತಾನೇ ಮರಣವನ್ನುಂಟುಮಾಡುವನು.

[10]ಯಾವ ಗ್ರಹವೇ ಆಗಲಿ ಸ್ವಕ್ಷೇತ್ರದಲ್ಲಿದ್ದರೆ ತಾನು ಕೊಡಬೇಕಾದ ಫಲದಲ್ಲಿ ಅರ್ಧದಷ್ಟನ್ನು ಮಾತ್ರ ಕೊಡುವುದು. ಮಿತ್ರಕ್ಷೇತ್ರದಲ್ಲಿದ್ದರೆ ಕಾಲು ಭಾಗ. ಶತ್ರುಕ್ಷೇತ್ರದಲ್ಲಿದ್ದರೆ ಫಲ ಅತ್ಯಲ್ಪ. ನೀಚಕ್ಷೇತ್ರದಲ್ಲಿದ್ದರೆ ನಿಷ್ಫಲ.

'ತದ್ಭಾವಾದ್ಭಾವಜಂ ಫಲಂ' ಎಂಬ ಉಕ್ತಿ ಇದೆ. ಒಂದು ಭಾವದ ಫಲವನ್ನು ನಿರ್ಧರಿಸುವಾಗ ಆ ಭಾವದಿಂದ ಮತ್ತೆ ಅಷ್ಟನೆಯ ಭಾವವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಐದನೆಯ ಮನೆಯಾದ ಪುತ್ರಭಾವವನ್ನೇ ತೆಗೆದುಕೊಳ್ಳೋಣ. ಮಕ್ಕಳ ವಿಚಾರ ತಿಳಿದುಕೊಳ್ಳಬೇಕಾದರೆ ಐದನೆಯ ಮನೆಯಲ್ಲದೆ ಒಂಬತ್ತನೆಯ ಮನೆಯನ್ನೂ ನೋಡಬೇಕು. ಐದನೆ ಮನೆಯಿಂದ ಐದನೆಯ ಮನೆ ಎಂದರೆ ಒಂಬತ್ತನೆಯ ಮನೆ ಆಗುವುದರಿಂದ ಅದನ್ನೂ ನೋಡಬೇಕಾಗುತ್ತದೆ.

ಈ ಸಾಮಾನ್ಯ ನಿಯಮಗಳು ಲಗ್ನ ಯಾವುದೇ ಆಗಿದ್ದರೂ ಅನ್ವಯಿಸಲು ಅನುಕೂಲವಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಒಂದೊಂದರಲ್ಲಿ ಒಂದೊಂದರಂತೆ ಗ್ರಹಗಳ ವಿಚಾರವನ್ನು ಹೇಳುತ್ತೇನೆ.

---

9. ಜಾತಕ ಚಂದ್ರಿಕೆ
10. ಜಾತಕ ಕಲಾನಿಧಿ (ಜಗನ್ನಾಥ ಶರ್ಮ)

ರವಿ

ರವಿ ಅಥವಾ ಸೂರ್ಯ ಗ್ರಹಗಳ ರಾಜ. ರವಿಯು ಕಾರಕತ್ವವೆಂದರೆ ತಂದೆ, ರಾಜ್ಯಾಧಿಪತ್ಯ, ಯಜ್ಞ, ಚಿನ್ನ, ಕುದುರೆ, ಪದ್ಮರಾಗವೆಂಬ ಕೆಂಪು ರತ್ನ, ಸಿಂಹಾಸನ, ಕೆಂಪು, ಛತ್ರಿ, ತಾಮ್ರ, ಹುಲ್ಲು, ವೈದ್ಯ, ಕೆಂಪುಬಣ್ಣದ ಶಾಲು, ರಕ್ತ, ಬೆಂಕಿ, ವೀರತ್ವ, ಕಣ್ಣು ಹಾಗೂ ಚಿಕಿತ್ಸೆ.

ರವಿಗೆ ಸ್ವಕ್ಷೇತ್ರ ಸಿಂಹ. ರವಿ ಚಂದ್ರರಿಗೆ ಒಂದೊಂದೇ ರಾಶಿಯ ಆಧಿಪತ್ಯ. ಉಳಿದ ಐದು ಗ್ರಹಗಳಿಗೆ ಎರಡೆರಡು. ಮೇಷದಲ್ಲಿ ಉಚ್ಚ. ನೀಚಸ್ಥಾನ ತುಲಾರಾಶಿ. ಮೂಲತ್ರಿಕೋಣ ಸಿಂಹ. ಚಂದ್ರ, ಕುಜ, ಗುರು, ರವಿಗೆ ಮಿತ್ರರು. ಶನಿ, ಶುಕ್ರ ಶತ್ರುಗಳು. ಬುಧ ಸಮ.

ರವಿಯ ಗ್ರಹರತ್ನ ಕೆಂಪು. ಚಿನ್ನ ಮತ್ತು ತಾಮ್ರ ಗ್ರಹಲೋಹ.

ಲಗ್ನದಿಂದ ಆರಂಭವಾಗಿ ಹನ್ನೆರಡು ಮನೆಗಳಲ್ಲಿ ರವಿ ಇದ್ದಲ್ಲಿ ಏನೇನು ಫಲಗಳನ್ನು ಕೊಡುತ್ತಾನೆ ಎಂಬುದನ್ನು ನೋಡೋಣ. ಲಗ್ನದಲ್ಲಿರುವ ರವಿ ಆರೋಗ್ಯಭಾಗ್ಯ ಕೊಡುತ್ತಾನೆ. ದೇಹದಲ್ಲಿ ಪಿತ್ತ ಹೆಚ್ಚು; ಕಣ್ಣಿನ ತೊಂದರೆ ಇರುತ್ತದೆ, ಬುದ್ಧಿವಂತ ಉಳ್ಳವನೂ, ಉತ್ತಮ ಆಚಾರವುಳ್ಳವನೂ ಆಗಿರುತ್ತಾನೆ. ಉಷ್ಣ ಶರೀರ, ಚಪಲ ಸ್ವಭಾವ, ಉದಾರಬುದ್ಧಿ, ಶೂರ ಮತ್ತು ನಾಚಿಕೆ ಇಲ್ಲದವನೂ ಆಗುತ್ತಾನೆ.

ಎರಡನೇ ಸ್ಥಾನದಲ್ಲಿ ರವಿ ಇರುವವರಿಗೆ ಮುಖದಲ್ಲಿ ರೋಗ ಕಾಣಿಸಿಕೊಳ್ಳುತ್ತದೆ. ರಾಜದಂಡನೆಗೆ ಗುರಿಯಾಗುವುದರಿಂದಾಗಿ ಧನನಷ್ಟ ಉಂಟಾಗುತ್ತದೆ. ವಿದ್ಯೆ ಕಲಿಯುವುದಕ್ಕೆ ವಿಘ್ನಗಳೊದಗುವುದು. ಮೂರ್ಖ ಎನಿಸಿಕೊಳ್ಳುವಂಥಾ ಸಿಟ್ಟು ಬರುತ್ತದೆ. ಇಲ್ಲಿ ರವಿಯ ಜೊತೆಗೆ ಪಾಪಗ್ರಹಗಳೇನಾದರೂ ಸೇರಿದ್ದರೆ ನೇತ್ರರೋಗ ಉಂಟಾಗುತ್ತದೆ.

ಬುದ್ಧಿವಂತ, ಸಾಹಸ ಕೆಲಸಗಳಿಂದ ಧನಧಾನ್ಯ ಸಂಪಾದಿಸುವವನೂ, ತಮ್ಮಂದಿರು ಇಲ್ಲದವನೂ, ಗೋತ್ರಸಮೃದ್ಧಿ ಹೊಂದಿದವನೂ,ಬಹಳ ಕ್ರೂರಿ,

ವಿಪರೀತ ಶೂರನೂ ಆಗುತ್ತಾನೆ, ಮೂರರಲ್ಲಿ ರವಿ ಇರುವ ಜಾತಕನು.

ನಾಲ್ಕನೇ ರಾಶಿಯಲ್ಲಿ ರವಿ ಉಳ್ಳವರು ಅಂಗಹೀನರಾಗಿರುತ್ತಾರೆ. ಮನಸ್ಸಿಗೆ ಶಾಂತಿ ಇರುವುದಿಲ್ಲ. ನಿಷ್ಕಾರಣವಾಗಿ ಜನರಿಂದ ವಿರೋಧ ಘಟಿಸುತ್ತದೆ. ಬಂಧುಗಳನ್ನು ದ್ವೇಷಿಸುವವನೂ, ಹುಟ್ಟಿದ ಊರನ್ನು ಬಿಟ್ಟು ಹೊರದೇಶದಲ್ಲಿ ವಾಸಿಸುವವನೂ ಆಗುತ್ತಾನೆ.

ಐದನೆಯ ಭಾವದಲ್ಲಿ ರವಿ ಉಳ್ಳವರು ಧನಹೀನರಾಗಿರುತ್ತಾರೆ. ಗಂಡು ಮಕ್ಕಳು ಇರುವುದಿಲ್ಲ. ಆದರೆ ದೇವತಾನುಗ್ರಹದಿಂದ ಗಂಡುಮಕ್ಕಳು ಜನಿಸುವರು. ಹೃದಯರೋಗ ಉಂಟಾಗುತ್ತದೆ. ತಂದೆಗೆ ಅನಿಷ್ಟ ಉಂಟಾಗುವುದು. ದೊಡ್ಡ ಹೊಟ್ಟೆ. ಯಾವ ಕೆಲಸ ಮಾಡಹೊರಟರೂ ವಿಘ್ನ ಉಂಟಾಗುವುದು.

ರವಿ ಆರನೇ ಮನೆಯಲ್ಲಿದ್ದರೆ ಕೆಲವೇ ಮಂದಿ ಜ್ಞಾತಿಗಳಿರುವರು. ಶತ್ರುನಾಶ,ಮೊಮ್ಮಗನನ್ನು ಕಾಣುವುದು. ಕೌಪೀನ ಧರಿಸಿಕೊಂಡಿರುವುದು, ಬುದ್ಧಿವಂತಿಕೆ, ಬಲವಂತ ಹಾಗೂ ಶತ್ರುವನ್ನು ಮರ್ದಿಸುವಂಥವನೂ ಆಗುವನು.

ಏಳನೇ ಮನೆಯಲ್ಲಿ ರವಿ ಇರುವ ಜಾತಕನಿಗೆ ವಿವಾಹ ತಡವಾಗಿ ಜರಗುತ್ತದೆ. ಹೆಂಗಸರಲ್ಲಿ ದ್ವೇಷ, ಪರಸ್ತ್ರೀ ಸಂಪರ್ಕ, ಪರದೇಶಗಳಲ್ಲಿ ಸಂಚಾರ, ಇತರರ ಮನೆಯಲ್ಲಿಭೋಜನಮಾಡುವುದು,ಹೆಂಗಸಿನ ಮೂಲಕ ಧನಪ್ರಾಪ್ತಿ, ಹೆಂಗಸರು ಹೇಳಿದಂತೆ ನಡೆದುಕೊಳ್ಳುವುದು ಉಂಟು.

ಎಂಟನೆಯ ಸ್ಥಾನದಲ್ಲಿ ರವಿ ಇದ್ದರೆ ಗಂಡುಮಕ್ಕಳಾಗುವುದು ಕಡಿಮೆ. ಪೂರ್ಣಾಯುಸ್ಸು. ಕಣ್ಣಿನ ರೋಗ ಉಂಟಾಗುವುದು. ದೇಹವು ದುರ್ಬಲವಾಗಿರುವುದು. ಧರ್ಮಬುದ್ಧಿ ಕಿಂಚಿತ್ತೂ ಇಲ್ಲದವನು ಆಗುತ್ತಾನೆ.

ಒಂಬತ್ತನೇ ಮನೆಯಲ್ಲಿ ರವಿ ಇರುವಾಗ ಜನಿಸಿದವನು ಸೂರ್ಯನೆ ಮೊದಲಾದ ದೇವತೆಗಳ ಭಕ್ತನಾಗುವನು. ಧಾರ್ಮಿಕ ಪ್ರವೃತ್ತಿ ಹೊಂದಿರುತ್ತಾನೆ. ತಪಸ್ವಿಯೂ, ಕೊಂಚ ಭಾಗ್ಯ ಉಳ್ಳವನೂ, ಉತ್ತಮವಾದ ಮಗನನ್ನು ಪಡೆದವನೂ ಆಗಿರುತ್ತಾನೆ. ಸುಖವಾಗಿರುವನು. ತಂದೆಯ ಕಡೆಯಿಂದ ಧನಲಾಭ. ತಾನೂ ಸ್ವಂತವಾಗಿ ಸಂಪಾದಿಸುತ್ತಾನೆ. ಜಗಳಗಂಟಿಕ ಸ್ವಭಾವ ಇರುತ್ತದೆ. ಗ್ರಂಥಿರೋಗಿ, ವ್ಯವಸಾಯದಲ್ಲಿ ಅಧಿಕ ಲಾಭ ಗಳಿಸುವನು.

ರವಿ ಹತ್ತನೆಯ ಮನೆಯಲ್ಲಿರುವವರು ಪ್ರಖ್ಯಾತರಾಗುತ್ತಾರೆ. ಧನ ಸಂಪಾದನೆ ಮಾಡುವ ಶಕ್ತಿ ಇರುತ್ತದೆ. ದೃಢವಾದ ಶರೀರ, ವಿಧ್ವಾಂಸ,

ಸಾಹಸಿ, ಸಂಗೀತಪ್ರಿಯ, ನಗರಾಧಿಕಾರಿ ಮತ್ತು ಒಳ್ಳೆಯ ಮಗನನ್ನು ಪಡೆದವನೂ ಆಗಿರುತ್ತಾನೆ.

ಹನ್ನೊಂದನೆ ಮನೆಯಲ್ಲಿ ರವಿ ಇದ್ದರೆ ಜಾತಕನು ಧನವಂತನಾಗುತ್ತಾನೆ. ಪಲ್ಲಕ್ಕಿ ಹೊಂದಿರುತ್ತಾನೆ. ಮನಸ್ಸು ದೃಢವಾದುದು. ಪ್ರಖ್ಯಾತನಾಗುತ್ತಾನೆ. ಬಹು ಜನ ಶತ್ರುಗಳಿರುತ್ತಾರೆ. ದೃಢ ಶರೀರ. ನ್ಯಾಯಮಾರ್ಗದಿಂದಲೇ ಹಣ ಸಂಪಾದಿಸುತ್ತಾನೆ.

ಹನ್ನೆರಡನೆಯ ಮನೆಯಲ್ಲಿ ರವಿ ಉಳ್ಳವನು ಪತಿತನಾಗಿರುತ್ತಾನೆ. ಅಂಗಗಳು ವಿಶಾಲವಾಗಿರುತ್ತವೆ. ವಿತಂತುವಿನೊಡನೆ ಸಂಬಂಧ ಹೊಂದಿರುತ್ತಾನೆ. ದರಿದ್ರನೂ ಕಳ್ಳನೂ ಆಗಿರುತ್ತಾನೆ.

ರವಿ ದೆಶೆ ಆರು ವರ್ಷ ನಡೆಯುತ್ತದೆ. ಕೃತ್ತಿಕೆ, ಉತ್ತರಾ, ಉತ್ತರಾಷಾಢ ನಕ್ಷತ್ರಗಳಲ್ಲಿ ಜನಿಸಿದವರಿಗೆ ಜನನ ಕಾಲದಿಂದ ರವಿ ದೆಶೆ ಆರಂಭ. ಈ ನಕ್ಷತ್ರಗಳಿಗೆ ರವಿ ನಕ್ಷತ್ರಗಳೆಂದೂ ಹೇಳುತ್ತಾರೆ.

ಅತ್ಯುಚ್ಚನಾಗಿರುವ ರವಿಯ ದೆಶೆಯಲ್ಲಿ ಹಸು, ಕುದುರೆ, ಆನೆ, ವಾಹನ, ವಸ್ತ್ರ, ಆಭರಣ, ಮುತ್ತುರತ್ನಗಳು ಲಭ್ಯ. ರಾಜನ ಸ್ನೇಹ, ಪುತ್ರ–ಮಿತ್ರ–ಕಳತ್ರ ಸುಖವೂ ದೊರಕುತ್ತದೆ. ಉಚ್ಚನಾದ ರವಿ ದೆಶೆಯಲ್ಲಿ ರಾಜ, ಸ್ವಜನಗಳಿಂದ ಸಂತೋಷ ಉಂಟಾಗುತ್ತದೆ. ದೇವ, ಬ್ರಾಹ್ಮಣ ಪೂಜೆ, ಅಪೂರ್ವವಾದ ಯಾತ್ರೆ ಮಾಡುವ ಯೋಗ ಲಭಿಸುವುದು. ಅತಿ ಮಿತ್ರ ಕ್ಷೇತ್ರದಲ್ಲಿರುವ ರವಿಯ ದೆಶೆಯಲ್ಲಿ ಭೂಮಿಯ ಒಡೆತನ, ಗ್ರಾಮಾಧಿಪತ್ಯ, ಯಶಸ್ಸು, ಸ್ವಜನರಿಂದ ಆನಂದ, ಗ್ರಂಥಗಳಲ್ಲಿ ತನ್ನ ಹೆಸರು ಹೊಗಳಿಸಿಕೊಳ್ಳುವುದೇ ಮೊದಲಾದ ಫಲಗಳುಂಟು. ರವಿ ಮಿತ್ರಕ್ಷೇತ್ರದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನ ಧಾನ್ಯ ಲಾಭ, ಹಸುಗಳು, ಅಧಿಕಾರವೃದ್ಧಿ, ಆಭರಣಗಳ ಲಾಭ ಕೊಡುವನು. ಸಮ ರಾಶಿಯಲ್ಲಿರುವ ರವಿಯ ದಶಾಕಾಲದಲ್ಲಿ ಬಂಧುಗಳಿಗೆ ಸುಖಶುಭ ಉಂಟಾಗುವುದು. ರವಿ ಶತ್ರುರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಅನಾವಶ್ಯಕ ಜಗಳ, ಧನಹಾನಿ, ಪರದೇಶವಾಸ, ಸ್ವಜನ ವಿರೋಧ, ಅಪಕೀರ್ತಿ, ಮನೋವ್ಯಥೆ ಉಂಟುಮಾಡುವನು. ಅತಿಶತ್ರುರಾಶಿಯಲ್ಲಿರುವ ರವಿಯ ದಶೆಯಲ್ಲಿ ಅನೇಕ ಕಷ್ಟಗಳು ಎದುರಾಗುವುವು. ಕಳ್ಳರು, ಅಗ್ನಿಯಿಂದ ಭಯ, ರಾಜಕೋಪ, ಮಾನಹಾನಿ, ಹಣ ಖರ್ಚು, ರಕ್ಷಕನ ನಾಶ ಉಂಟಾಗುವುದು.

ರವಿಯು ಜೊತೆ ನೀಚಗ್ರಹವಿದ್ದರೆ ರಾಜಭೀತಿ, ಅನಾರೋಗ್ಯ, ಸ್ಥಾನ ಚಲನ, ಪತಿಪುತ್ರರ ಹಾನಿ, ಪೋಷಕನಿಗೆ ವಿನಾಶವೂ ಘಟಿಸುವುದು. ರವಿ ಅತಿ ನೀಚನಾಗಿದ್ದರೆ ತನ್ನ ದಶಾಕಾಲದಲ್ಲಿ ಪತ್ನಿ-ಪುತ್ರ-ಬಂಧುಗಳ ವಿಚಿತ್ರವಾದ ನಾಶ, ಧನಹಾನಿ, ರೋಗ ಪೀಡಾವಿಫಲ ಉಂಟುಮಾಡುವನು. ಶುಭ ಸಂಬಂಧ ಇರುವ ರವಿಯ ದಶಾಕಾಲದಲ್ಲಿ ಮದುವೆ ಮುಂತಾದ ಶುಭಕಾರ್ಯಗಳು ನಡೆಯುವುವು. ರಾಜನ ಸ್ನೇಹ, ಸ್ವಜನರಿಂದ ಸಂತೋಷ, ಮಗ ಸ್ನೇಹಿತರು, ಪತ್ನಿ ವೃದ್ಧಿ ಆದಿಯಾಗಿ ನಡೆಯುವುದು. ಶುಭ ವೀಕ್ಷಣೆಯಿದ್ದರೂ ಹೀಗೆಯೇ. ಪಾಪಗ್ರಹ ದೃಷ್ಟಿ ಹೊಂದಿದ ರವಿ ಜ್ವರ ಮೊದಲಾದ ಕಾಯಿಲೆ, ಸ್ವಜನ ಹಾನಿ, ಭೂಮಿನಾಶ, ಸ್ಥಾನಭ್ರಷ್ಟತ್ವ ಇತ್ಯಾದಿ ಕಷ್ಟಗಳನ್ನು ತನ್ನ ದಶಾಕಾಲದಲ್ಲಿ ಕೊಡುವನು.

ರವಿ ಮೇಷರಾಶಿಯಲ್ಲಿದ್ದರೆ ಹಸು, ಕುದುರೆ, ಆನೆ, ಪತ್ನಿ ಲಾಭವನ್ನೂ, ಪಟ್ಟಣದ ಆಧಿಪತ್ಯ, ಆಭರಣಗಳು, ಸ್ತ್ರೀ-ಪುತ್ರ-ಮಿತ್ರರ ಸ್ನೇಹವನ್ನೂ ತನ್ನ ದಶೆಯಲ್ಲಿ ಉಂಟುಮಾಡುವನು. ವೃಷಭದಲ್ಲಿರುವ ರವಿಯಿಂದ ಭೂಲಾಭ, ಬಂಧು ಪೂಜ್ಯತೆ, ದೇವಬ್ರಾಹ್ಮಣಪೂಜೆ, ಸಜ್ಜನಿಕೆ, ಅಧಿಕ ಸಂಪತ್ತು ಲಭಿಸುವುದು. ರವಿ ಮಿಥುನದಲ್ಲಿದ್ದರೆ ಐಶ್ವರ್ಯ, ವಿದ್ಯೆ, ವಾಗ್ವಿಲಾಸ, ರಾಜನ ಸ್ನೇಹ ಸಂಗೀತ ಮೊದಲಾದವಿದ್ಯೆಗಳು ದೊರಕುವುದು. ಕಟಕರಾಶಿಯಲ್ಲಿರುವ ದಶೆಯಲ್ಲಿ ರಾಜಪ್ರೀತಿ, ಸಂತೋಷ ಪರಸ್ಥಳವಾಸ, ಭೂ ಧನ ಧಾನ್ಯ ವೃದ್ಧಿ ಉಂಟಾಗುವುದು. ರವಿ ಸಿಂಹರಾಶಿಯಲ್ಲಿದ್ದರೆ ರಾಜಪೂಜ್ಯತೆ, ಭೂ ಒಡೆತನ, ತೋಟ-ಭಾವಿ ಪ್ರತಿಷ್ಠಿಸುವುದು, ಪುತ್ರ ಜನನ, ಬಂಧು ಪೂಜ್ಯತೆಗಳನ್ನು ತನ್ನ ದಶಾಕಾಲದಲ್ಲಿ ನೀಡುವನು. ಕನ್ಯಾದಲ್ಲಿರುವ ರವಿ ದಶೆಯಲ್ಲಿ ರಾಜಭಯ, ಶತ್ರುಭಯ, ಅನಾರೋಗ್ಯ, ಸ್ವಜನರಲ್ಲಿ ವೈರತ್ವ, ಕೃಷಿ ಪಶುನಾಶ ಉಂಟಾಗುವುದು. ರವಿತುಲಾರಾಶಿಯಲ್ಲಿದ್ದರೆ ಧನಹಾನಿ, ಶತ್ರುಭೀತಿ, ಸೋದರನಾಶ, ಮಿತ್ರರೂ ಶತ್ರುಗಳಾಗುವುದು ಮೊದಲಾದ ಫಲಗಳು ಉಂಟಾಗುವುದು. ವೃಶ್ಚಿಕ ರಾಶಿಯಲ್ಲಿರುವ ರವಿಯ ದಶೆಯಲ್ಲಿ ಭೂಮಿ, ಧಾನ್ಯ ಲಭ್ಯವಾಗುವುದು. ಇಷ್ಟವಸ್ತು ದೊರಕುವುದು. ಗೈರಿಕಾದಿ ಧಾತುಗಳ ಸಂಪಾದನೆ ಆಗುತ್ತದೆ. ಧನುಸ್ಸಿನಲ್ಲಿರುವ ರವಿಯ ದಶಾಕಾಲದಲ್ಲಿ ತುಂಬಾ ಸುಖ, ಶುಭ, ಆರೋಗ್ಯ, ಶತ್ರುನಾಶ, ಪತ್ನೀಸಖ್ಯ ಉಂಟಾಗುವುದು. ರವಿ ಮಕರದಲ್ಲಿದ್ದರೆ

ಅವನ ದಶೆಯಲ್ಲಿ ವನಸಂಚಾರ, ಕಷ್ಟ, ಪಶುನಾಶ, ಸ್ವಜನ ಮಿತ್ರರಲ್ಲಿ ದ್ವೇಷ ಉಂಟಾಗುತ್ತದೆ. ಕುಂಭದಲ್ಲಿರುವ ರವಿಯು ದಶೆಯಲ್ಲಿ ಸದಾ ವಿವಾದ, ಮನ ಸ್ಸಿಗೆ ದುಃಖ ಇರುವುದು. ಏಕೆಂದರೆ ಮಕರ, ಕುಂಭರಾಶಿಗಳ ಅಧಿಪತಿ ಶನಿ. ರವಿಗೆ ಶತ್ರು. ರವಿ ಮೀನರಾಶಿಯಲ್ಲಿದ್ದರೆ ತುಂಬಾ ಲಾಭ, ಬಹು ಸುಖ, ಶತ್ರು ನಾಶ, ರಾಜನ ಸ್ನೇಹ ತನ್ನ ದಶೆಯಲ್ಲಿ ಕೊಡುವನು. ಆರೋಹದಲ್ಲಿರುವ ರವಿಯ ದಶೆಯಲ್ಲಿ ದೇಹಸೌಖ್ಯ, ರಾಜ ಪ್ರೀತಿ, ಪತ್ನಿ-ಪುತ್ರ-ಭೂವೃದ್ಧಿ, ಕುದುರೆ–ಹಸು ಲಾಭಗಳು ಉಂಟಾಗುವುವು. ಅವರೋಹ ರವಿಯ ದಶಾಕಾಲ ದಲ್ಲಿ ಧನಧಾನ್ಯನಾಶ, ಬಂಧು-ಸ್ತ್ರೀ-ಪುತ್ರ ವರ್ಗನಾಶ ಉಂಟಾಗುವುದು.

ಲಗ್ನದಲ್ಲಿರುವ ರವಿ ದಶೆಯಲ್ಲಿ ದೇಹೋಷ್ಣ ಹೀನತೆ, ಸ್ಥಾನಭ್ರಷ್ಟತ್ವ, ನೀತಿನಾಶ, ಪರಗೃಹವಾಸ, ಪರಾನ್ನ ಭೋಜನ ಲಭ್ಯ.

ರವಿ ಎರಡನೆಯ ಮನೆಯಲ್ಲಿದ್ದರೆ ಶರೀರಬಾಧೆ, ಪಶು–ಧನಹಾನಿ, ಭಾಗ್ಯನಾಶ, ಜಗಳ. ನೇತ್ರಕಾರಕನಾಗಿರುವುದರಿಂದ ಕಣ್ಣಿನ ತೊಂದರೆ ತನ್ನ ದಶೆಯಲ್ಲಿ ಕೊಡುವನು. ಮೂರನೆಯ ಮನೆಯಲ್ಲಿರುವ ರವಿಯ ದಶಾಕಾಲ ದಲ್ಲಿ ರಾಜತುಲ್ಯತ್ವ, ಸ್ವಜನರಿಂದ ಸಂತೋಷ, ದೇಶಾಧಿಪತ್ಯ, ಪಶು ಪುತ್ರ ಲಾಭ, ತುಂಬಾ ಸುಖ ಲಭಿಸುವುದು. ರವಿ ನಾಲ್ಕನೇ ಮನೆಯಲ್ಲಿದ್ದರೆ ರಾಜ್ಯಪ್ರದವಾದುದು ಅಥವಾ ಭೂಮಿಯನ್ನು ಕೊಡುವುದು. ವಿದ್ಯಾ ವಿನೋದ, ತೀರ್ಥಯಾತ್ರೆ, ವಸ್ತ್ರಾಭರಣ ಕ್ಷೇತ್ರ ಸಿದ್ಧಿ ಕೊಡುತ್ತದೆ. ಐದನೇ ಮನೆಯಲ್ಲಿರುವ ರವಿಯು ದಶೆಯಲ್ಲಿ ಪುತ್ರನಾಶ, ಬುದ್ಧಿಭ್ರಮಣೆ, ದಶೆಯ ಮಧ್ಯ ಕಾಲದಲ್ಲಿ ಪಿತೃವರ್ಗನಾಶ, ಅಂತ್ಯಭಾಗದಲ್ಲಿ ಮನೆಯಲ್ಲಿ ಮದುವೆ ನಡೆಯುವುದು. ಆರನೆಯ ಮನೆಯಲ್ಲಿರುವ ರವಿಯ ದಶಾಕಾಲದಲ್ಲಿ ತುಂಬಾ ಸುಖ, ಸ್ವಜನರಿಂದ ಸಂತೋಷ, ಮಂಗಳ ಉತ್ಸವ ಉಂಟಾಗುವುದು. ರವಿ ಏಳನೆಯ ಮನೆಯಲ್ಲಿದ್ದರೆ ದೇಶಸಂಚಾರ, ಪತ್ನಿಗೆ ಬಾಧೆ, ವಿಶಿಷ್ಟವಾದ ದ್ವೇಷ, ರಾಜಕೋಪ ತನ್ನ ದಶಾಕಾಲದಲ್ಲಿ ಉಂಟುಮಾಡುವನು. ಎಂಟನೇ ಮನೆಯಲ್ಲಿರುವ ರವಿಯ ದಶೆಯಲ್ಲಿ ಬಹಳ ಕಷ್ಟ ಲಭಿಸುವುದು. ಗುಲ್ಮಾದಿ ರೋಗಗಳು, ಶೂಲರೋಗ, ಅರಸನಿಂದ ಭೀತಿ ಉಂಟಾಗುವುದು. ರವಿ ಒಂಭತ್ತನೇ ಮನೆಯಲ್ಲಿದ್ದರೆ ಶುಭ, ಸಂಪತ್ತು, ಸನ್ಮಾನ, ಪಿತೃವರ್ಗದವರಿಗೆ ಆನಂದ, ಧರ್ಮ ಸಹಾಯ, ಕೆರೆ-ಭಾವಿ-ತೋಪು-ಕಟ್ಟೆ ನಿರ್ಮಾಣ, ತೀರ್ಥಸ್ನಾನ, ರಾಜ

ಪ್ರೀತಿ, ಸರ್ವಾರ್ಥಸಿದ್ಧಿ ಲಭ್ಯ. ಹತ್ತನೆಯ ಮನೆಯಲ್ಲಿರುವ ರವಿ ದಶೆಯಲ್ಲಿ ಬಹಳ ಲಾಭ, ಸತ್ಕೀರ್ತಿ, ಸ್ವಜನರಿಂದ ಸಂತೋಷ, ರಾಜಸ್ನೇಹ, ಭೂಷಣ ಪ್ರಾಪ್ತಿಯಾಗುವುದು.

ರವಿ ಹನ್ನೊಂದನೆಯ ಮನೆಯಲ್ಲಿದ್ದರೆ ರಾಜಸಮನಾದ ಅಧಿಕಾರ ಸಿದ್ಧಿ, ಭೂಧನ ಲಾಭ, ಪತ್ನೀ ಸೌಖ್ಯ, ಮನೆಯಲ್ಲಿ ವಿವಾಹ ಮಂಗಳಕಾರ್ಯ ತನ್ನ ದಶೆಯಲ್ಲಿ ಉಂಟುಮಾಡುವನು. ಹನ್ನೆರಡನೆ ಮನೆಯಲ್ಲಿರುವ ರವಿಯ ದಶಾ ಕಾಲದಲ್ಲಿ ಬಂಧು ವಿರೋಧ, ಧನಧಾನ್ಯ ಹಾನಿ, ಸ್ಥಾನನಾಶ, ರಾಜದ್ವೇಷ, ಜ್ವರ ಬಾಧೆ ಉಂಟಾಗುತ್ತದೆ.

ಕೇಂದ್ರ ದಲ್ಲಿರುವ ರವಿಯ ದಶೆಯಲ್ಲಿ ರಾಜಪೂಜ್ಯತೆ. ಧನ ಸಂಪಾದನೆ, ಯಜ್ಞ–ದಾನಾದಿ ಧರ್ಮಕಾರ್ಯ ಮಾಡುವುದು. ವಿದ್ಯಾಕೌಶಲ್ಯವುಂಟಾಗು ವುದು. ರವಿತ್ರಿಕೋಣದಲ್ಲಿ ಉಚ್ಚನಾಗಿದ್ದರೆ ತನ್ನ ದಶಾಕಾಲದಲ್ಲಿ ಶುಭವುಂಟು ಮಾಡುವನು. ಬಂಧು–ಸ್ನೇಹಿತರಲ್ಲಿ ಕಲ್ಯಾಣ, ಮನೆ ಲಾಭ, ಮನೆಯಲ್ಲಿ ಮದುವೆ ಉಂಟುಮಾಡುವನು. ಎಂಟು-ಹನ್ನೆರಡನೆ ಮನೆಗಳಲ್ಲಿರುವ ರವಿಯ ದಶೆಯಲ್ಲಿ ಜಗಳ, ರಾಜಭೀತಿ, ಸ್ಥಾನನಾಶ, ಧನಕ್ಷಯ ಉಂಟಾಗುವುದು.

ಸಿಂಹಲಗ್ನಕ್ಕೆ ಶನಿ, ಬುಧ, ಶುಕ್ರರು ಪಾಪಿಗಳು. ಕುಜ ಮಾತ್ರ ಶುಭ ದಾಯಕ. ಇವನೊಂದಿಗೆ ಗುರು ಸೇರಿದರೆ ರಾಜಯೋಗವಾಗುತ್ತದೆ. ಗುರು ಶುಕ್ರರ ಯುತಿ ಒಳ್ಳೇ ಫಲವನ್ನೇನೂ ಕೊಡುವುದಿಲ್ಲ. ಶನಿ ತನ್ನ ಭುಕ್ತಿಯಲ್ಲಿ ಮರಣವನ್ನುಂಟುಮಾಡದಿದ್ದರೂ ಮಾರಕನೇ ಸರಿ. ಬುಧ ಮುಂತಾದ ಪಾಪ ಗ್ರಹಗಳ ಭುಕ್ತಿಯಲ್ಲಿ ಮರಣ ಸಂಭವಿಸುತ್ತದೆ.

ನಕ್ಷತ್ರಗಳು ಇಪ್ಪತ್ತೇಳು. ರಾಶಿಗಳು ಹನ್ನೆರಡು. ಈ ಹನ್ನೆರಡು ರಾಶಿ ಗಳಿಗೆ ಒಂದೊಂದಕ್ಕೆ ಎರಡೂ ಕಾಲು ಎಂದರೆ ಒಂಬತ್ತು ನಕ್ಷತ್ರ ಪಾದಗಳು ಬರುತ್ತವೆ. ಆ ಪ್ರಕಾರ ಸಿಂಹರಾಶಿಗೆ ಮಖಾನಕ್ಷತ್ರದ 4 ಪಾದಗಳು, ಪುಬ್ಬ ನಕ್ಷತ್ರ 4 ಪಾದಗಳು ಹಾಗೂ ಉತ್ತರಾ ನಕ್ಷತ್ರದ ಮೊದಲನೆ ಪಾದ ಸೇರಿದೆ ಮಖಾ ಅನೂರಾಧೆ, ಮೃಗಶಿರಾ, ಸ್ವಾತಿ ನಕ್ಷತ್ರಗಳನ್ನು ಕೆಲವರು ಮಹಾ ನಕ್ಷತ್ರಗಳು ಎನ್ನುತ್ತಾರೆ. ಇದಕ್ಕೆ ಆಧಾರವೇನೋ ಗೊತ್ತಿಲ್ಲ.

ಮಖಾ ನಕ್ಷತ್ರದ ದೇವತೆ ಪಿತೃಗಳು. ಈ ನಕ್ಷತ್ರದಲ್ಲಿ ಜನಿಸಿದನು ಶಕ್ತಿವಂತ, ಬುದ್ಧಿಶಾಲಿ, ಅದೃಷ್ಟವಂತ ಹಾಗೂ ಒಲು ಆಸೆಯುಳ್ಳವನು, ಹಣ

ವಂತ, ಲೋಭಿ, ಹಣ ಸಂಪಾದಿಸುತ್ತಿರುತ್ತಾನೆ. ಮಕ್ಕಳಿರುತ್ತಾರೆ. ಬಂಧು ಬಳಗವುಂಟು. ಆಗಾಗ್ಗೆ ರೋಗ ಕಾಡುತ್ತಿರುತ್ತದೆ. ಈ ನಕ್ಷತ್ರದಲ್ಲಿ ಕಾಯಿಲೆ ಬಂದರೆ ಕ್ರೂರ. ಶಾಂತಿ ಅಗತ್ಯ. ಕಪಟಿಯೂ, ಪ್ರಬಲನೂ, ಹಟವಾದಿಯೂ ಆಗಿರುತ್ತಾನೆ. ಮೊದಲು ಕಾಮಾಸಕ್ತನಾಗಿದ್ದು ಕೊನೆಗೆ ವಿರಕ್ತನಾಗುವನು. ತಂತ್ರ ನಡೆಸುವನು, ಹಾವುಗಳನ್ನು ಜಯಿಸಬಹುದು. 12, 18, 33, 60, 83ನೇ ವರ್ಷಗಳಲ್ಲಿ ಗಂಡಾಂತರವಿರುತ್ತದೆ. ಪರಮಾಯುಷ್ಯ 87 ವರ್ಷಗಳು.

ಪುಬ್ಬಾ ಉಗ್ರನಕ್ಷತ್ರ. ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ಸಿಕ್ಕುವುದಿಲ್ಲ. ಜ್ವರ ಹಿಡಿದಲ್ಲಿ ಒಂದು ತಿಂಗಳು ಕ್ರೂರ. ಭೃಗು ದೇವತೆಗೆ ಶಾಂತಿ ಮಾಡಿಸುವುದು ಅಗತ್ಯ. ಇದರಲ್ಲಿ ಜನಿಸಿದವರಿಗೆ ಕಲಿಸುಖ ದೊರಕುವುದು. ಆರು ಗಂಡಾಂತರ ಕಾಲಗಳು ಕಳೆದರೆ 89 ವರ್ಷ ಆಯುರ್ದಾಯವಿದೆ.

ಉತ್ತರಾ ಮೊದಲನೆಯ ಪಾದದಲ್ಲಿ ಮಗು ಜನಿಸಿದರೆ ತಂದೆಗೆ ಒಂದು ತಿಂಗಳು ಕ್ರೂರ. ಆಮೇಲೆ ಶಾಂತಿ ಆಚರಿಸಿದರೆ ದೋಷ ಕಳೆಯುತ್ತದೆ. 84 ವರ್ಷ ಆಯುಸ್ಸು 8ನೇವಯಸ್ಸಿನಲ್ಲಿ ಬರುವ ಗಂಡಾಂತರ ಕಳೆದರೆ. ಈ ನಕ್ಷತ್ರದಲ್ಲಿ ಸಾಮಾನು ಹೋದರೆ ಮೂರು ದಿವಸಕ್ಕೆ ಸಿಕ್ಕುವುದು. ಜ್ವರ ಉತ್ತರಾ ನಕ್ಷತ್ರದಲ್ಲಿ ಆರಂಭವಾದರೆ ಏಳು ದಿನ ಕ್ರೂರ. ಆರ್ಯಮ ದೇವತೆಗೆ ಶಾಂತಿ ಮಾಡಬೇಕು.

ಚಂದ್ರ

ಚಂದ್ರ ತಾಯಿ, ಮನಸ್ಸು, ಬಟ್ಟೆ, ನೀರು, ವ್ಯವಸಾಯ, ಹೆಂಗಸಿನ ಮೂಲಕ ವಾಗಿ ಧನಾಗವು, ಹಸು, ಹಾಲು, ಬೆಳೆ, ಭತ್ತ, ರತ್ನ, ಶಂಖ, ನೀರಿನಲ್ಲಿ ಹುಟ್ಟುವ ವಸ್ತುಗಳು, ಬಿಳಿ ಛತ್ರಿ, ಚಾಮರ, ವೀರ್ಯ, ದೇಹಪುಷ್ಟಿ, ನಯರಸ ಪದಾರ್ಥಗಳು, ನೆಲ್ಲಿಕಾಯಿ, ತೇಜಸ್ಸು, ಆನಂದ ಇವುಗಳಿಗೆ ಕಾರಕ.

ಚಂದ್ರನಿಗೆ ಕಟಕ ಸ್ವಕ್ಷೇತ್ರ. ಉಚ್ಚರಾಶಿ ವೃಷಭ. ನೀಚಸ್ಥಾನ ವೃಶ್ಚಿಕ. ವೃಷಭ ಮೂಲತ್ರಿಕೋಣ. ಗ್ರಹರತ್ನ ಮುತ್ತು. ಬೆಳ್ಳಿ ಗ್ರಹ ಲೋಹ. ರವಿ, ಬುಧ ಮಿತ್ರರು. ಕುಜ, ಗುರು, ಶುಕ್ರ, ಶನಿ ಸಮರು.

ಲಗ್ನಾದಿಯಾಗಿ ಚಂದ್ರ ಹನ್ನೆರಡು ರಾಶಿಗಳಲ್ಲಿದ್ದರೆ ಏನು ಫಲ ಉಂಟಾಗುತ್ತದೆ ತಿಳಿಯಬೇಕು. ಲಗ್ನದಲ್ಲಿ ಚಂದ್ರ ಇದ್ದರೆ ಕುರೂಪಿಯಾಗುವನು. ವ್ಯಾಧಿಗಳು ಕಾಡಿಸುತ್ತವೆ. ಕಿವಿಯ ಒಳಗೆ ಗೆಂಟಾಗುವುದು. ಜಲ ಸಂಬಂಧವಾದ ಕಾಯಿಲೆ ಬರುತ್ತವೆ. ದೇಹಸ್ಥೂಲ, ವಾಯುಶರೀರ. ವ್ಯವ ಸಾಯದಿಂದ ಅನುಕೂಲ. ನೀರುಮಿಶ್ರಿತವಾದ ಅನ್ನವನ್ನು ತಿನ್ನುವಂಥವನು. ಸಹೋದರರಿರುತ್ತಾರೆ. ಉನ್ಮತ್ತ. ಆಗಾಗ್ಯೆ ಕೊಂಚ ಕಾಯಿಲೆಗಳು ಕಾಡು ತ್ತಿರುತ್ತವೆ. ಅಲ್ಲದೆ ಕಡು ಮೂರ್ಖನೂ ಆಗಿರುತ್ತಾನೆ.

ಎರಡನೇ ಮನೆಯಲ್ಲಿ ಚಂದ್ರ ಇದ್ದರೆ ಒಳ್ಳೆಯದಾಗತಕ್ಕವನು. ಬುದ್ಧಿ ವಂತ, ಧನವಂತನಾಗಿ ರಾಜನಿಂದ ಪೂಜಿತನಾಗುವನು. ಚಂದ್ರನಿಗೆ ಪಾಪ ಗ್ರಹ ಯುತಿ ಇದ್ದರೆ ವಿದ್ಯೆಗೆ ಅಡ್ಡಿ ಹೆಚ್ಚು. ಉತ್ತಮ ಕುಲದ ಹೆಂಡತಿ ದೊರಕುವಳು. ಸೌಂದರ್ಯಭರಿತವಾದ ಮುಖ, ಮೃದು ಮಾತು, ಕಣ್ಣಿ ನದು ವಕ್ರದೃಷ್ಟಿ.

ಚಂದ್ರ ಮೂರನೆಯ ಮನೆಯಲ್ಲಿದ್ದರೆ ಸಾಮಾನ್ಯಳಾದ ಸೋದರಿ ಉಳ್ಳವನು. ವಾಯುರೋಗ ಪೀಡಿಸುತ್ತದೆ. ಮೂಲರೋಗಿ ಆಗಿರುತ್ತಾನೆ. ತಾಯಿಯ ಹಾಲು ಬಹು ಕಡಿಮೆ ಕುಡಿಯುವನು. ಕೃಶ ಶರೀರ. ಯಾವ

ಕೆಲಸ ಮಾಡಹೋದರೂ ವಿಘ್ನ. ಅನೇಕ ಮಂದಿ ಸಹೋದರರು. ವಿದ್ಯಾಭಂಗ. ಕ್ಷಯವನ್ನುಂಟುಮಾಡುವನು. ಪ್ರತಾಪಶಾಲಿ ಎನಿಸುತ್ತಾನೆ.

ನಾಲ್ಕನೆಯ ಮನೆಯಲ್ಲಿ ಚಂದ್ರ ಇದ್ದರೆ ಕುದುರೆ ಸವಾರಿ ಮಾಡುವನು. ಸುಗಂಧದ್ರವ್ಯ, ಹೂವು, ಬಟ್ಟೆಗಳೆಂದರೆ ಆಸೆ. ಅನೇಕ ಜನರನ್ನು ಪೋಷಿಸುವನು. ವಿದ್ಯಾವಿನಯಗಳಿಂದ ಶೋಭಿಸುವನು.

ಐದನೇ ಮನೆಯಲ್ಲಿ ಚಂದ್ರ ಇದ್ದರೆ ಪಶುಸಮೃದ್ಧಿ ಇರುತ್ತದೆ. ಸುಂದರಿಯಾದ ಪತ್ನಿ ಲಭಿಸುತ್ತಾಳೆ. ಹಾಲು ಸಮೃದ್ಧಿಯಾಗಿರುತ್ತದೆ. ಮಾಯಾವಿ ಮಂತ್ರ ಉಪಾಸನೆ ಮಾಡುವವನೂ, ಡಾಂಭಿಕನೂ ಆಗಿರುತ್ತಾನೆ. ಅನೇಕ ಮಂದಿ ಗಂಡುಮಕ್ಕಳಿರುತ್ತಾರೆ. ವಿದ್ಯಾಭ್ಯಾಸಕ್ಕೆ ವಿಘ್ನಗಳೊದಗುತ್ತವೆ.

ಚಂದ್ರ ಆರನೇ ಮನೆಯಲ್ಲಿದ್ದು ದಾದರೆ ಜಾತಕನು ಬಹು ಬಡವನಾಗುವನು. ವಿಧವೆಯೊಡನೆ ಸಂಗ ಬೆಳಿಸುವನು, ಧನಹೀನನಾಗಿರುತ್ತಾನೆ. ಕಳ್ಳ ಮತ್ತು ಕುಡುಕನಾಗಿರುವನು. ಅಕಾರಣವಾಗಿ ಜನರಲ್ಲಿ ವಿರೋಧ ಘಟಿಸುವುದು. ಎಳೆತನದಲ್ಲಿ ಬೇರೊಬ್ಬ ಹೆಂಗಸಿನ ಸ್ತನ್ಯಪಾನದಿಂದ ಪೋಷಿತನಾಗುವನು. ಆಜ್ಞೆಯನ್ನು ಪಾಲಿಸುವವನೂ, ಕ್ಷೀಣವಾಗಿರುವವನೂ ಆಲಸಿಯೂ ಆಗುವನು. ಜ್ಞಾತಿ, ಶತ್ರುಗಳನ್ನು ಪೀಡಿಸುವಂತಹನು. ಬುದ್ಧಿವಂತ.

ಏಳರಲ್ಲಿ ಚಂದ್ರ ಇದ್ದಲ್ಲಿ ಸ್ತ್ರೀಲೋಲನಾಗುತ್ತಾನೆ. ಧೂರ್ತ ಬುದ್ಧಿ ಇರುತ್ತದೆ. ಉತ್ತಮಳಾದ ಹೆಂಡತಿಯನ್ನು ಪಡೆಯುವನು. ಒಳ್ಳೆಯ ಕುಟುಂಬ ಹೊಂದಿರುತ್ತಾನೆ. ಸೊಂಟದಲ್ಲಿ ಗಂಟು ಬೆಳೆದಿರುತ್ತದೆ. ಚಂದ್ರನೊಡನೆ ಶುಭಗ್ರಹ ಇದ್ದರೆ ಒಬ್ಬಳೆ ಹೆಂಡತಿ. ಆದರೆ ಪಾಪಗ್ರಹ ಸೇರಿದರೆ ದ್ವಿಪತ್ನಿಯೋಗ ಉಂಟಾಗುತ್ತದೆ.

ಚಂದ್ರ ಎಂಟನೇ ಸ್ಥಾನದಲ್ಲಿದ್ದರೆ ಪುತ್ರರ ಸಂಖ್ಯೆ ಕಡಿಮೆ. ಪಿತ್ತ ಪ್ರಕೃತಿ, ರೋಗಪೀಡಿತನಾಗುವನು. ಕಣ್ಣಿನ ಬೇನೆ ಇರುವುದು. ಕೃಶದೇಹ, ತಾಯಿಗೆ ಅನಿಷ್ಟಕರ, ತಾಯಿಯ ಪಕ್ಷಕ್ಕೆ ವಿರೋಧಿಯಾಗಿರುತ್ತಾನೆ. ಚಂದ್ರನೊಡನೆ ಪಾಪಗ್ರಹವೂ ಸೇರಿದರೆ ಬಾಲಾರಿಷ್ಟ ಉಂಟಾಗುವುದು. ಶುಭಗ್ರಹದ ಯುತಿ ಇದ್ದರೂ ಅಥವಾ ನೋಡಿದರೂ ಬಾಲಾರಿಷ್ಟ ದೋಷ ಪರಿಹಾರವಾಗುತ್ತದೆ.

ಒಂಬತ್ತನೆ ಮನೆಯಲ್ಲಿ ಚಂದ್ರ ಇದ್ದರೆ ಜಾತಕನು ಅನೇಕ ವಿಷಯ

ಗಳನ್ನು ತಿಳಿದವನಾಗಿರುತ್ತಾನೆ. ಬಹು ಬುದ್ಧಿವಂತ. ಕೆರೆ ಬಾವಿಗಳನ್ನು ಕಟ್ಟಿಸಿ ವಿಖ್ಯಾತನಾಗುತ್ತಾನೆ. ಮಕ್ಕಳ ಭಾಗ್ಯ ಉಂಟು. ಭಾಗ್ಯವಂತ ಬ್ರಾಹ್ಮಣರು, ಗುರುಗಳನ್ನು ಪೂಜಿಸುವಂಥವನು. ಕೃಷಿಯಿಂದ ಫಲವಿದೆ. ಶೂರ, ಚಂದ್ರನು ಕ್ಷೀಣನಾಗಿ ಪಾಪಗ್ರಹಯುತನಾಗಿದ್ದರೆ ಬಾಲಾರಿಷ್ಟ ಉಂಟಾಗುತ್ತದೆ. ಅದೇ ಶುಭಗ್ರಹದ ಜೊತೆಗಿದ್ದರೆ ಅರಿಷ್ಟವು ಪರಿಹಾರವಾಗುತ್ತದೆ.

ಹತ್ತನೆಯ ಭಾವದಲ್ಲಿ ಚಂದ್ರ ಉಳ್ಳವನು ಕಾಮಾತುರನಾಗುತ್ತಾನೆ. ವಿಧವೆಯ ಸಂಗ ಮಾಡುತ್ತಾನೆ. ಕಾರ್ಯವಾದಿ. ಹಣವಂತನಾಗಿ, ದೀರ್ಘಾಯುಷಿಯೂ ಆಗಿರುತ್ತಾನೆ. ಕೆಲಸ ಮಾಡುತ್ತಿರುತ್ತಾನೆ. ದೇವಾಲಯದಲ್ಲಿ ಕೊಳ ಕಟ್ಟಿಸುವನು. ಹೆಂಗಸರಲ್ಲಿ ವಿರೋಧ ಬರುತ್ತದೆ. ಸಜ್ಜನರಲ್ಲಿ ಭಕ್ತಿ.

ಜಾತಕನಿಗೆ ಹನ್ನೊಂದನೆಯ ಮನೆಯಲ್ಲಿ ಚಂದ್ರ ಇದ್ದರೆ ಬಹು ವಿಷಯಗಳನ್ನು ತಿಳಿದವನಾಗುತ್ತಾನೆ. ಪುತ್ರವಂತ, ಪರೋಪಕಾರಿ, ವಿದ್ಯಾಸಂಪನ್ನ, ಯೋಗ್ಯ, ಸ್ಥಿತಿವಂತ, ಕೀರ್ತಿಶಾಲಿಯಾಗುವನು. ಧನಲಾಭ, ವ್ಯವಸಾಯ ಅಭಿವೃದ್ಧಿ, ಧನವನ್ನು ದಾನ ಮಾಡುವನು ಮತ್ತು ನ್ಯಾಯ ಮಾರ್ಗದಿಂದ ಸಂಪಾದನೆ ಮಾಡುತ್ತಾನೆ.

ಚಂದ್ರ ಹನ್ನೆರಡನೆಯ ಮನೆಯಲ್ಲಿದ್ದರೆ ದುರಾನ್ನವನ್ನು ಊಟ ಮಾಡುವವನಾಗುತ್ತಾನೆ. ಕೆಟ್ಟ ಮಾತು ಆಡತಕ್ಕವನು ಹಾಗೂ ಹೆಸರುಳ್ಳವನು, ದಾಯಾದಿಗಳು ಬಹಳ. ಅಂಗಹೀನನೂ, ಕ್ಷುದ್ರಗುಣವುಳ್ಳವನೂ ಆಗಿರುತ್ತಾನೆ.

ಚಂದ್ರ ದಶೆ ನಡೆಯುವುದು ಹತ್ತು ವರ್ಷ. ರೋಹಿಣಿ, ಹಸ್ತ, ಶ್ರವಣ ನಕ್ಷತ್ರ ಜಾತಕರಿಗೆ ಜನನಕಾಲದಲ್ಲಿ ಚಂದ್ರದಶೆ. ಅತ್ಯುಚ್ಚನಾಗಿರುವ ಚಂದ್ರನ ದಶೆಯಲ್ಲಿ ಉಚ್ಚ ಅಧಿಕಾರ, ತನ್ನನ್ನು ಕುರಿತು ಕವಿತ್ವನಡೆಯುವುದು. ಚಂದ್ರ ಉಚ್ಚರಾಶಿಯಲ್ಲಿದ್ದರೆ ಧನಲಾಭ, ಅತೀವ ಸುಖ, ಸ್ವಜನ ಸಂತೋಷ ಯುದ್ಧ –ವಿವಾದಗಳಲ್ಲಿ ಜಯ, ವಸ್ತ್ರಾಭರಣ ಲಾಭ-ತನ್ನ ದಶೆಯಲ್ಲಿ ಕೊಡುವನು.

ಮೂಲ ತ್ರಿಕೋಣದಲ್ಲಿರುವ ಚಂದ್ರನ ದೆಶೆಯಲ್ಲಿ ವಸ್ತ್ರಾಭರಣ, ವಾಗ್ವಿಲಾಸ, ಸುಗಂಧಪುಷ್ಪ, ಕೀರ್ತಿಗಳನ್ನು ಪಡೆಯುವನು.

ಸ್ವಕ್ಷೇತ್ರಗತ ಚಂದ್ರನಾದರೆ ತನ್ನ ದಶಾಕಾಲದಲ್ಲಿ ಸತ್ಕೀರ್ತಿಲಾಭ, ಯುದ್ಧದಲ್ಲಿ ಶತ್ರುನಾಶ, ರಾಜಸ್ನೇಹ, ಅಧಿಕಾರ ಉಂಟುಮಾಡುವನು.

ಚಂದ್ರ ಮಿತ್ರಕ್ಷೇತ್ರದಲ್ಲಿದ್ದರೆ ತನ್ನ ದಶೆಯಲ್ಲಿ ಮಿತ್ರರು, ದ್ರವ್ಯ, ಮನೆ, ಧಾನ್ಯ ಸಂಗೀತಾದಿಗಳಿಂದ ವಿನೋದ, ದ್ವೀಪಾಂತರದಲ್ಲಿರುವ ಕೆಂಪು ವಸ್ತ್ರಗಳನ್ನೂ ದೊರಕಿಸಿಕೊಡುವನು. ಸಮರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ರಾಜ ದರ್ಶನ, ಪತ್ನಿ–ಪುತ್ರ, ಭೃತ್ಯವರ್ಗದವರಿಗೆ ಅಲ್ಪಸುಖ ಉಂಟಾಗುವುದು. ಶತ್ರುರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ಶತ್ರು ವೃದ್ಧಿ, ಮನೋವಿಕಾರ, ಭೂಮಿ–ಕಳತ್ರ ವರ್ಗದಲ್ಲಿ ಹಾನಿ, ಎಲ್ಲರಲ್ಲಿ ದ್ವೇಷ ಉಂಟಾಗುವುದು. ಚಂದ್ರ ಅತಿಶತ್ರು ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ದೇಹ ಶೈಥಿಲ್ಯ ಕಾಲರಾ ಮೊದ ಲಾದ ರೋಗಬಾಧೆ, ರಾಜಭಯ ಉಂಟಾಗುವುದು. ನೀಚರಾಶಿಯಲ್ಲಿರುವ ಚಂದ್ರನ ದಶಾಕಾಲದಲ್ಲಿ ನೀಚಾನ್ನ ಭೋಜನ, ನೀಚಸಹವಾಸ, ಬಂಧು–ಸದ್ಗುರು ವಿರೋಧ, ಸ್ವಸ್ಥಾನ ಚಲನೆ ಉಂಟುಮಾಡುವನು. ಚಂದ್ರ ಅತಿ ನೀಚರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜದಂಡ, ಗುಲ್ಮ, ಅತಿಸಾರ, ಗ್ರಹಿಣಿ, ಕ್ಷಯರೋಗಗಳನ್ನು, ಬಂಧುನಾಶವನ್ನೂ ಕೊಡುತ್ತಾನೆ. ಶುಭರಾಶಿ ಯಲ್ಲಿರುವ ಚಂದ್ರನ ದಶೆಯಲ್ಲಿಶುಭಪ್ರದವಾದುದು ನಡೆಯುವುದು. ವಿವಾದ ದಲ್ಲಿ ಜಯ, ರಾಜದರ್ಶನ ಆಗುವುದು. ಪಾಪರಾಶಿಯಲ್ಲಿರುವ ಚಂದ್ರನ ದಶೆ ಯಲ್ಲಿ ಪಾಪಫಲವೇ ಜರಗುವುದು. ಉದ್ಯೋಗ ಭಂಗ, ಆಲಸ್ಯ, ಮನಸ್ತಾಪ, ಧನವ್ಯಯ ಉಂಟಾಗುವುದು. ಆರೋಹ ರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ಶುಭಫಲ, ಕೀರ್ತಿ, ಆಭರಣ, ವಸ್ತುಗಳ ಲಾಭ ಉಂಟಾಗುವುದು. ಅವರೋಹಿ ಚಂದ್ರನ ದಶಾಕಾಲದಲ್ಲಿ ಯತ್ನಕಾರ್ಯನಾಶ, ಪಿತ್ತಪ್ರಕೋಪದಿಂದ ತಲೆ ನೋವು, ಮೂತ್ರ ಕೃಚ್ಛ್ರ ಮುಂತಾದ ರೋಗಗಳು ಬಾಧಿಸುವುವು.

ಚಂದ್ರ ಮೇಷರಾಶಿಯಲ್ಲಿದ್ದರೆ ತನ್ನ ದಶೆಯಲ್ಲಿ ಧನಲಾಭ, ರಾಜನ ಸ್ನೇಹ, ಉತ್ತಮ ವಸ್ತ್ರಲಾಭ, ಸ್ವಜನಸೌಖ್ಯ ಉಂಟುಮಾಡುವನು. ವೃಷಭ ರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ಯಶಸ್ಸು, ವಸ್ತ್ರಲಾಭ, ಕ್ಷೇತ್ರವೃದ್ಧಿ, ಕೃಷಿಯಿಂದ ಲಾಭ, ಹಸು–ಕುದುರೆಯಿಂದ ಲಾಭ ಹೊಂದುವನು. ಮಿಥುನ ರಾಶಿಯಲ್ಲಿರುವ ಚಂದ್ರನ ದಶಾಕಾಲದಲ್ಲಿ ವಿದ್ಯೆಯಿಂದಾಗಿ ಸನ್ಮಾನ, ಜ್ಞಾನಾ ಧಿಕ್ಯ, ತಪಸ್ಸಿದ್ಧಿ, ಗಣಿತದಲ್ಲಿ ಆಸಕ್ತಿ ಉಂಟಾಗುವುದು. ಚಂದ್ರ ಕಟಕ ರಾಶಿ ಯಲ್ಲಿದ್ದರೆ ತನ್ನ ದಶೆಯಲ್ಲಿ ಧನಧಾನ್ಯ ಉದ್ಯೋಗ ಲಾಭ, ರಾಜನ ಸ್ನೇಹ, ಕ್ಷೇತ್ರವೃದ್ಧಿಯನ್ನೂ ಕೊಡುವನು. ಸಿಂಹರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ

ವಿದ್ಯಾಭ್ಯಾಸ ಮುಂತಾದ ಶಾಸ್ತ್ರತತ್ವವನ್ನು ತಿಳಿದವನೂ, ಬ್ರಾಹ್ಮಣ ಪೂಜೆಯಲ್ಲಿ ಆಸಕ್ತನೂ, ಉತ್ತಮವಾದ ರತ್ನಗಳ ಲಾಭವನ್ನೂ ಹೊಂದುವನು. ಕನ್ಯಾರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ಶತ್ರುಬಾಧೆ, ತಾಯಿಗೆ ಅನಿಷ್ಟ, ದಾಯಾದಿಗಳಲ್ಲಿ ಕಲಹ ಉಂಟಾಗುವುದು. ಚಂದ್ರ ತುಲಾರಾಶಿಯಲ್ಲಿರುವಾಗ ತನ್ನ ದಶೆಯಲ್ಲಿ ಧನಪ್ರಾಪ್ತಿ, ಶತ್ರುನಾಶ, ಕೀರ್ತಿ, ಯಾತ್ರಾಫಲ, ಸತ್ಕರ್ಮ ಸಿದ್ಧಿಯನ್ನು ಉಂಟುಮಾಡುವನು. ವೃಶ್ಚಿಕರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ರಾಜವಿರೋಧ, ಬಂಧುನಾಶ, ಯತ್ನಕಾರ್ಯ ವಿನಾಶ, ಧನನಷ್ಟ, ಮಾನಹಾನಿ ಹೊಂದುವನು. ಧನುಸ್ಸಿನಲ್ಲಿರುವ ಚಂದ್ರನ ದಶೆಯಲ್ಲಿ ಪತ್ನಿ ಪುತ್ರರ ಸುಖ, ಬಂಧುಗಳಲ್ಲಿ ವಿವಾಹ, ಉತ್ತಮ ರತ್ನಾಭರಣ ಲಾಭ. ಪಶು ಧಾನ್ಯ ಭೂಮಿ ಅಭಿವೃದ್ಧಿಯನ್ನು ಉಂಟುಮಾಡುವನು. ಚಂದ್ರ ಮಕರರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕ್ಷೇತ್ರಾಭಿವೃದ್ಧಿ, ಬುದ್ಧಿ ಕುಶಲತೆ, ಸತ್ಕೀರ್ತಿ, ಯಾತ್ರಾಫಲ, ವಸ್ತ್ರಾದಿಲಾಭ ಕೊಡುವನು. ಕುಂಭರಾಶಿಯಲ್ಲಿರುವ ಚಂದ್ರನ ದಶಾಕಾಲದಲ್ಲಿ ರಾಜಭೀತಿ, ಭೂನಷ್ಟ, ಶತ್ರು ಕಲಹ, ಸ್ಥಾನಭ್ರಂಶ, ಮನೋವ್ಯಥೆ ಅನುಭವಿಸಬೇಕಾಗುವುದು. ಮೀನರಾಶಿಯಲ್ಲಿರುವ ಚಂದ್ರನ ದಶೆಯಲ್ಲಿ ರಾಜತ್ವ, ದೇವತಾ ಪೂಜೆ, ಬ್ರಾಹ್ಮಣಪೂಜೆ. ಇಷ್ಟಾರ್ಥ ಸಿದ್ಧಿ ಹೊಂದುವನು.

ಲಗ್ನದಲ್ಲಿರುವ ಚಂದ್ರನ ದಶೆಯಲ್ಲಿ ದೇಹಾರೋಗ್ಯ, ಶಯ್ಯಾದಿಸೌಖ್ಯ, ಆಭರಣ ಪ್ರಾಪ್ತಿ, ರಾಜನ ಮಿತ್ರತ್ವ, ಕೀರ್ತಿ, ಅಭಿವೃದ್ಧಿ ಪಡೆಯುವನು. ಚಂದ್ರ ಎರಡನೇ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಪ್ರಾಪ್ತಿ, ದೇಹ ಸೌಖ್ಯ, ಕುಟುಂಬ ರಕ್ಷಣೆಯಲ್ಲಿ ಆಸಕ್ತಿ, ಸತ್ಕೀರ್ತಿ, ವಿದ್ಯಾಧನಧಾನ್ಯ ಲಾಭ ಕೊಡುವನು. ಮೂರನೆಯ ಮನೆಯಲ್ಲಿರುವ ಚಂದ್ರನ ದಶೆಯಲ್ಲಿ ಶೌರ್ಯ, ಗಾಂಭೀರ್ಯ, ಸಹೋದರರ ಅಭಿವೃದ್ಧಿ, ರತ್ನಾಭರಣ ಲಾಭ ಉಂಟುಮಾಡುವನು. ನಾಲ್ಕನೇ ರಾಶಿಯಲ್ಲಿರುವ ಚಂದ್ರನ ದಶಾಕಾಲದಲ್ಲಿ ಕ್ಷೇತ್ರಾಭಿವೃದ್ಧಿ, ಗೃಹಲಾಭ, ಬಂಧುವಿಗೆ ಉಪಕಾರ, ಅನೇಕ ವಾಹನ ಪ್ರಾಪ್ತಿ, ವಿದ್ಯಾವಿವಾದ ಯುದ್ಧದಲ್ಲಿ ಜಯ ಕೊಡುವನು. ಚಂದ್ರ ಐದನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಶುಭತ್ವ, ಸಂತೋಷ, ಪುತ್ರ ಜನನ, ವಿದ್ಯಾವಿನೋದ, ಧನ, ಪ್ರಾಪ್ತಿ. ಸುಖ, ಪತ್ನಿಪುತ್ರ ಸೌಖ್ಯ, ಬ್ರಾಹ್ಮಣಪೂಜೆ, ಮಂತ್ರಸಿದ್ಧಿ ಉಂಟು

ಮಾಡುವನು. ಆರನೇ ಮನೆಯಲ್ಲಿರುವ ಚಂದ್ರನ ದಶೆಯಲ್ಲಿ ಕ್ಷಯರೋಗ, ವಾಯುಗುಲ್ಮಭಯ, ತಾಯಿಯೊಡನೆ ಜಗಳ, ಬಂಧುವಿಯೋಗ, ಬುದ್ಧಿನಾಶ ಸಂಭವಿಸುವುದು. ಏಳನೇ ಮನೆಯಲ್ಲಿರುವ ಚಂದ್ರನ ದಶೆಯಲ್ಲಿ ಮಡದಿ ಮಗ ಬಂಧು ಸೌಖ್ಯ. ಮನೋವಿಲಾಸ, ಉತ್ತಮ ಆಧಿಪತ್ಯ, ತೀರ್ಥಯಾತ್ರಾಫಲ ಪ್ರಾಪ್ತವಾಗುತ್ತದೆ. ಚಂದ್ರ ಎಂಟನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕ್ಷಯಗ್ರಹಿಣಿ ಮೊದಲಾದ ರೋಗಗಳು, ಮೃತ್ಯುಪ್ರದವಾಗುವುವು. ಪತ್ನಿ ಪುತ್ರರ ಹಾನಿ ಸಹಾ ಉಂಟಾಗುವುದು. ಒಂಬತ್ತನೇ ಮನೆಯಲ್ಲಿರುವ ಚಂದ್ರನ ದಶೆಯಲ್ಲಿ ಕೆರೆ–ಬಾವಿ–ತೋಟಗಳ ಪ್ರತಿಷ್ಠೆ, ದೇವಬ್ರಾಹ್ಮಣ ಪೂಜೆ, ಧರ್ಮ ಕಾರ್ಯಸಿದ್ಧಿ ಲಭಿಸುವುದು. ಹತ್ತನೆಯ ಮನೆಯಲ್ಲಿರುವ ಚಂದ್ರನ ದಶೆಯಲ್ಲಿ ಯಜ್ಞಾದಿಗಳಿಂದ ಕೀರ್ತಿವೃದ್ಧಿ, ಅನೇಕ ಕರ್ಮಗಳ ಸಿದ್ಧಿ, ದೇಹ ಸೌಖ್ಯ, ಲಾಭ ಹೊಂದುವನು. ಚಂದ್ರ ಹನ್ನೊಂದನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಲಾಭ, ಪುತ್ರಲಾಭ. ಬಂಧುಗಳಿಗೆ ಸಂತೋಷ, ರತ್ನ ವಸ್ತ್ರಾಭರಣ ಪ್ರಾಪ್ತಿ ಉಂಟುಮಾಡುವನು. ಹನ್ನೆರಡನೇ ಮನೆಯಲ್ಲಿರುವ ಚಂದ್ರನ ದಶೆಯಲ್ಲಿ ದೇಹತಾಪ, ಕಾರ್ಯಹಾನಿ, ಸ್ತ್ರೀಸುತನಾಶ, ಹಸು ನಷ್ಟ, ಭೂ ನಾಶವನ್ನೂ ಹೊಂದುತ್ತಾನೆ.

ಕೇಂದ್ರದಲ್ಲಿರುವ ಚಂದ್ರನ ದಶೆಯಲ್ಲಿ ರಾಜಾನುಗ್ರಹ, ಉತ್ಸಾಹ, ಧನ ವಾಹನ ಸಿದ್ಧಿ ಮೊದಲಾದ ಶುಭ ಫಲಗಳು ಜರುಗುವುವು. ತ್ರಿಕೋಣಗಳಲ್ಲಿರುವ ಚಂದ್ರನ ದಶೆಯಲ್ಲಿ ರಾಜ ಪ್ರಸಾದದಿಂದ ಅಧಿಕಾರಲಾಭವುಂಟಾಗುವುದು. 6–8 ನೇ ಮನೆಗಳಲ್ಲಿರುವ ಚಂದ್ರನ ದಶಾಕಾಲದಲ್ಲಿ ಭಯವುಂಟಾಗುತ್ತದೆ. ಬಹಳ ಕಷ್ಟ, ಸಮಾನ ಜನರ ಹಾನಿ ಸಂಭವಿಸುತ್ತದೆ.


ಚಂದ್ರನ ರಾಶಿ ಕಟಕ, ಕಟಕ ಲಗ್ನಕ್ಕೆ ಶುಕ್ರ, ಶನಿ. ಬುಧ ಪಾಪಿಗಳು ಕುಜ ಗುರು ಶುಭಪ್ರದರು. ಇವರಿಬ್ಬರೂ ಸೇರಿದರೆ ರಾಜಯೋಗವನ್ನುಂಟು ಮಾಡುವರು. ರವಿ ತನ್ನ ಭುಕ್ತಿಯಲ್ಲಿ ಮರಣವುಂಟುಮಾಡುವುದಿಲ್ಲ. ಶುಕ್ರ ಮುಂತಾದವರು ಮಾರಕರಾಗುವರು.

ಕಟಕ ರಾಶಿಗೆ ಸೇರುವ ನಕ್ಷತ್ರಗಳೆಂದರೆ ಪುನರ್ವಸು ಕೊನೆಯ ಪಾದ, ಪುಷ್ಯ, ಆಶ್ಲೇಷ. ಶ್ರೀರಾಮ ಜನಿಸಿದ್ದು ಪುನರ್ವಸು ನಕ್ಷತ್ರದಲ್ಲಿ, ಇದರಲ್ಲಿ ಕಳೆದುಹೋದ ವಸ್ತು ಸಿಗುವುದಿಲ್ಲ. ಆದರೆ ಆರಂಭಿಸಿದ ಕೆಲಸಗಳು ಬೇಗ

ನಡೆಯುತ್ತವೆ. ಜ್ವರ ಬಂದರೆ 7 ನೇ ದಿನ ಕ್ರೂರವಾದರೂ ಪ್ರಾಣಭಯವಿಲ್ಲ. ದೇವತೆ ಅದಿತಿ. ಈ ನಕ್ಷತ್ರದಲ್ಲಿ ಜನಿಸಿದವನು ಧಾರಾಳ ಸ್ವಭಾವದವನು. ಅಲ್ಪಸಂತೋಷಿ, ಜಿತೇಂದ್ರಿಯ, ಸ್ತ್ರೀಲೋಲ, ಕೀರ್ತಿಶಾಲಿ, ವಿದ್ಯಾವಂತನಾಗವನು. 15, 16, 17, 33, 52 ನೇ ವರ್ಷಗಳಲ್ಲಿ ಗಂಡಾಂತರ 80 ನೇ ವರ್ಷ ಅತಿಗಂಡ. 35 ನೇ ವರ್ಷ ಯೋಗಕಾಲ. ಚಿಕ್ಕವಯಸ್ಸಿನಲ್ಲಿ ತಂದೆಗೆ ಕ್ರೂರ. ಯೌವನದಲ್ಲಿ ದೇಶಸಂಚಾರ. ಮಾತೃ ಪಿತೃ ಭಕ್ತಿಯುಳ್ಳವನು. 96 ವರ್ಷ ಪರಮಾಯುರ್ದಾಯ. 4 ನೇ ಪಾದಕ್ಕೆ ಧನವಂತ.

ಪುಷ್ಯ ನಕ್ಷತ್ರದ ದೇವತೆ ಬೃಹಸ್ಪತಿ. ಈ ನಕ್ಷತ್ರದಲ್ಲಿ ಜನಿಸಿದವನು ಪುಣ್ಯಶಾಲಿಯಾಗಿ ಬದುಕುವನು. 1 ನೇ ಪಾದ ಒಳ್ಳೆಯದಲ್ಲ. 2–4 ಮಾತ್ರ ಒಳ್ಳೆಯದು. 5, 16, 37, 64 ನೇ ವರ್ಷಗಳಲ್ಲಿ ಗಂಡಾಂತರ. ಪರಮಾಯುಷ್ಯ 90 ವರ್ಷ.

ಆಶ್ಲೇಷ ನಕ್ಷತ್ರಕ್ಕೆ ಸರ್ಪ ದೇವತೆ. ಇದರಲ್ಲಿ ಜನಿಸಿದ ಹುಡುಗಿಗೆ ಅತ್ತೆ ಇಲ್ಲದ ಮನೆ ಆಗಬೇಕು. ಇದರಲ್ಲಿ ಜನಿಸಿದವರಿಗೆ ವಿದ್ಯೆ ಪ್ರಾಪ್ತಿ, ಬಹು ಬುದ್ಧಿ. ತಂತ್ರಗಾರ, ಪಶುಗಂಡ, ಸರ್ಪಗಂಡ ಉಂಟು. 1, 5, 8, 11, 25, 27, 30 50, ವರ್ಷಗಳಲ್ಲಿ ಗಂಡಾಂತರ. 89 ವರ್ಷ ಪರಮಾಯುರ್ದಾಯ. ಈ ನಕ್ಷತ್ರದಲ್ಲಿ ಜ್ವರ ಬಂದರೆ 1 ತಿಂಗಳು ಕಾಡುತ್ತದೆ. ಬೃಹಸ್ಪತಿಗೆ ಶಾಂತಿ ಮಾಡಿಸಬೇಕಾಗುತ್ತದೆ.



ಕುಜ

ಕುಜನು ಸಹೋದರರು, ಯುವರಾಜ, ಪಿತ್ತ, ಉಷ್ಣ, ಭುಜಬಲ, ಧೈರ್ಯ, ನೆಲದಲ್ಲಿ ಸಿಗುವ ಖನಿಜಗಳು, ಆಯುಧ, ವಾದ, ಯುದ್ಧದಲ್ಲಿ ಜಯಗಳಿಸುವುದು, ಆಡು, ಕೆಂಪುಬಣ್ಣದ ಶಾಲು, ರಕ್ತ, ಕ್ಷಾರ, ಬಲಿ, ಅಗ್ನಿ, ಮರು ಭೂಮಿ, ಬೆಟ್ಟ, ತಾಮ್ರ, ಕೆಂಪುಬಣ್ಣ ಮಿಶ್ರಿತ ಚಿನ್ನ, ಹವಳ, ಕೆಂಪು, ಪೂಜಿಸುವಾಗ ಮಾಡಬೇಕಾದ ಮುದ್ರೆಗಳು, ಆಡಳಿತಾಧಿಕಾರ, ದುರ್ಗ, ಆಯುಧ, ಕೆಂಪು ವಿಷ, ಕ್ರಿಮಿ, ಬಿದುರು, ಕಗ್ಗಲೀ ಮರ, ಗಂಧಕ, ಕೇಸರಿ, ಹುಲಿ, ಪ್ರತಾಪಗಳಿಗೆ ಕಾರಕನು.

ಕುಜನಿಗೆ ಮೇಷ, ವೃಶ್ಚಿಕ ರಾಶಿಗಳು ಸ್ವಕ್ಷೇತ್ರ. ಮಕರದಲ್ಲಿ ಕುಜ ಉಚ್ಚ. ನೀಚ ಸ್ಥಾನ ಕರ್ಕಾಟಕ. ಮೂಲ ತ್ರಿಕೋಣ ಮೇಷ. ಹವಳ ಗ್ರಹರತ್ನ, ಗ್ರಹಲೋಹ ಕಬ್ಬಿಣ. ಕುಜನಿಗೆ ಮಿತ್ರರು ಗುರು, ಚಂದ್ರ, ರವಿ. ಬುಧ ಶತ್ರುವೂ, ಶುಕ್ರ, ಶನಿಗಳು ಸಮರು.

ಲಗ್ನದಿಂದ ಆರಂಭಿಸಿ ದ್ವಾದಶ ಭಾವಗಳಲ್ಲಿ ಕುಜ ಇರುವ ಫಲ ಹೀಗಿದೆ: ಲಗ್ನದಲ್ಲಿ ಕುಜ ಇದ್ದು ದೇ ಆದರೆ ದೇಹದಲ್ಲಿ ವ್ರಣಗಳಾಗುತ್ತವೆ. ದೃಢ ಶರೀರ, ಕಳ್ಳತನ ಮಾಡುವ ಬುದ್ಧಿ. ಹೊಟ್ಟೆ ದೊಡ್ಡದು. ಕೆಂಪುಬಣ್ಣವುಳ್ಳವನೂ, ಎಳೆತನದಲ್ಲಿ ತಂದೆಗೆ ಅನಿಷ್ಟ ತರುವವನೂ ಆಗುತ್ತಾನೆ. ರಾಜ ಸಮಾನವಾದ ಬದುಕು ಇವನದು. ತಲೆಯಲ್ಲಿ ವ್ರಣವಾಗುತ್ತದೆ.

ಎರಡನೆಯ ಮನೆಯಲ್ಲಿ ಕುಜ ಇರುವವನ ಮಾತು ಕಟುತರವಾದದ್ದು. ಅಪಾತ್ರನಿಗೆ ದಾನ ಕೊಡುತ್ತಾನೆ. ಜೀರ್ಣವಾದ ಕೌಪೀನ ಧರಿಸುವನು. ಬಹು ಕೋಪಿಷ್ಟ. ಹಿರಿಯರು ಸಂಪಾದಿಸಿಟ್ಟ ಭೂಮಿ ಈತನಿಗೆ ಭೂಷಣ ಪ್ರಾಯ. ವಿದ್ಯೆಗೆ ವಿಘ್ನ.

ಕುಜ ಮೂರನೆಯ ಮನೆಯಲ್ಲಿದ್ದರೆ ತಮ್ಮಂದಿರು ಇರುವುದಿಲ್ಲ. ಹಣದ ಅಭಾವ. ಕುಜನೊಡನೆ ರಾಹುವೂ ಇದ್ದರೆ ಜಾತಕನ ಹೆಂಡತಿ ಜಾರಿಣಿ.

ಜಾತಕನು ವೇಶ್ಯೆಯರನ್ನು ಸೇರುವನು. ಸಾಹಸದ ಕೆಲಸಗಳನ್ನು ಮಾಡುತ್ತಾನೆ. ಶೂರ, ಸಹೋದರರನ್ನು ಕೊಲ್ಲುವಂಥವನೂ, ಶತ್ರುವನ್ನು ವಧಿಸುವವನೂ ಆಗುತ್ತಾನೆ. ಜ್ಞಾತಿಗಳು ವೃದ್ಧಿಸುವರು.

ನಾಲ್ಕನೆಯ ಮನೆಯಲ್ಲಿ ಕುಜ ಇದ್ದಲ್ಲಿ ತಂದೆಗೆ ಅನಿಷ್ಟ. ತಾಯಿ ಅನಾರೋಗ್ಯದಿಂದ ಬಳಲುವಳು. ಕುಜನೊಡನೆ ಬುಧ ಸೇರಿದ್ದರೆ ಇದು ಖಂಡಿತ. ಮನೆಯಲ್ಲಿ ಒಡಕುಂಟಾಗುವುದು. ಮಾನವನನ್ನು ವಾಹನವನ್ನಾಗಿ ಮಾಡಿಕೊಂಡಿರುತ್ತಾನೆ. ಪರಾಧೀನನಾಗುವನು. ಹೆಂಗಸರ ಹತ್ಯಾಕಾರಿ.

ಐದನೇ ಮನೆಯಲ್ಲಿ ಕುಜ ಇದ್ದರೆ ಪುತ್ರ ಸಂತಾನ ಆಗುವುದಿಲ್ಲ. ಕೆಟ್ಟ ದಾರಿ ಹಿಡಿಯುವನು. ರಾಜನ ಕೋಪಕ್ಕೆ ಗುರಿಯಾಗುವನು. ಮೃತಶಿಶುಗಳು ಹುಟ್ಟುವರು. ಧನ ಮತ್ತು ಧಾನ್ಯಸಂಪನ್ನನಾಗುತ್ತಾನೆ. ಆರನೇ ಮನೆಯಲ್ಲಿ ಕುಜನಿದ್ದರೆ ಶತ್ರುಗಳು ನಾಶವಾಗುವರು. ಭೂಮಿ ಸಂಪಾದಿಸುವನು. ಸರಕಾರಿ ಉದ್ಯೋಗವಿರುವುದು. ಜ್ಞಾತಿಗಳನ್ನು ಶತ್ರುವಿನಂತೆ ಪೀಡಿಸುವನು.

ಕುಜ ಏಳನೆಯ ಮನೆಯಲ್ಲಿರುವವರಿಗೆ ಪತ್ನೀ ಭಾವಕ್ಕೆ ತೊಂದರೆ– ಅಕ್ಕೆಗೆ ಅನಿಷ್ಟ ಉಂಟಾಗುವುದು. ಪಾಪ ಗ್ರಹ ಜೊತೆಯಲ್ಲಿದ್ದರೆ ಪತ್ನಿಗೆ ಹಾನಿ. ಶುಭಗ್ರಹದ ಜೊತೆ ಇದ್ದರೆ ಇಬ್ಬರು ಹೆಂಡತಿಯರಿದು ಇಬ್ಬರೂ ಜೀವಿಸಿರುತ್ತಾರೆ. ಹೊಟ್ಟೆಯಲ್ಲಿ ರಕ್ತ ಸೇರುವುದು–ಕೈಗೆ ರೋಗ ತಗುಲುವುದು. ಬಹಳ ಜನ ಸಹೋದರರು. ಬಹು ಬುದ್ಧಿವಂತ. ಸೋದರ ಮಾವಂದಿರು ಹೇರಳವಾಗಿರುತ್ತಾರೆ.

ಎಂಟನೇ ಮನೆಯಲ್ಲಿ ಕುಜ ಇದ್ದರೆ ಗಂಡುಮಕ್ಕಳಾಗುವುದು ಕಡಿಮೆ. ಕಣ್ಣಿನ ರೋಗ ಕೊಂಚ ಇರುತ್ತದೆ. ಮಧ್ಯಮಾಯುರ್ದಾಯ, ತಂದೆ ಹಾಗೂ ತಂದೆಯ ತಂದೆಗೆ ಅನಿಷ್ಟಕರ. ಸೋದರಮಾವನನ್ನು ಕೊಲ್ಲುವನು. ಐವತ್ತನೆಯ ವಯಸ್ಸಿಗೆ ಪತ್ನಿಯ ಮರಣ. ವೇಶ್ಯೆಯ ಸಂಗ ಮಾಡುವನು.

ಕುಜ ಒಂಬತ್ತನೆಯ ಮನೆಯಲ್ಲಿದ್ದರೆ ತೋಟವನ್ನು ಹಾಳುಮಾಡುತ್ತಾನೆ. ತಂದೆಗೆ ಕ್ರೂರ. ಸೇವಕವೃತ್ತಿ ಕೈಗೊಳ್ಳುವನು. ಕೆಟ್ಟಕೆಲಸಗಳನ್ನು ಮಾಡಲು ಪ್ರೇರೇಪಿಸುವನು. ನೌಕಾ ವ್ಯಾಪಾರ ನಡೆಸುವನು.

ಹತ್ತನೇ ಸ್ಥಾನದಲ್ಲಿ ಕುಜ ಇದ್ದಲ್ಲಿ ಧನಾರ್ಜನೆಯಲ್ಲಿ ಸಮರ್ಥನಿರುತ್ತಾನೆ. ದೃಢಶರೀರ, ಕುಲದೀಪಕ. ಸ್ವಂತ ಸಂಪಾದನೆಯಿಂದ ಧನ ಹೊಂದಿರು

ತ್ತಾನೆ. ದೇವಸ್ಥಾನದಲ್ಲಿ ಅಧಿಕಾರವಿರುತ್ತದೆ. ಹೇರಳವಾಗಿ ಹಣ ಸಂಪಾದಿಸುತ್ತಾನಲ್ಲದೆ ಧಾನ್ಯವೂ ಯತೇಚ್ಛವಾಗಿರುವುದು.

ಹನ್ನೊಂದನೆಯ ಮನೆಯಲ್ಲಿ ಕುಜ ಇರುವವರಿಗೆ ಬಹಳ ವಿಷಯಗಳಲ್ಲಿ ತಿಳುವಳಿಕೆ, ಭೂಲಾಭ, ಮಾಯಾವಿ, ಅನೇಕ ಜನ ಅಣ್ಣಂದಿರು. ನ್ಯಾಯವಾದಮಾರ್ಗದಿಂದ ಧನಸಂಪಾದನೆಮಾಡುವನು. ವ್ಯವಸಾಯದಿಂದ ಲಾಭ.

ಹನ್ನೆರಡನೇ ಮನೆಯಲ್ಲಿ ಕುಜ ಇದ್ದರೆ ಜಾತಕನು ದರಿದ್ರನಾಗುವನು. ವಾಯುವಿನಿಂದಾಗಿ ಶರೀರದಲ್ಲಿ ಹಿಂಸೆ. ಇತರರನ್ನು ವಂಚಿಸುತ್ತಾನೆ. ಅನೇಕ ಜನ ಶತ್ರುಗಳು. ಕುಜನೊಡನೆ ಕೇತು ಇದ್ದರೆ ಮನೆಗೆ ಬೆಂಕಿ ಬೀಳುತ್ತದೆ. ಹೆಂಡತಿಗೆ ಹಾನಿ. ಶುಭಗ್ರಹದ ವೀಕ್ಷಣೆ ಇದ್ದರೆ ಪರಿಹಾರ.

ಕುಜ ದಶೆ ಏಳು ವರ್ಷ ನಡೆಯುತ್ತದೆ. ಮೃಗಶಿರಾ, ಚಿತ್ತ, ಧನಿಷ್ಠ ನಕ್ಷತ್ರಗಳಲ್ಲಿ ಜನಿಸಿದವರಿಗೆ ಜನನ ಕಾಲದಲ್ಲಿ ಕುಜದಶೆ ಆರಂಭ.

ಅತಿ ಉಚ್ಚ ರಾಶಿಯಲ್ಲಿರುವ ಕುಜನ ದಶೆಯಲ್ಲಿ ಧನಲಾಭ, ಗ್ರಾಮಾಧಿಪತ್ಯ, ಭೂಲಾಭ, ಹವಳ ಚಿನ್ನ ಮುಂತಾದ ಆಭರಣಗಳ ಲಾಭ ಉಂಟಾಗುವುದು.

ಉಚ್ಚರಾಶಿಯಲ್ಲಿರುವ ಕುಜನ ದಶೆಯಲ್ಲಿ ರಾಜ್ಯಪ್ರಾಪ್ತಿ, ಭೂಲಾಭ, ಧಾನ್ಯವೃದ್ಧಿ, ವಸ್ತ್ರಾಭರಣ ಲಾಭ ಕೊಡುವನು. ಮೂಲ ತ್ರಿಕೋಣದಲ್ಲಿರುವ ಕುಜನದಶೆಯಲ್ಲಿಜೊಡ್ಡ ತನ, ಅಭಿವೃದ್ಧಿ, ವಸ್ತ್ರಲಾಭ, ಸುಖ, ಧಾನ್ಯವೃದ್ಧಿ, ಧನವೃದ್ಧಿ ಹೊಂದುವನು. ಕುಜ ಅತಿಮಿತ್ರ ಕ್ಷೇತ್ರದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಯಜ್ಞವೇ ಮೊದಲಾದ ಸತ್ಕರ್ಮಫಲ. ಮದುವೆ, ಬಂಧು ಸಂಪತ್ತು, ವ್ಯವಹಾರದಲ್ಲಿಶತ್ರು ಜಯ ಉಂಟುಮಾಡುವನು. ಮಿತ್ರಕ್ಷೇತ್ರದಲ್ಲಿರುವಕುಜ ದಶೆಯಲ್ಲಿ ಜಯ, ಶತ್ರುನಾಶ, ನಿತ್ಯೋತ್ಸವ, ಶುಭಕಾರ್ಯ ಪ್ರಾಪ್ತಿ, ಭೂಧನ ಲಾಭ ಉಂಟುಮಾಡುವನು. ಸಮರಾಶಿಯಲ್ಲಿರುವ ಕುಜನದಶೆಯಲ್ಲಿಗೌರವ, ಸುಖ, ಭೂಪ್ರಾಪ್ತಿ, ಧನಲಾಭ, ಚಿನ್ನ-ರತ್ನ, ವಸ್ತ್ರಗಳ ಪ್ರಾಪ್ತಿ ಹೊಂದುತ್ತಾನೆ. ಶತ್ರುರಾಶಿಯಲ್ಲಿರುವ ಕುಜನ ದಶೆಯಲ್ಲಿ ಅತ್ಯಂತ ಕಷ್ಟಗಳು ಒದಗುವುವು. ಶತ್ರುಭಯ, ಪತ್ನಿ-ಪುತ್ರ-ಧಾನ್ಯಗಳ ನಾಶ ಸಂಭವಿಸುವುದು. ಕುಜ ಅತಿಶತ್ರುಕ್ಷೇತ್ರದಲ್ಲಿದ್ದರೆ ತನ್ನ ದಶೆಯಲ್ಲಿ ರಾಜಭಯ, ಮನೆ-ಧನ-ಧಾನ್ಯಗಳ ನಾಶ, ಹಸು-ಪತ್ನಿ ಪುತ್ರ–ಭೃತ್ಯರ ನಾಶ, ಕುಷ್ಠ–ಗುಲ್ಮ, ಕ್ಷಯ–ಗ್ರಹಣಿ

ಆದಿಯಾಗಿ ರೋಗಗಳು ಉಂಟಾಗುವುವು. ನೀಚರಾಶಿಯಲ್ಲಿರುವ ಕುಜನ ದಶೆಯಲ್ಲಿ ಮರಣ ಭಯ, ಕೃಷಿ-ಪಶುಗಳ ನಾಶ, ರಾಜಭೀತಿ, ಸದಾಜಗಳ, ಶತ್ರು ಬಾಧೆ ಉಂಟಾಗುತ್ತದೆ. ಅತಿ ನೀಚನಾಗಿರುವ ಕುಜನ ದಶೆಯಲ್ಲಿ ಕಷ್ಟ ಫಲ, ರಾಜಕೋಪ, ಕ್ಷೇತ್ರ-ಪಶು-ಧನ ನಾಶ, ಸಮಾನ ಜನ ಕಷ್ಟ, ಸ್ಥಿತಿ ನಾಶ ಉಂಟುಮಾಡುವನು. ಕುಜ ಆರೋಹಿಯಾಗಿದ್ದರೆ ತನ್ನ ದಶೆಯಲ್ಲಿ ಸುಖಫಲಗಳನ್ನು ಕೊಡುವನು. ಧನ-ಧಾನ್ಯ, ಕ್ಷೇತ್ರ-ಹವಳ-ಮಣಿ ಮುಂತಾದುವುಗಳ ಅಭಿವೃದ್ಧಿ ಉಂಟುಮಾಡುವನು. ಅವರೋಹಿ ಕುಜನ ದಶಾಕಾಲದಲ್ಲಿ ಅತಿಭಯ, ಶತ್ರುಬಾಧೆ, ಮನಸ್ತಾಪ, ಸ್ಥಾನನಾಶಗಳುಂಟಾಗುವುವು. ಶುಭಗ್ರಹದೊಡನೆ ಇರುವ ಕುಜನ ದಶೆಯಲ್ಲಿ ಸುಖ, ರಾಜ್ಯಪಾಪ್ತಿ, ಮಣಿ-ವಸ್ತ್ರಾದಿ ಲಾಭ, ಭೂಮಿ-ಧಾನ್ಯ, ವಿಚಿತ್ರವಾದ ಮನೆ ಮೊದಲಾದ ಲಾಭಗಳನ್ನು ಹೊಂದುವನು. ಕುಜನೊಡನೆ ಪಾಪಗ್ರಹವಿದ್ದರೆ ತನ್ನ ದಶೆಯಲ್ಲಿ ಅತಿ ಭಯ, ಶತ್ರುಬಾಧೆ, ರೋಗಪೀಡೆ, ಸ್ಥಾನನಾಶ ಉಂಟಾಗುವುದು.

ಮೇಷರಾಶಿಯಲ್ಲಿರುವ ಕುಜನ ದಶೆಯಲ್ಲಿ ಧನಲಾಭ, ಕ್ಷೇತ್ರಾಭಿವೃದ್ಧಿ, ಬಹಳವಾದ ಧಾನ್ಯಲಾಭ, ಶತ್ರುನಾಶ, ಕೀರ್ತಿ ಲಾಭ ಘಟಿಸುವುದು. ಕುಜ ವೃಷಭದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಶತ್ರು ನಾಶ, ಸುಖ, ಕ್ಷೇತ್ರಾಭಿವೃದ್ಧಿ, ಯುದ್ಧದಲ್ಲಿ ಜಯ, ರಾಜಸನ್ಮಾನಗಳನ್ನು ಕೊಡುವನು. ಮಿಥುನದಲ್ಲಿರುವ ಕುಜನ ದಶೆಯಲ್ಲಿ ಮಣಿವಸ್ತ್ರಲಾಭ, ರಾಜಸನ್ಮಾನ, ಬಂಧುವೃದ್ಧಿ, ಸಂಘವೃದ್ಧಿ, ವ್ಯವಸಾಯ-ಪಶುವೃದ್ಧಿ, ಸಮಸ್ತ ಲಾಭಗಳೂ ಉಂಟಾಗುವುವು. ಕಟಕದಲ್ಲಿರುವ ಕುಜನ ದಶೆಯಲ್ಲಿ ಶತ್ರುಭೀತಿ, ಮನೆ ಧನಧಾನ್ಯ ನಾಶ, ಸಹೋದರ ವರ್ಗದಲ್ಲಿ ಕಲಹ, ಪುತ್ರಪೀಡೆ, ಸಮಾನ ಜನ ನಷ್ಟ, ಸುಖ ಭಂಗ ಸಂಭವಿಸುತ್ತದೆ. ಕುಜ ಸಿಂಹರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಸುಖಫಲಗಳನ್ನು ಕೊಡುವನು. ರಾಜಪ್ರೀತಿ, ಮನೋಲ್ಲಾಸ, ಕ್ಷೇತ್ರ-ಧನ-ಧಾನ್ಯ ವೃದ್ಧಿ ಉಂಟಾಗುವುದು. ಕನ್ಯಾದಲ್ಲಿರುವ ಕುಜನ ದಶೆಯಲ್ಲಿ ಸುಖ ಫಲಗಳು, ವಿದ್ಯಾಲಾಭ, ವಾಕ್ಪಟುತ್ವ, ಬಂಧುಜನ ಪೋಷಣೆ ಉಂಟಾಗುವುದು. ತುಲಾದಲ್ಲಿರುವ ಕುಜನ ದಶೆಯಲ್ಲಿ ಕಷ್ಟಫಲ, ಮಾನಭಂಗ, ಸ್ತ್ರೀ ಪುತ್ರಾದಿ ನಾಶ, ಧನಧಾನ್ಯಕ್ಷೇತ್ರಗಳ ನಾಶ ಉಂಟಾಗುವುದು. ಕುಜ ವೃಶ್ಚಿಕದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಲಾಭ, ರಾಜನ ಸ್ನೇಹ, ಸ್ವಜನರಿಂದ

ಅನುಕೂಲ, ಬಂಧುಗಳಿಗೆ ಉಪಕಾರ, ಸುಖ ಉಂಟಾಗುವುದು. ಧನುಸ್ಸಿನಲ್ಲಿರುವ ಕುಜನ ದಶೆಯಲ್ಲಿ ರಾಜನ ಸ್ನೇಹ. ರಾಜನ ಮೂಲಕ ಧನಲಾಭ, ಕ್ಷೇತ್ರಾಭಿವೃದ್ಧಿ, ಸಹೋದರರ ಅಭಿವೃದ್ಧಿ, ಶತ್ರುನಾಶ ಸಂಭವಿಸುವುದು. ಮಕರದಲ್ಲಿರುವ ಕುಜನ ದಶೆಯಲ್ಲಿ ಭೂಮಿಯ ಒಡೆತನ, ರಾಜಸನ್ಮಾನ, ಯುದ್ಧದಲ್ಲಿ ಜಯ, ಚಿಂತಿತಕಾರ್ಯಸಿದ್ಧಿ, ವಾಹನ ವಸ್ತ್ರ ಅಭರಣಗಳ ಲಾಭ ಉಂಟಾಗುವುವು. ಕುಜ ಕುಂಭದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕಷ್ಟ, ಮಾನಭಂಗ ರಾಜಕೋಪ ತಾಯಿಯೊಡನೆ ಜಗಳ, ಸೇವಕರ ಜೊತೆಯಲ್ಲಿ ಜಗಳ ಉಂಟಾಗುವುದು. ಮೀನರಾಶಿಯಲ್ಲಿರುವ ಕುಜನ ದಶೆಯಲ್ಲಿ ಮಣಿ ವಸ್ತ್ರಗಳ ಲಾಭ, ಕ್ಷೇತ್ರಾಭಿವೃದ್ಧಿ, ವ್ಯವಸಾಯ ಧಾನ್ಯವೃದ್ಧಿ, ವಿದ್ಯಾಭಿವೃದ್ಧಿ, ಸಭಾಪೂಜ್ಯತೆ ಉಂಟಾಗುವುವು.

ಎರಡನೇ ಮನೆಯಲ್ಲಿರುವ ಕುಜನ ದಶೆಯಲ್ಲಿ ವಿಶೇಷ ಸುಖ, ಧನಲಾಭ ಕುಟುಂಬ ಸಂರಕ್ಷಣೆ, ರಾಜಸನ್ಮಾನ, ಸತ್ಕೀರ್ತಿ ಲಾಭ ಸಂಭವಿಸುವುವು.

ಮೂರನೆಯ ಮನೆಯಲ್ಲಿರುವ ಕುಜನ ದಶೆಯಲ್ಲಿ ಶತ್ರುನಾಶ, ಧಾನ್ಯವೃದ್ಧಿ, ಸುಕೀರ್ತಿ, ಲಕ್ಷ್ಮೀಕಟಾಕ್ಷವೃದ್ಧಿ, ಇಷ್ಟಾರ್ಥ ಸಿದ್ಧಿ ಉಂಟಾಗುವುದು. ಕುಜನಾಲ್ಕರಲ್ಲಿರುವಾಗ ತನ್ನ ದಶಾಕಾಲದಲ್ಲಿ ರಾಜ್ಯಪ್ರಾಪ್ತಿ, ರಾಜಾಶ್ರಯ, ಭೂ ಕ್ಷೇತ್ರ ಕೃಷಿವೃದ್ಧಿ ಉಂಟುಮಾಡುವನು. ಐದರಲ್ಲಿರುವ ಕುಜನ ದಶೆಯಲ್ಲಿ ಕೃಷಿನಾಶ, ಪುತ್ರನಾಶ, ಅತಿಕಷ್ಟ, ರಾಜಕೋಪ, ಸ್ವಸ್ಥಾನನಾಶ, ಪರದೇಶವಾಸ ಲಭಿಸುವುವು. ಆರನೇ ಮನೆಯಲ್ಲಿರುವ ಕುಜನ ದಶೆಯಲ್ಲಿ ಶತ್ರುನಾಶ, ದೇಹಕಾಂತಿ, ರಾಜತುಲ್ಯವಾದ ಪೂಜ್ಯತೆ, ಪತ್ನಿ ಪುತ್ರ ಬಂಧುಗಳ ಸೌಖ್ಯ ಲಭ್ಯ. ಏಳನೇ ಮನೆಯಲ್ಲಿರುವ ಕುಜನ ದಶೆಯಲ್ಲಿ ಪತ್ನೀನಾಶ, ದೇಹದಲ್ಲಿ ಸ್ಫೋಟಕ ಬಾಧೆ, ಪುತ್ರ ಕ್ಷೇತ್ರದ ನಾಶ ಸಂಭವಿಸುವುವು. ಎಂಟನೆಯ ಮನೆಯಲ್ಲಿರುವ ಕುಜನ ದಶೆಯಲ್ಲಿ ಜ್ವರ-ಅತಿಸಾರ, ಗುಲ್ಮ ಮೊದಲಾದರೋಗಗಳು ತಗುಲುವುವು. ಕುಜ ಒಂಬತ್ತನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಲಾಭ ಧರ್ಮವೃದ್ಧಿ ತಟಾಕ ವನಗಳ ಪ್ರತಿಷ್ಠೆ, ಸಹೋದರ ವರ್ಗವರಿಗೆ ಶುಭ ಉಂಟುಮಾಡುವನು. ಹತ್ತನೇ ಮನೆಯಲ್ಲಿರುವ ಕುಜನ ದಶೆಯಲ್ಲಿ ಇಷ್ಟಾರ್ಥಗಳು ಸಿದ್ಧಿಸುವುವು. ಜ್ಞಾನ, ಸಜ್ಜನಪೂಜೆ, ಉತ್ತಮ ಮಣಿಲಾಭ, ರಾಜನಿಂದ ಸುಖ, ಕುದುರೆ ವಾಹನಗಳ ಲಾಭ.

ಗಂಗಾಸ್ನಾನಫಲ ಸಿದ್ಧಿ, ಕೃಷಿಫಲಸಿದ್ಧಿ, ಭೂಮಿ ಕ್ಷೇತ್ರಗಳ ಲಾಭ ಸಂಭವಿಸುವುದು. ಹನ್ನೊಂದರಲ್ಲಿರುವ ಕುಜನ ದಶೆಯಲ್ಲಿ ಧಾನ್ಯವೃದ್ಧಿ, ರಾಜನ ಸ್ನೇಹ, ಉತ್ಕೃಷ್ಟ ಆಭರಣಗಳ ಲಾಭ, ಕ್ಷೇತ್ರಾಭಿವೃದ್ಧಿ ಹೊಂದುವನು. ಹನ್ನೆರಡಲ್ಲಿರುವ ಕುಜನ ದಶೆಯಲ್ಲಿ ಮೃತ್ಯುಫಲ ಒದಗುವುದು. ಸಮಾನಜನ ಶೋಕ, ಸ್ಥಾನನಾಶ, ರಾಜಭಯ ಉಂಟಾಗುವುದು.

ಕೇಂದ್ರದಲ್ಲಿರುವ ಕುಜನದಶೆಯಲ್ಲಿ ಮಾನಧನಕ್ಷೇತ್ರಗಳವೃದ್ಧಿ, ರಾಜ ಸಮಾಗಮ ಉಂಟಾಗುವುವು. ಕುಜ ತ್ರಿಕೋನದಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜ ಫಲಪ್ರದನಾಗುವನು. ರಾಜಪೂಜ್ಯತೆ, ಗ್ರಾಮಾಧಿಪತ್ಯ, ಮಂತ್ರಾಲೋಚನಶಕ್ತಿ ಕೊಡುವನು. 6-8-12ನೇ ಮನೆಗಳಲ್ಲಿರುವ ಕುಜನದಶೆಯು ಮೃತು ಪ ದ, ಸ್ವಸ್ಥಾನನಾಶ, ಪತ್ನಿಪುತ್ರರ ನಾಶ ಉಂಟಾಗುತ್ತದೆ.

ರಾಶಿಚಕ್ರದಲ್ಲಿ ಮೇಷಲಗ್ನ ಮೊದಲನೆಯದು. ಮೇಷಲಗ್ನದವರಿಗೆ ಶನಿ, ಬುಧ, ಶುಕ್ರ ಪಾಪಿಗಳು. ಗುರು ರವಿ ಶುಭಫಲ ಕೊಡುವರು. ಗುರುಶನಿಗಳ ಯುತಿ ಒಳ್ಳೆಯ ಫಲಗಳನ್ನೇನೂ ಕೊಡುವುದಿಲ್ಲ. ಗುರು ಕೆಟ್ಟ ಫಲವನ್ನೇ ಕೊಡುತ್ತಾನೆ. ಶುಕ್ರ ತನ್ನ ಭುಕ್ತಿಯಲ್ಲಿ ಮಾರಕನಾಗುವುದಿಲ್ಲ. ಶನಿ ಮುಂತಾದವರು ಮರಣವ್ರಂಟುಮಾಡುತ್ತಾರೆ.

ಮೇಷರಾಶಿಗೆ ಸೇರುವ ನಕ್ಷತ್ರಗಳೆಂದರೆ ಅಶ್ವಿನಿ, ಭರಣಿ ಮತ್ತು ಕೃತ್ತಿಕಾ ಮೊದಲನೇ ಪಾದ.

ಅಶ್ವಿನಿ ನಕ್ಷತ್ರದಲ್ಲಿ ಜನಿಸಿದವನಿಗೆ ಉದ್ದ ತೋಳು, ಅಗಲವಾದ ಕಣ್ಣು ಒಳ್ಳೆಯ ಮಾತು, ರೂಪವಿರುತ್ತದೆ. ವ್ಯಭಿಚಾರಿ, ವಿದ್ವಾಂಸ, ಆರೋಗ್ಯ, ದೃಢಗಾತ್ರನು, ಬಡಾಯಿಗಾರ. 1ನೇ ಪಾದದಲ್ಲಾದರೆ ಸಾಹಸಿ ಲೋಭಿ, 2ನೇ ಪಾದದಲ್ಲಿ ಜನಿಸಿದವನು ಭೋಜನ ಪ್ರಿಯ, ಧಾರಾಳಿ, ವರ್ಚಸ್ವಿ. ವಿದ್ಯೆ, ಬಡತನ, ಸೌಖ್ಯ. 3ನೇ ಪಾದದಲ್ಲಿ ಜನಿಸಿದವರಿಗೆ ಫಲ. 4ನೇ ಪಾದದಲ್ಲಾದರೆ ಧರ್ಮಕರ್ತ. ಧನವಂತ, ಸ್ತ್ರೀಲೋಲ. ಅಶ್ವಿನಿ ನಕ್ಷತ್ರದಲ್ಲಿ ರೋಗಕ್ಕೆ ಚಿಕಿತ್ಸೆ ಆರಂಭಿಸಿದರೆ ಶೀಘ್ರ ಗುಣಕಾರಿ. ಈ ನಕ್ಷತ್ರದಲ್ಲಿ ರೋಗ ತಗಲಿದರೆ ಒಂಬತ್ತು ದಿನಗಳ ಬಳಿಕ ಗುಣಕಾಣುತ್ತದೆ. ಕಳವಾದ ವಸ್ತು ಮೂರು ದಿನದಲ್ಲಿ ಸಿಗುವುದು (ಈ ನಕ್ಷತ್ರದಲ್ಲಿ). ಅಶ್ವಿನಿ ನಕ್ಷತ್ರದಲ್ಲಿ ಮನೆ ಕಟ್ಟಿಸಲು ಆರಂಭಿಸಿದರೆ ಬೇಗ ಮುಗಿಯುತ್ತದೆ. ಪರಮಾಯುಸ್ಸು 96ವರ್ಷ.

ಭರಣಿನಕ್ಷತ್ರದಅಧಿದೇವತೆ ಯಮನು, ಭರಣಿ ನಕ್ಷತ್ರದಲ್ಲಿ ಜನಿಸಿದವರು ಚಂಚಲ ಬುದ್ಧಿಯವರು. ಇವರು ಗುಟ್ಟು ಮಾಡಲಾರರು. ನಿಜ ಹೇಳಿಬಿಡುವರು. ಆಯುವೃದ್ಧಿ. ಅಹಂಕಾರಿ, ಕಾಮಿ, ಧಾರಾಳಿ, ಆಲಸಿ, ಮರೆವು ಹೆಚ್ಚು, ಹೊಟ್ಟೆಕಿಚ್ಚಿನ ಸ್ವಭಾವ, ಉಪಕಾರಿ, ಜಿದ್ದಿಬ್ಟುಕೊಳ್ಳುವನು, ಗುಂಗುರು ಕೂದಲು, ಕೆಂಪುಕಣ್ಣು. 1ನೇ ಪಾದದಲ್ಲಿ ಜನಿಸಿದವನು ಗುಣವಂತ. 2ನೇ ಪಾದವಾದರೆ ಮೋಸಗಾರ, ಲೋಭಿ. 3ನೇ ಪಾದದಲ್ಲಾದರೆ ಶೂರ, ಉತ್ಸಾಹಿ ತುಂಬಾ ಕೂದಲುಳ್ಳವನು, ಹೆದರಿಕೆ ಇಲ್ಲದವನು. 4ನೇ ಪಾದವಾದರೆ ಮಾತು ಕ್ರೂರ, ಕಷ್ಟ, ಮಕ್ಕಳು ಜಾಸ್ತಿ. ಭರಣಿ ನಕ್ಷತ್ರದಲ್ಲಿ ಕಾಯಿಲೆ ಬಂದರೆ 10 ದಿನ ಕ್ರೂರ. 90 ವರ್ಷ ಪರಮಾಯಸ್ಸು. ಕೃತ್ತಿಕಾ ನಕ್ಷತ್ರ 1ನೇ ಪಾದದಲ್ಲಿ ಜನಿಸಿದರೆ ಬುದ್ಧಿವಂತ, ಶೂರ, ಹೆಂಗಸರಲ್ಲಿ ಪ್ರೀತಿ, ಬಂಧುಗಳಲ್ಲಿ ವಿಶ್ವಾಸ, ತನ್ನ ಸಂಪಾದನೆಯಿಂದ ಜೀವನ ನಡೆಸುವವನೂ, ಸುಪ್ರಸಿದ್ಧನಾದವನೂ ಆಗುತ್ತಾನೆ. ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ದೊರಕುವುದಿಲ್ಲ. ಜ್ವರ ಈ ನಕ್ಷತ್ರದಲ್ಲಿ ಬಂದರೆ ಒಂಬತ್ತು ದಿನ ಕ್ರೂರ. 1-2-5-7-12-21-60-70ನೇ ವರ್ಷಗಳಲ್ಲಿ ಗಂಡಾಂತರವುಂಟು. ಪರಮಾಯುರ್ದಾಯ 80 ವರ್ಷ.

ವೃಶ್ಚಿಕ ಲಗ್ನಕ್ಕೆ ಬುಧ, ಶುಕ್ರ, ಶನಿಗಳು ಪಾಪಿಗಳು. ಗುರುವೂ ಶುಭದಾಯಕ. ರಾಜಯೋಗಕಾರಕರು ರವಿ, ಚಂದ್ರ ಮಾತ್ರ. ಗುರು ಮಾರಕನಾಗುವುದಿಲ್ಲ. ಬುಧ, ಶುಕ್ರ, ಶನಿಗಳು ಮಾರಕರು.

ವೃಶ್ಚಿಕ ರಾಶಿಗೆ ಬರುವ ನಕ್ಷತ್ರಗಳು ವಿಶಾಖ 4ನೇ ಪಾದ, ಅನೂರಾಧ ಮತ್ತು ಜ್ಯೇಷ್ಠ.

ಇಂದ್ರ, ಅಗ್ನಿ ವಿಶಾಖ ನಕ್ಷತ್ರದ ದೇವತೆಗಳು. ಈ ನಕ್ಷತ್ರದಲ್ಲಿ ಜನಿಸಿದವನು ಆಯುಷ್ಯ, ಧನ, ವಿದ್ಯ, ವಿನಯ, ಸಗುಣಿ, ಸ್ತ್ರೀಲೋಲ. ರೋಗದ ಧಾಳಿಗೆ ಆಗಾಗ್ಗೆ ಗುರಿಯಾಗುತ್ತಿರುತ್ತಾನೆ. 4ನೇ ಪಾದದಲ್ಲಿ ಜನಿಸಿದವನು ಭಾಗ್ಯಶಾಲಿಯಾಗಿ ಭೋಗ ಕೆಟ್ಟು ಚಿರರೋಗಿಯಾಗುವನು ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ಬೇಗನೆ ಸಿಗುತ್ತದೆ. ಜ್ವರವೇನಾದರೂ ವಿಶಾಖ ನಕ್ಷತ್ರದಲ್ಲಿ ಬಂದರೆ ಅತಿ ಕ್ರೂರ. ಶಾಂತಿ ಮಾಡಿಸಿದರೆ 15 ದಿವಸಗಳಲ್ಲಿ ಗುಣ. ಹಳೆ ಕಾಯಿಲೆಗಳಿಗೆ ವಿಶಾಖ ನಕ್ಷತ್ರದಲ್ಲಿ ಔಷಧಿ ಕೊಟ್ಟರೆ ಒಳ್ಳೆಯದು. 5-13-33 ವರ್ಷಗಳಲ್ಲಿ ಗಂಡವಿದೆ. ಪರಮಾಯುರ್ದಾಯ 97 ವರ್ಷಗಳು.

ಅನೂರಾಧ ನಕ್ಷತ್ರದಲ್ಲಿ ಜನಿಸಿದವರದು ಒಳ್ಳೀ ಮನಸ್ಸು. ಮಿತವಾದ ಸಂಸಾರ, ಧನ, ಸುಖ, ಪರಸ್ಥಳ ಸಂಚಾರ, ಆಸ್ಥಾನದಲ್ಲಿ ಪ್ರಸಿದ್ಧಿ ಎಲ್ಲಾ ಉಂಟು. ದುಂದುವೆಚ್ಚ ಮಾಡುವುದು, ಬಡಾಯಿ ಹೇಳಿಕೊಳ್ಳುವುದೂ ಇದೆ. 1 ನೇ ಪಾದದಲ್ಲಿ ಜನನವಾದರೆ ಆಲೋಚನಪರ. ಕುಶಲವಿದ್ಯೆ ಬರುವುದು 2 ನೇ ಪಾದದಲ್ಲಿ ಜನಿಸಿದವನಿಗೆ. 3 ನೇ ಪಾದವಾದರೆ ಸಾನುಕೂಲಳಾದ ಮಡದಿ ಬರುವಳು ಹಾಗೂ ಸುಳ್ಳು ಹೇಳಿ ಜಯಿಸಿಕೊಳ್ಳುವನು. 4 ನೇ ಪಾದವಾದರೆ ಬಡತನ ಮತ್ತು ಮನಸ್ಸು ಆಂತರ್ಯ ಸರಿಯಿರುವುದಿಲ್ಲ. 7, 16, 37, 64 ವರ್ಷಗಳಲ್ಲಿ ರೋಗ ಕಾಡುತ್ತದೆ. ಪರಮಾಯುರ್ದಾಯ 80 ವರ್ಷ. ಈ ನಕ್ಷತ್ರದಲ್ಲಿ ವಸ್ತು ಕಳೆದುಹೋದರೆ ಮೂರು ದಿವಸಕ್ಕೆ ದೊರಕುವುದು. ಅನೂರಾಧ ನಕ್ಷತ್ರದಲ್ಲಿ ಜ್ವರ ಬಂದರೆ ಒಂದು ತಿಂಗಳು ಕ್ರೂರ. ಶಾಂತಿ ಮಾಡಿದರೆ ಆರೋಗ್ಯವಾಗುವುದು.

ಜ್ಯೇಷ್ಠ ನಕ್ಷತ್ರದಲ್ಲಿ ಹುಟ್ಟಿದವರು ಸ್ನೇಹಕ್ಕೆ ತಕ್ಕವರು, ನಂಬಿಕೆಯುಳ್ಳವರು, ನಿಜ ಹೇಳುವರು, ಮುಕ್ಕಳೊಂದಿಗರು. ಪ್ರಸಿದ್ಧಿ ಪಡೆಯುವವರೂ ಆಗುತ್ತಾರೆ. 1ನೇ ಪಾದವಾದರೆ ಹಾಸ್ಯಗಾರ, ಅಹಂಕಾರಿ, ಬರವಣಿಗೆ ಅಥವಾ ಕೂಲಿಯಿಂದ ಜೀವನ ಮಾಡುತ್ತಾರೆ. 2 ನೇ ಪಾದದವರು ಜನರನ್ನು ವಶ ಮಾಡಿಕೊಳ್ಳುತ್ತಾರೆ, ರೋಗಿ. 3 ನೇ ಪಾದವಾದರೆ ಅಂಗಲೋಪವಿರುತ್ತೆ. 4 ನೇ ಪಾದವಾದರೆ ಪುಣ್ಯಶಾಲಿ. 3, 9, 16, 20, 28, 45 ವರ್ಷಗಳಲ್ಲಿ ಗಂಡಾಂತರ. ಪರಮಾಯುಸ್ಸು 80 ವರ್ಷ. ಈ ನಕ್ಷತ್ರದಲ್ಲಿ ಜ್ವರ ಬಂದರೆ ಒಂದು ತಿಂಗಳು ಕ್ರೂರ.

ಬುಧ

ಜ್ಞಾನ, ಮಧ್ಯವಯಸ್ಸು, ತಿಳುವಳಿಕೆ, ವ್ಯಾಪಾರ, ಮೋಸ, ತಂತ್ರ, ಬರವಣಿಗೆ ಲೆಕ್ಕ, ಕವಿತೆ, ಶಿಲ್ಪ, ನೇಕಾರ, ಹೆಸರುಬೇಳೆ, ಮೈಥುನ, ದಾಟುವುದು, ಸಸ್ಯ, ಸುಡುವುದು, ಬೀಸಣಿಗೆ, ಕನ್ಯೆ, ಗಲಾಟೆ, ಗಿಣಿ, ಜೂಜು, ಎಲೆಅಡಿಕೆ, ಪಂಜರ ಮುತ್ತುಗದೆಲೆ, ಮಧ್ಯಸ್ತಗಾರ, ಸುಖ ಸಂತೋಷಗಳಿಗೆ ಬುಧ ಕಾರಕ.

ಬುಧನಿಗೆ ಸ್ವಕ್ಷೇತ್ರ ಮಿಥುನ, ಕನ್ಯಾರಾಶಿಗಳು. ಕನ್ಯಾ ಉಚ್ಚ ಕ್ಷೇತ್ರ ವಾದರೆ ಮೀನ ನೀಚರಾಶಿ. ಮೂಲತ್ರಿಕೋಣ ಕನ್ಯಾರಾಶಿ. ಗ್ರಹರತ್ನ ಪಚ್ಚೆ. ಪಾದರಸ ಗ್ರಹಲೋಹ. ರವಿ, ಶುಕ್ರ ಇವನ ಮಿತ್ರರು. ಚಂದ್ರ ಶತ್ರು. ಕುಜ ಗುರು, ಶನಿ ಸಮರು.

ಲಗ್ನಾದಿಯಾಗಿ ಹನ್ನೆರಡು ಮನೆಗಳಲ್ಲಿ ಬುಧ ಇದ್ದರೆ ಏನು ಫಲ ಉಂಟಾಗುತ್ತದೆ ಎಂಬುದನ್ನು ಮೊದಲು ತಿಳಿಯಬೇಕು. ಲಗ್ನದಲ್ಲಿ ಬುಧ ಇದ್ದರೆ ಲೆಕ್ಕವಿಲ್ಲದಷ್ಟು ಜನ ಶತ್ರುಗಳಿರುತ್ತಾರೆ. ಮಂತ್ರ ಸಿದ್ಧಿ ಆಗಿರುತ್ತದೆ. ಭೂತ ಓಡಿಸುವುದರಲ್ಲಿ ದಕ್ಷ. ಬಹು ಬುದ್ಧಿಶಾಲಿ ಹಾಗೂ ವಿದ್ವಾಂಸ. ಜ್ಯೋತಿಷ ತಿಳಿದಿರುತ್ತದೆ. ಗಣಿತ, ಕಾವ್ಯಗಳನ್ನು ಬಲ್ಲವರು ದೀರ್ಘಾಯು. ರಾಜ ಸಮನಾಗಿ ಬದುಕುವನು. ಎರಡನೇ ಮನೆಯಲ್ಲಿರುವ ಬುಧ ಪುತ್ರ ಸಂತಾನ ಕೊಡುತ್ತಾನೆ ವೇದಶಾಸ್ತ್ರ ಪಾರಂಗತ. ಮಾತು ಮೃದು. ಮಾಡ ಬೇಕೆಂದುಕೊಂಡ ಕೆಲಸವನ್ನು ಸಾಧಿಸುವನು. ಶ್ರೀಮಂತ. ತಾನು ಸ್ವತಃ ಗಳಿಸಿ ಹಣ ಇಟ್ಟುಕೊಳ್ಳುತ್ತಾನೆ. ಧಾನ್ಯ ಸಂಗ್ರಹಿಸುತ್ತಾನೆ. ಮೂರರಲ್ಲಿ ಬುಧ ಇದ್ದರೆ ಒಳ್ಳೆಯ ಸೋದರರಿರುವಂತೆ ಮಾಡುವನು. ಅತೀವ ಸುಖಿ. ಸ್ತ್ರೀ ಲಾಭ ಉಂಟು. ಸಹೋದರರಿರುತ್ತಾರೆ. ಬುಧ ನಾಲ್ಕನೆಯ ಮನೆಯಲ್ಲಿದ್ದರೆ ಜಾತಕನು ಪಂಡಿತನಾಗುವನು. ಹಸ್ತ ಕೌಶಲವುಳ್ಳವನು. ವ್ಯವಸಾಯ ನಿರತ, ವಿದ್ಯಾವಂತ ಹಾಗೂ ವಿನಯಶಾಲಿ. ಮೋಸದಿಂದ ವಾಹನ, ಧಾನ್ಯಗಳನ್ನು ಪಡೆಯುವನು. ಐದರಲ್ಲಿ ಬುಧ ಇದ್ದರೆ ಸೋದರಮಾವನಿಗೆ ಹಾನಿ. ತಂದೆಯ

ಆರೋಗ್ಯ ಕೆಡುವುದು. ಸೋದರಮಾವನಿಗೆ ಗಂಡಾಂತರ. ತಾಯಿಯನ್ನು ರೋಗಗಳು ಕಾಡುವುವು. ರಾಜನಿಂದ ಮರ್ಯಾದೆ. ವಿವಿಧ ಬಗೆಯ ಬಟ್ಟೆಗಳಲ್ಲಿ ವ್ಯಾಮೋಹ, ವಿದ್ಯಾವಂತ, ಆಡಂಬರ ಪ್ರಿಯ, ಜಗಳಗಂಟಿಗ. ಬುಧ ಆರರಲ್ಲಿ ಇದ್ದರೆ ರಾಜಪೂಜ್ಯತೆ, ವಿದ್ಯಾರ್ಜನೆಗೆ ವಿಘ್ನ, ಡಂಭಾಚಾರಿ, ಜಗಳವೆಂದರೆ ಪ್ರೀತಿ. ಹೃದಯದಲ್ಲಿ ಕಲ್ಮಶ. ವೈರಿಯ ನಾಶ ಮಾಡುತ್ತಾನೆ. ತಾಯಿಗೆ ಹಾನಿ. ಕಾಲಿನಿಂದ ತಲೆಯ ಪರ್ಯಂತ ರೋಗ ಪೀಡಿತನಾಗುವನು. ಧನನಾಶ. ಏಳನೆಯ ಮನೆಯಲ್ಲಿ ಬುಧ ಇದ್ದರೆ ತಾಯಿಯ ಸೌಖ್ಯ, ಕುದುರೆ ಮೊದಲಾದ ವಾಹನ ಸುಖ. ಶರೀರ ಸುಖ ದೊರಕುವುದು. ದೃಢ ಶರೀರ. ಧರ್ಮವನ್ನು ತಿಳಿದವನು. ಹೆಂಗಸಿನ ಮೂಲಕ ಬಂದ ಹಣವನ್ನು ಅನುಭವಿಸುತ್ತಾನೆ. ಬುಧ ಎಂಟನೆಯ ಮನೆಯಲ್ಲಿದ್ದರೆ ಆಯುರ್ಭಾವ ಚೆನ್ನಾಗಿರುತ್ತದೆ. ಭೂಮಿ ಲಾಭವಾಗುವ ಯೋಗ. ಶ್ರೀಮಂತ,ಗಂಡುಮಕ್ಕಳು ಕಡಿಮೆ. ಪ್ರಖ್ಯಾತವಾದ ಗುಣಗಳುಳ್ಳವನು. ಒಂಬತ್ತನೆಯ ಮನೆಯಲ್ಲಿ ಬುಧ ಇದ್ದರೆ ಬಹಳ ಜನರನ್ನು ವಶಮಾಡಿಕೊಂಡಿರುತ್ತಾರೆ. ಭಗವದ್ಗೀತೆ ಪಾರಾಯಣ ಮಾಡುವರು. ಶಕ್ತ ಆದರೂ ನಯವಂತ. ನೃತ್ಯ, ಸಂಗೀತ, ವಾದ್ಯಗಳು ಇಷ್ಟ. ಅನ್ಯ ಮಹಿಳೆಯರಲ್ಲಿ ಆಸಕ್ತ. ಹತ್ತರಲ್ಲಿರುವ ಬುಧ ಬಹು ಮಂಗಳದಾಯಕ, ಶುಭವುಂಟುಮಾಡುತ್ತಾನೆ. ಕರ್ಮದಲ್ಲಿ ಸಿದ್ಧಿಯುಂಟು, ಹಣ ಸಂಪಾದಿಸುವುದರಲ್ಲಿ ತೊಡಗುವನು. ಕಣ್ಣಿನ ಕಾಯಿಲೆ ಬರುವುದು. ಯೋಗಿ. ಯಜ್ಞ ಮಾಡುವನು. ವ್ಯವಹಾರದಲ್ಲಿ ತೊಡಗುವನು. ಹನ್ನೊಂದನೆಯ ಮನೆಯಲ್ಲಿ ಬುಧ ಇದರೆ ಶುಭದಾಯಕನಾಗುವನು. ಹಣ, ಧಾನ್ಯ ಹೇರಳವಾಗಿರುವುದು. ವ್ಯವಸಾಯ ಲಾಭಪ್ರದ. ಹನ್ನೆರಡನೆಯ ಮನೆಯಲ್ಲಿ ಬುಧ ಇದರೆ ಜ್ಞಾನಿಯಾಗುವನು. ಜೊತೆಗೆ ರವಿ ಸೇರಿದರೆ ಮನಸ್ಸು ಚಂಚಲ. ಅನೇಕ ಜನರಿಗೆ ಬೇಕಾದವನಾಗಿರುವನು. ಬಹು ಕಾಮಿ. ಪುತ್ರ ಸಂತಾನ ಕಮ್ಮಿ. ಇತರರ ಮನೆಯಲ್ಲಿ ವಾಸಮಾಡುವನು. ತಾಯಿಯ ವಧೆ ಮಾಡುತ್ತಾನೆ.

ಆಶ್ಲೇಷ, ಜ್ಯೇಷ್ಠ, ರೇವತಿ ನಕ್ಷತ್ರಗಳಲ್ಲಿ ಜನಿಸಿದವರಿಗೆ ಜನನ ಕಾಲದಲ್ಲಿ ಬುಧದಶೆ ನಡೆಯುತ್ತದೆ. ಇದರ ಅವಧಿ ಹದಿನೇಳು ವರ್ಷ.

ಬುಧದಶೆಯಲ್ಲಿ ವಿದ್ಯಾವಿಲಾಸದ ಸಂತೋಷ. ಸ್ವಜನರಲ್ಲಿ ಆನಂದ, ವಿಚಿತ್ರ ವಸ್ತ್ರಾಭರಣ, ಪಶು–ವಾಹನ–ರತ್ನ ಲಾಭ, ಧನಧಾನ್ಯವೃದ್ಧಿ,

ಸತ್ಕರ್ಮಸಿದ್ಧಿಗಳನ್ನು ಕೊಡುವನು.

ಬುಧ ಅತಿ ಉಚ್ಚರಾಶಿಯಲ್ಲಿದ್ದರೆ ತನ್ನ ದಶೆಯಲ್ಲಿ ದೇಶಾಧಿಪತ್ಯ, ನರ ವಾಹನ ಪ್ರಾಪ್ತಿ, ವಿದ್ಯಾವಿಲಾಸ, ಉತ್ತಮ ರತ್ನಲಾಭ, ವಿಚಿತ್ರವಾದ ಮನೆ ಯಲ್ಲಿ ವಾಸ ಉಂಟುಮಾಡುವನು. ಉಚ್ಚರಾಶಿಯಲ್ಲಿರುವ ಬುಧನ ದಶೆಯಲ್ಲಿ ಧನ ಧಾನ್ಯ ಅಭಿವೃದ್ಧಿ, ಪುರಾಣಗೀತ ಶ್ರವಣದ ವಿನೋದ, ಬಂಧುಗಳಿಗೆ ಉಪಕಾರ,ಗ್ರಾಮಭೂಮಿವೃದ್ಧಿ ಉಂಟಾಗುವುದು. ಸ್ವಕ್ಷೇತ್ರದಲ್ಲಿರುವಬುಧನ ದಶೆಯಲ್ಲಿ ಅತೀವ ಸುಖ, ಬಂಧು ಜನರಲ್ಲಿ ಪ್ರೀತಿ, ವಿಷ್ಣು ಪೂಜೆ, ಬ್ರಾಹ್ಮಣ ಪೂಜೆ, ಮಿತ್ರರಾಜನ ಸುಖವೂ ಲಭಿಸುವುದು. ಬುಧ ಅತಿಮಿತ್ರಕ್ಷೇತ್ರದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಮಿತ್ರತ್ವ, ಸಂತೋಷ, ಪತ್ನಿಪುತ್ರರ ಸೌಖ್ಯ, ಧನ ಧಾನ್ಯ ಕ್ಷೇತ್ರಗಳ ಅಭಿವೃದ್ಧಿ, ಸುಕೀರ್ತಿ, ಅಧಿಕಾರಲಾಭ ಉಂಟುಮಾಡುವನು. ಮಿತ್ರರಾಶಿಯಲ್ಲಿರುವ ಬುಧನ ದಶೆಯಲ್ಲಿ ಧನಲಾಭ, ಪಶು-ವ್ಯಾಪಾರ-ಕೃಷಿ-ಧಾನ್ಯ ವೃದ್ಧಿಯೂ, ಕುದುರೆ-ವಸ್ತ್ರ-ರತ್ನಗಳ ಲಾಭ ದೊರಕುವುದು. ಸಮ ರಾಶಿಯಲ್ಲಿರುವ ಬುಧನ ದಶೆಯಲ್ಲಿ ಅಲ್ಪಫಲ, ಅಲ್ಪಸುಖ, ಅಲ್ಪಲಾಭ, ಅಲ್ಪ ಕಷ್ಟ ಅನುಭವಕ್ಕೆ ಬರುವುದು. ಬುಧ ಶತ್ರುರಾಶಿಯಲ್ಲಿದ್ದರೆ ತನ್ನ ದಶಾಕಾಲ ದಲ್ಲಿ ಅತಿಕಷ್ಟ, ಸ್ವಜನ ಕೋಪ, ಅಪಕೀರ್ತಿ, ವಿನಯಹೀನ, ಶರೀರಬಾಧೆ ಸಮಾನ ಜನ ಕಷ್ಟ ಉಂಟುಮಾಡುವನು. ಅತಿಶತ್ರುರಾಶಿಯಲ್ಲಿರುವ ಬುಧನ ದಶೆಯಲ್ಲಿ ಅನಾಚಾರ, ಮತಿಭ್ರಮಣೆ, ಮನೋವಿಕಾರ, ರಾಜಭಯ, ಧನ ಹಾನಿ, ಸ್ಥಾನಭ್ರಷ್ಟತೆ, ಪಶುಹಾನಿ, ಸ್ವಜನ ವಿರೋಧ ಘಟಿಸುವುದು. ನೀಚ ರಾಶಿಯಲ್ಲಿರುವ ಬುಧನ ದಶೆಯಲ್ಲಿ ಅತೀವ ಕಷ್ಟ, ಮನೋವೈಕಲ್ಯ, ರಾಜ ಕೋಪ, ಅತಿ ವಿವಾದ, ಪರದೇಶ ವಾಸ ಹೊಂದುವನು. ಅತಿನೀಚ ರಾಶಿಯಲ್ಲಿ ರುವ ಬುಧನ ದಶೆಯಲ್ಲಿ ಸ್ವಸ್ಥಾನ ನಾಶ, ಕಷ್ಟ, ಧನನಾಶ, ವಿವಾದ, ಕುಲ ಹಾನಿ, ಮನೋವಿಕಾರ ಉಂಟಾಗುವುವು. ಬುಧ ಆರೋಹಿಯಾಗಿದ್ದಲ್ಲಿ ತನ್ನ ದಶಾಕಾಲದಲ್ಲಿ ರಾಜ್ಯಪ್ರಾಪ್ತಿ, ಮದುವೆ ಮುಂತಾದ ಉತ್ಸವಗಳು, ವಿಚಿತ್ರವಾದ ಮನೆ ಲಾಭವೂ ಸಂಭವಿಸುವುದು. ಅವರೋಹ ರಾಶಿಯಲ್ಲಿರುವ ಬುಧನ ದಶೆಯಲ್ಲಿ ಸ್ಥಾನ ನಾಶ, ಬಂಧುಗಳಲ್ಲಿ ಜಗಳ, ಕಷ್ಟಫಲ ಉಂಟಾಗುತ್ತದೆ. ಶುಭಗ್ರಹಯುತನಾದ ಬುಧನ ದಶೆಯಲ್ಲಿ ಅತೀವ ಸುಖ, ಪತ್ನಿ ಪುತ್ರರ ಸುಖ, ಮನೆಯಲ್ಲಿ ಮದುವೆ ಬೆಳೆಯುವುದು. ಪಾಪಗ್ರಹದೊಡನೆ ಇರುವ ಬುಧನ

ದಶೆಯಲ್ಲಿ ಮಾನಭಂಗ, ಬಂಧುವಿರೋಧ, ಸಮಾನಜನ ಪೀಡೆ ಉಂಟಾಗುವುದು.

ಬುಧ ಮೇಷರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜ್ಯಪ್ರಾಪ್ತಿ, ಬಂಧು ಸನ್ಮಾನ, ಮಣಿ ಆಭೂಷಣ ಲಾಭ, ಪತ್ನಿ–ಪುತ್ರ–ಜ್ಞಾತಿ ಸುಖ ಉಂಟುಮಾಡುವನು. ವೃಷಭದಲ್ಲಿರುವ ಬುಧನ ದಶೆಯಲ್ಲಿ ನಟ ಗಾಯಕರಿಂದ ವಿನೋದಗೋಷ್ಠಿ, ವಿದ್ಯಾವಿಲಾಸ, ಸತ್ಕರ್ಮಸಿದ್ಧಿ, ಸುಖವೃದ್ಧಿ, ಮಹತ್ವದ ಆಧಿಪತ್ಯ ಸಂಭವಿಸುವುದು. ಮಿಥುನ ರಾಶಿಯಲ್ಲಿರುವ ಬುಧನ ದಶೆಯಲ್ಲಿ ವಿದ್ಯಾವಿನೋದ, ಪತ್ನಿ-ಮಿತ್ರ-ಸುಖ, ಸಂಗೀತ ಹಾಸ್ಯ ವಿನೋದ, ಬಹು ಕೀರ್ತಿ, ಧಾನ್ಯ ಪಶುಕ್ಷೇತ್ರ ಸಮೃದ್ಧಿ, ರಾಜಪೂಜ್ಯತೆ, ಸುಖ ಉಂಟಾಗುವುದು. ಕಟಕದಲ್ಲಿರುವ ಬುಧನ ದಶೆಯಲ್ಲಿ ಬಂಧುದ್ವೇಷ, ತೇಜೋವಧೆ, ಬ್ರಾಹ್ಮಣ ಸುಜನರಲ್ಲಿ ವಿವಾದ, ಪದಭ್ರಂಶ, ಅಧಿಕಾರ ಹಾನಿ ಸಂಭವಿಸುವುದು. ಬುಧ ಸಿಂಹರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ನಗರದ ಆಧಿಪತ್ಯ, ರಾಜನಿಂದ ಸನ್ಮಾನ, ದುರ್ಗವನಗಳ ವಿಚಾರಣೆ ಉಂಟುಮಾಡುವನು. ಕನ್ಯಾದಲ್ಲಿರುವ ಬುಧನ ದಶೆಯಲ್ಲಿ ಯಶಸ್ಸು, ರಾಜ್ಯಪ್ರಾಪ್ತಿ, ಸುಖ. ಪತ್ನಿ ಪುತ್ರ-ಮಿತ್ರರ ಸುಖ, ವಿಚಿತ್ರ ವಸ್ತ್ರಗಳು, ಆಭರಣಗಳು ಲಭಿಸುವುವು. ತುಲಾದಲ್ಲಿರುವ ಬುಧನು ತನ್ನ ದಶೆಯಲ್ಲಿ ಸ್ತ್ರೀ ಸುಖ, ರಾಜನ ಸ್ನೇಹ, ಧಾನ್ಯ ವೃದ್ಧಿ, ವಿಚಿತ್ರವಾದ ಮನೆಯ ಲಾಭ ಉಂಟುಮಾಡುವನು. ವೃಶ್ಚಿಕದಲ್ಲಿರುವ ಬುಧನ ದಶೆಯಲ್ಲಿ ಕಷ್ಟಫಲ, ಭೂನಾಶ, ಸೋದರ ವರ್ಗದಲ್ಲಿ ಹಾನಿ, ಬಂಧು ದ್ವೇಷ ಕೊಡುವನು. ಧನುಸ್ಸಿನಲ್ಲಿರುವ ಬುಧನ ದಶೆಯಲ್ಲಿ ಜಯಪ್ರದ, ರಾಜನ ಸ್ನೇಹ, ಅಭಿವೃದ್ಧಿ, ಸುಖ, ಶತ್ರುನಾಶ, ಗಾನಗೋಷ್ಠಿ ಜರುಗುವುವು. ಬುಧ ಮಕರರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜ್ಯಪ್ರಾಪ್ತಿ, ಕಠಿಣವಾದ ಮಾತು ಮಿತ್ರರಿಗೆ ಸುಖ ವಿದ್ಯಾ ವಿನೋದ, ಹಣ ಲಾಭ, ಬಂಧುಗಳಿಗೆ ಸುಖ ಉಂಟುಮಾಡುವನು. ಕುಂಭದಲ್ಲಿರುವ ಬುಧನ ದಶೆಯಲ್ಲಿ ಉತ್ತಮವಸ್ತ್ರ ಲಾಭ, ಊಟ ಶಯನಾದಿ ಸುಖ, ನರವಾಹನ ಲಾಭ ಉಂಟಾಗುವುದು. ಮೀನದಲ್ಲಿರುವ ಬುಧನ ದಶೆಯಲ್ಲಿ ಪತ್ನಿ ಪುತ್ರರ ನಾಶ, ಅತೀವ ಕಷ್ಟ, ಸ್ಥಾನನಾಶ, ಸ್ವಜನ ಕೋಪ, ಸಮಾನ ಜನನಾಶ ಸಂಭವಿಸುವುದು.

ಬುಧ ಲಗ್ನದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕೀರ್ತಿಯು ಹೆಚ್ಚಳ, ವಿದ್ಯಾಲಾಭ, ರಾಜಸನ್ಮಾನ, ಆರೋಗ್ಯ, ವಸ್ತ್ರಾಭರಣಲಾಭ ಉಂಟುಮಾಡುತ್ತಾನೆ. ಎರಡನೆಯ ಮನೆಯ ಲ್ಲಿರುವ ಧನ ದಶೆಯಲ್ಲಿ ವಾಗ್ವಿಲಾಸ, ಕುಟುಂಬ ಸಂರಕ್ಷಣೆ, ಧನವೃದ್ಧಿ, ಸಾಲತೀರಿಕೆ, ಧನಲಾಭ ಉಂಟಾಗುವುದು. ಮೂರರಲ್ಲಿರುವ ಬುಧನ ದಶೆಯಲ್ಲಿ ಉತ್ತಮ ಆಭರಣ ಲಾಭ, ಯುದ್ಧದಲ್ಲಿ ಜಯ, ಸೋದರ ವರ್ಗದಲ್ಲಿ ವಿವಾಹ ಸುಖ, ಮದುವೆ ಆದಿಯಾಗಿ ಮಂಗಳ ಮಹೋತ್ಸವಗಳು ಜರುಗುವುವು. ನಾಲ್ಕರಲ್ಲಿರುವ ಬುಧನ ದಶೆಯಲ್ಲಿ ಮನೆ ಲಾಭ, ಧಾನ್ಯ ವೃದ್ಧಿ, ಉತ್ತಮ ಮಣಿ ಲಾಭ, ಬಂಧುವೃದ್ಧಿ, ವಿದ್ಯಾಲಾಭ, ಕ್ಷೇತ್ರವೃದ್ಧಿ ಲಭಿಸುವುದು. ಬುಧ ಐದನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಜ್ಞಾನ, ಸಜ್ಜನಪೂಜೆ. ಧಾನ್ಯ ಕ್ಷೇತ್ರ ವೃದ್ಧಿ, ಸುಖ, ಧನವೃದ್ಧಿ, ಗುರು ಮುಖೇನ ಮಂತ್ರಸಿದ್ಧಿ, ಪುತ್ರವೃದ್ಧಿ ಉಂಟುಮಾಡುತ್ತಾನೆ. ಆರರಲ್ಲಿರುವ ಬುಧನ ದಶೆಯಲ್ಲಿ ಶತ್ರು ವೃದ್ಧಿ, ಬಂಧುವಿರೋಧ, ರೋಗ, ಜಗಳ, ರಾಜಕೋಪ, ಸ್ಥಾನನಾಶ ಘಟಿಸುವುದು. ಏಳನೆಯ ಮನೆಯಲ್ಲಿರುವ ಬುಧನ ದಶೆಯಲ್ಲಿ ಶುಭ ವಿವಾಹ, ಅಪೂರ್ವ ಸ್ನೇಹಿತನ ಭೇಟಿ, ಬಂಧುಜನರಿಗೆ ಉಪಕಾರ, ಅತೀವ ಸುಖ ಲಭಿಸುವುದು. ಎಂಟರಲ್ಲಿರುವ ಬುಧನ ದಶೆಯಲ್ಲಿ ಅತೀವ ಕಷ್ಟ, ಚಂಚಲ ಮನಸ್ಸು, ಸನ್ಮಾನಜನ ದುಃಖ, ಸ್ಥಾನ ಚಲನೆ, ಕಳ್ಳರ ಪೀಡೆ, ಅಗ್ನಿಬಾಧೆ, ಶತ್ರುವೃದ್ಧಿ ಉಂಟಾಗುವುದು. ಒಂಬತ್ತರಲ್ಲಿರುವ ಬುಧನ ದಶೆಯಲ್ಲಿ ಜ್ಞಾನ, ಸುಜನಪೂಜೆ, ಪತ್ನಿಪುತ್ರರ ಸುಖ, ಧರ್ಮಸಿದ್ಧಿ, ದಾನ ಧರ್ಮ ನಡೆಯುವುವು. ಬುಧ ಹತ್ತನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಲಾಭ, ಮದುವೆ ಮೊದಲಾದ ಕೀರ್ತಿ, ಸುಖ ಉಂಟುಮಾಡುವನು. ಹನ್ನೊಂದರಲ್ಲಿರುವ ಬುಧನ ದಶೆಯಲ್ಲಿ ಅಧಿಕಾರ ಪ್ರಾಪ್ತಿ, ಕ್ಷೇತ್ರ ಧಾನ್ಯಲಾಭ, ವಾಗ್ವಿಲಾಸ, ಅತಿಲಾಭ ಸಂಭವಿಸುವುದು. ಹನ್ನೆರಡರಲ್ಲಿರುವ ಬುಧನ ದಶೆಯಲ್ಲಿ ಬಂಧುನಾಶ, ನಾನಾಕಷ್ಟಗಳು, ಸ್ಥಾನನಾಶ, ಪರದೇಶವಾಸ, ಪಶುಧಾನ್ಯಕ್ಷೇತ್ರ ನಾಶ ಸಂಭವಿಸುವುದು.

ಕೇಂದ್ರಸ್ಥಾನದಲ್ಲಿರುವ ಬುಧನ ದಶೆಯಲ್ಲಿ ಪುತ್ರಲಾಭ, ದಾನ ಧರ್ಮಾದಿ ಚಿಂತನೆ, ಬಂಧುವೃದ್ಧಿ ಉಂಟಾಗುವುದು. ತ್ರಿಕೋಣಗಳಲ್ಲಿರುವ ಬುಧನ ದಶೆಯಲ್ಲಿ ಉತ್ಕೃಷ್ಟಭೂಷಣ ಲಾಭ, ಕೀರ್ತಿಲಾಭ, ಅಪೂರ್ವ ಬಂಧು

ಗಳ ಆಗಮನ ಘಟಿಸುವುದು. 6–8–12ನೆಯ ಮನೆಗಳಲ್ಲಿರುವ ಬುಧನ ದಶೆಯಲ್ಲಿ ಸ್ಥಾನ ಚಲನೆ, ಸಮಾನಜನದುಃಖ, ಸರ್ವನಾಶ ಉಂಟಾಗುತ್ತದೆ.

ಮಿಥುನ ಲಗ್ನದಲ್ಲಿ ಜನಿಸಿದವರಿಗೆ ಕುಜ, ಗುರು, ರವಿ ಪಾಪಿಗಳು. ಶುಕ್ರ ಮಾತ್ರ ಶುಭಕರ. ಗುರು ಶನಿಗಳ ಯುತಿ ಮೇಷ ಲಗ್ನಕ್ಕೆ ಹೇಗೆ ಶುಭ ಕರವಲ್ಲವೋ ಅದೇ ರೀತಿ ಮಿಥುನ ಲಗ್ನಕ್ಕೂ ಸುಖಕರವಲ್ಲ.

ಮಿಥುನ ರಾಶಿಗೆ ಉಕ್ತವಾದ ನಕ್ಷತ್ರಗಳು ಮೃಗಶಿರಾ 3–4 ನೇ ಪಾದಗಳು, ಆರಿದ್ರಾ ಮತ್ತು ಪುನರ್ವಸು 1–2–3 ನೇ ಪಾದಗಳು.

ಚಂದ್ರ ಮೃಗಶಿರಾ ನಕ್ಷತ್ರದ ದೇವತೆ. ಈ ನಕ್ಷತ್ರದಲ್ಲಿ ಹುಟ್ಟಿದವನು ಸೌಮ್ಯ ಸ್ವಭಾವದವನು, ಅಭಿವೃದ್ಧಿಗೆ ಬರುವನು. 3 ನೇ ಪಾದದಲ್ಲಿ ಜನಿಸಿದವನು ರೂಪಸ್ಥ, ಬುದ್ಧಿವಂತ, ಧಾರಾಳವಂತ ಹಾಗೂ ಧೈರ್ಯಶಾಲಿ. 4 ನೇ ಪಾದವಾದರೆ ಕಾಮಿ, ತಲೆಯಲ್ಲಿ ಹುಣ್ಣಾಗುವುದು, ಹಣವಿಲ್ಲದವನು, ಜನದ್ವೇಷಿ. ಈ ನಕ್ಷತ್ರದಲ್ಲಿ ಸಾವಾನು ಹೋದರೆ ಮೂರು ದಿವಸಗಳೊಳಗೆ ಸಿಗುವುದು. ಮೃಗಶಿರಾ ನಕ್ಷತ್ರದಲ್ಲಿ ರೋಗ ಬಂದರೆ 8 ದಿವಸ ಅಥವಾ 8 ತಿಂಗಳು ಕಾಡುತ್ತದೆ. 6–7 ನೇ ವರ್ಷಗಳಲ್ಲಿ ಅಪಮೃತ್ಯುವುಂಟು. ಪರಮ ಆಯುರ್ದಾಯ 87 ವರ್ಷಗಳು.

ಆರಿದ್ರ ನಕ್ಷತ್ರದ ಅಧಿದೇವತೆ ರುದ್ರ. ಈ ನಕ್ಷತ್ರದಲ್ಲಿ ಜನಿಸಿದವನು ವ್ಯಾಪಾರದಲ್ಲಿ ನಷ್ಟ ಹೊಂದಬಹುದು, ಉಪಕಾರ ಪಡೆದು ಮರೆತುಬಿಡುವಂಥವನು ಹಾಗೂ ಕೊಂಡು ಮಾರುವುದರಲ್ಲಿ ಬುದ್ಧಿವಂತ. 1 ನೇ ಪಾದದಲ್ಲಿ ಹುಟ್ಟಿದವನು ಗುಣಶಾಲಿ ಮತ್ತು ದಯಾವಂತ. 2 ನೇ ಪಾದವಾದರೆ ಸದಾ ದುಃಖಿ. ಕಲ್ಲು ಕೆಲಸ ಮಾಡಿಸುವವನು. 3 ನೇ ಪಾದದಲ್ಲಿ ಮುಂಗೋಪಿ, ಸೋಮಾರಿ. 4 ನೇ ಪಾದವಾದರೆ ದುರಾಲೋಚನೆ ಮಾಡುವವನೂ, ಬುದ್ಧಿವಂತನೂ ಆಗುವನು. ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ದೊರಕುತ್ತದೆ. ಆರಿದ್ರಾದಲ್ಲಿ ಜ್ವರ ಬಂದರೆ ಒಂದು ತಿಂಗಳು ಕ್ರೂರ. 1, 7, 18, 19, 50ನೇ ವರ್ಷಗಳಲ್ಲಿ ಅಪಮೃತ್ಯು ಭೀತಿಯುಂಟು. ಪರಮಾಯುಸ್ಸು 71 ವರ್ಷ.

ಪುನರ್ವಸು ನಕ್ಷತ್ರದ ವಿವರ ಚಂದ್ರನ ಅಧ್ಯಾಯದಲ್ಲಿ ಹೇಳಿದೆ. ಪುನರ್ವಸು 1 ನೇ ಪಾದದಲ್ಲಿ ಜನನವಾದರೆ ಕಳ್ಳನಾಗುವನು. 2 ನೇ ಪಾದವಾದರೆ ಭೋಜನಪ್ರಿಯ. 3 ನೇ ಪಾದದಲ್ಲಿ ಬುದ್ಧಿಶಾಲಿಯಾಗುವನು.

ಕನ್ಯಾಲಗ್ನ ಜಾತರಿಗೆ ಚಂದ್ರ, ಕುಜ, ಶುಕ್ರರು ಪಾಪಿಗಳು. ಭಾಗ್ಯಾಧಿಪತ್ಯವಿರುವ ಶುಕ್ರ ಒಬ್ಬ ಶುಭದಾಯಕ. ಶುಕ್ರನೊಡನೆ ಸೇರಿದರೆ ಬುಧ ರಾಜಯೋಗ ಉಂಟುಮಾಡುತ್ತಾನೆ. ಶುಕ್ರ ಮಾರಕನಾಗುವುದಿಲ್ಲ ಕುಜ ಮೊದಲಾದವರು ಮಾರಕರಾಗುತ್ತಾರೆ.

ಕನ್ಯಾ ರಾಶಿಯಲ್ಲಿ ಬರುವ ನಕ್ಷತ್ರಗಳು 2–3–4 ನೇ ಪಾದ ಉತ್ತರಾ ನಕ್ಷತ್ರ, ಹಸ್ತಾ ಹಾಗೂ ಚಿತ್ತಾ 1–2 ನೇ ಪಾದಗಳು.

ಉತ್ತರಾ ನಕ್ಷತ್ರದ 2 ನೇ ಪಾದದಲ್ಲಿ ಹಾಗೂ 3–4 ನೇ ಪಾದಗಳಲ್ಲಿ ಜನಿಸಿದವರು ಕನ್ಯಾ ರಾಶಿಯವರಾಗುತ್ತಾರೆ. ವಿವರಗಳಿಗೆ 'ರವಿ' ಅಧ್ಯಾಯ ನೋಡಬೇಕು.

ರವಿ ಹಸ್ತಾ ನಕ್ಷತ್ರದ ಅಧಿನೇವತೆ. ಐದು ಗಂಡಾಂತರಗಳು ಕಳೆದು ಹೋದರೆ ಆಯುಸ್ಸು 88 ವರ್ಷಗಳು. ಚಿಕಿತ್ಸೆ ಆರಂಭಿಸಲು ಒಳ್ಳೆಯ ನಕ್ಷತ್ರ. ಈ ನಕ್ಷತ್ರದಲ್ಲಿ ಕಾಯಿಲೆ ಬಂದರೆ ಬೇಗ ಗುಣವಾಗುತ್ತದೆ.

ಚಿತ್ತಾ ನಕ್ಷತ್ರದಲ್ಲಿ ಜನಿಸಿದವನು ಕಾಮಿ, ಒಳ್ಳೆಯ ಸ್ನೇಹಿತ, ರೂಪವಂತ,ಸೊಗಸುಗಾರ ಭೋಗಿ. 1ನೇ ಪಾದದಲ್ಲಿ ಜನಿಸಿದವನು ಚಪಲ ಸ್ವಭಾವ, ಸಿಟ್ಟಿನ ಧಣಿ. 2 ನೇ ಪಾದವಾದರೆ ಹಿತಕರವಾಗಿ ಮಾತನಾಡಬಲ್ಲವನು. 3ನೇ ಪಾದವಾದರೆ ಕೀರ್ತಿ, ವಿದ್ಯೆ, ಶೌರ್ಯವುಳ್ಳವನಾಗಿರುತ್ತಾನೆ. 4ನೇ ಪಾದದಲ್ಲಿ ಧೈರ್ಯಶಾಲಿ, ಪರಾಕ್ರಮಿ, ಕಳ್ಳ. ಈ ನಕ್ಷತ್ರನಲ್ಲಿ ಜ್ವರ ಬಂದರೆ 15 ದಿವಸಗಳು ಕ್ರೂರ. 5, 6, 7, 20, 21ನೇ ವರ್ಷಗಳು ಗಂಡಕಾಲ. ಪರಮಾಯುರ್ದಾಯ 80 ವರ್ಷಗಳು.

ಚಿತ್ತಾ ನಕ್ಷತ್ರದಲ್ಲಿ ಜನಿಸಿದ ಮಗುವನ್ನು ತಂದೆ ಆರು ತಿಂಗಳಾಗುವವರೆಗೆ ನೋಡಬಾರದು. ಶಾಂತಿ ಮಾಡಿಸಿ ಬೇಕಾದರೆ ನೋಡಬಹುದಷ್ಟೆ.

೭

ಗುರು

ಶುಭ ಗ್ರಹಗಳಲ್ಲಿ ಶ್ರೇಷ್ಠನಾದನು ಗುರು. ಗುರುವಿನ ಕಾರಕತ್ವವೆಂದರೆ ಮಂತ್ರಿ, ಮಂತ್ರ, ಪ್ರಧಾನಿ, ವೇದ, ವೇದಾಂತ, ಬ್ರಾಹ್ಮಣ ಕರ್ಮಗಳು, ಭಕ್ತಿ, ಶ್ರದ್ಧೆ, ಬುದ್ಧಿಶಕ್ತಿ, ಓಂಕಾರ, ಜೊಕ್ಕಟಶುಭ್ರ, ಸನ್ನಡತೆ, ವಿಷ್ಣು, ಆನೆ, ಮರ್ಯಾದೆ, ಸುಸ್ವರ, ಮಾನು, ಎಲ್ಲಾ ಕೆಲಸಗಳಲ್ಲೂ ಜಯ, ಕೀರ್ತಿ, ಗೌರವ, ವಿದ್ಯೆ, ಪಾಠ ಹೇಳುವುದು, ಪೂರ್ಣ ಪಾರಂಗತಿ, ದೇವಸ್ಥಾನ, ಧರ್ಮದ ದುಡ್ಡು, ನೆಂಟಸ್ಥಿಕೆ, ಮಕ್ಕಳು, ಸುಖ ಇವು.

ಧನಸ್ಸು, ಮೀನ ರಾಶಿಗಳು ಗುರುವಿನ ಸ್ವಕ್ಷೇತ್ರಗಳು. ಕಟಕ ಉಚ್ಚ ರಾಶಿ. ಹಾಗೆಯೇ ಮಕರ ನೀಚರಾಶಿ. ಮೂಲ ತ್ರಿಕೋಣ ಧನಸ್ಸು. ಪುಷ್ಯ ರಾಗ ಗ್ರಹರತ್ನ. ಗ್ರಹಲೋಹ ತವರ. ಗುರುವಿನ ಮಿತ್ರಗ್ರಹಗಳು ರವಿ, ಕುಜ. ಬುಧ, ಶುಕ್ರ ಶತ್ರುಗಳು. ಶನಿ ಸಮ.

ಲಗ್ನಾದಿಯಾಗಿ ಹನ್ನೆರಡು ಮನೆಗಳಲ್ಲಿ ಗುರು ಇದ್ದರೆ ದೊರಕುವ ಫಲಗಳಿವು. ಲಗ್ನವು ಸ್ವಕ್ಷೇತ್ರಗಳಾದ ಧನಸ್ಸು, ಮೀನಗಳಲ್ಲೊಂದಾಗಿ ಅಲ್ಲಿ ಗುರು ಇದ್ದರೆ ಜಾತಕನು ಶಬ್ದಶಾಸ್ತ್ರದಲ್ಲಿ ಪಾರಂಗತನಾಗುವನು. ಹೆಚ್ಚು ಜನ ಪುತ್ರರು. ಸೌಖ್ಯವಂತ, ವಿದ್ವಾಂಸ, ಪ್ರಭುತ್ವವಿರುವುದು. ದೀರ್ಘಾಯುಷ್ಯ, ರಾಜನಿಂದ ಮನ್ನಣೆ, ಚತುರ. ಎರಡನೇ ಮನೆಯಲ್ಲಿ ಗುರು ಇದ್ದರೆ ಶುಭಕರನಾಗುವನು. ಬುದ್ಧಿಶಾಲಿ ಹಾಗೂ ಹಣವಂತ, ಮಾತು ಸ್ಪುಟ, ಶ್ರೀಮಂತ. ಉತ್ತಮವಾದ ಕುಟುಂಬ. ಮೃದು ಮಾತು. ಬಲು ಧನವಂತ, ಹಣ ಕೂಡಿಟ್ಟಿರುತ್ತಾನೆ. ಬಂಧುಗಳಲ್ಲಿ ಈತ ಪ್ರಬಲನಾಗಿರುತ್ತಾನೆ. ಗುರು ಮೂರನೆಯ ಮನೆಯಲ್ಲಿದ್ದರೆ ಕಡು ಜಿಪುಣನಾಗುವನು. ಸಹೋದರರ ವೃದ್ಧಿ, ದಯಾವಂತ, ಸಂಕಲ್ಪಿಸಿದ್ದು ನೆರವೇರುತ್ತದೆ, ವ್ಯವಸಾಯದಲ್ಲಿ ಆಸಕ್ತಿ, ಕೀಳು ಮಟ್ಟದಲ್ಲಿರುವವನು. ಸ್ವಜನರನ್ನು ಪೋಷಿಸುವನು. ನಾಲ್ಕನೇ ಮನೆಯಲ್ಲಿ ಗುರು ಉಳ್ಳವರು ಸುಖವಾಗಿರುತ್ತಾರೆ. ಬುದ್ಧಿವಂತ

ಸಮೃದ್ಧಿಯಾಗಿ ಹಾಲು, ವಾಹನಯೋಗವಿದೆ. ನೆಂಟರನ್ನು ಪೋಷಿಸುವನು. ಮನೆವಾರ್ತೆಯ ಹೊಣೆ ಇವನದು. ಜನರಲ್ಲಿ ಸುಲಭವಾಗಿ ಬೆರೆಯುವನು. ಐದನೆಯ ಮನೆಯಲ್ಲಿ ಗುರು ಇದ್ದರೆ ವಿಶಾಲವಾದ ಕಣ್ಣು, ರಾಜನ ಬಳಿ ಸೇನಾಧಿಪತಿ, ಕಡಿಮೆ ಪುತ್ರರು ಹಾಗೂ ಬುದ್ಧಿವಂತ. ಕೊಡ–ಕೊಳ್ಳುವ ವ್ಯವಹಾರದಲ್ಲಿ ಚತುರ. ತಂದೆಗಿಂತ ಮಿಗಿಲಾಗಿ ಬಾಳುವನು. ಪುತ್ರ ಐಶ್ವರ್ಯಾದಿಗಳನ್ನು ಕೊಡತಕ್ಕವನು. ಅತೀವ ಅನಿಷ್ಠ. ಆರರಲ್ಲಿ ಗುರು ಇದ್ದರೆ ಶತ್ರುಗಳು ಕ್ಷೀಣಿಸುತ್ತಾರೆ. ಜ್ಞಾತಿಗಳಿಗೆ ವೃದ್ಧಿ. ಮೊಮ್ಮಕ್ಕಳನ್ನು ಕಾಣುವರು. ಹಾಸ್ಯ ಸ್ವಭಾವ. ಅಗ್ನಿಮಾಂದ್ಯ ಮೊದಲಾದ ಕಾಯಿಲೆಗಳು ತಲೆದೋರುವುವು. ಗುರು ಏಳನೆಯ ಸ್ಥಾನದಲ್ಲಿದ್ದರೆ ವಿದ್ಯಾವಂತನಾಗುವನು. ಅಭಿಮಾನಿ, ಉತ್ತಮಳಾದ ಪತ್ನಿ ದೊರಕುವಳು. ಪ್ರತಿಷ್ಠಿತ ಮನೆತನದಲ್ಲಿ ಮದುವೆ ಆಗುವುದು. ಪತ್ನಿ ಪತಿವ್ರತೆ, ಯಾತ್ರೆ ಮಾಡುವ ಯೋಗ, ವ್ಯಾಪಾರದಲ್ಲಿ ಅಭಿವೃದ್ಧಿ. ಎಂಟನೆಯ ಮನೆಯಲ್ಲಿ ಗುರು ಇದ್ದರೆ ಹೇಯವಾದ ಕೆಲಸಗಳನ್ನು ಮಾಡುವನು. ಪಾಪಿ, ವಿಧವೆಯ ಸಂಬಂಧ ಮಾಡುವನು. ಆಚಾರಗಳು ಶುದ್ಧವಿರುವುದಿಲ್ಲ. ಹೊಟ್ಟೆನೋವು, ಭಳಕು ರೋಗವಿರುತ್ತದೆ. ದೀರ್ಘಾಯುಷಿ. ಹಣ ತೆಗೆದುಕೊಂಡು ಪಾಠ ಹೇಳಿಕೊಡುವವನು. ಒಂಬತ್ತರಲ್ಲಿ ಗುರು ಇದ್ದರೆ ಧರ್ಮಶ್ರದ್ಧೆ ಇರುತ್ತದೆ. ತಪಸ್ವಿ. ಪುತ್ರರ ಸಂಖ್ಯೆ ಅಧಿಕ. ಯಜ್ಞ ಮಾಡುವನು. ಹಿಂದಿನಿಂದ ನಡೆದುಬಂದ ಪದ್ಧತಿ ಆಚಾರಗಳನ್ನು ನಡೆಸುವನು. ದಾನ ಧರ್ಮ ಮಾಡುತ್ತಾನೆ. ಶ್ರೀಮಂತ. ತಂದೆಗೆ ದೀರ್ಘಾಯುಸ್ಸು. ಧರ್ಮಕಾರ್ಯಗಳಲ್ಲಿ ಆಸಕ್ತ. ಗುರು ಹತ್ತರಲ್ಲಿದರೆ ವಿದ್ವಾಂಸನಾಗುವನು. ಕುದುರೆ ಮುಂತಾದವುಗಳ ಸವಾರಿ ಮಾಡುವನು. ಹಣವಂತ, ಪ್ರತಿಷ್ಠಿತ, ದುಡ್ಡು–ದವಸಧಾನ್ಯಗಳ ಸಂಪತ್ತೇ ಸೇರುವುದು. ಯಜ್ಞ ನಡೆಸುವನು. ವಾಹನಯೋಗ, ಪುತ್ರ ಜನನ, ಗ್ರಾಮದ ಮುಖ್ಯಸ್ಥ, ದಾಸೀಜನ ಭೃತ್ಯರನ್ನು ಸಂಗ್ರಹಿಸುವನು. ಕೂಡಿಟ್ಟ ಹಣ ಇರುತ್ತದೆ, ಯಾವುದೇ ಕೆಲಸ ಮಾಡಬೇಕಾದರೂ ಸರ್ವ ಸಿದ್ಧತೆಗಳನ್ನೂ ಮಾಡಿಕೊಂಡೇ ಆರಂಭಿಸುವನು. ಹನ್ನೊಂದರಲ್ಲಿ ಗುರು ಇದ್ದರೆ ಭಗವದ್ಗೀತೆ ಪಾರಾಯಣ ಮಾಡುವನು. ಆನೆ, ಕುದುರೆ, ಮೊದಲಾದ ವಾಹನಗಳು ಲಭ್ಯ. ಬಹು ಧನ ಸಂಪನ್ನ. ಶುಭಕರವಾದ ಕೆಲಸಗಳನ್ನು ಮಾಡುವನು.

ಗುರು ಹನ್ನೆರಡನೆಯ ಮನೆಯಲ್ಲಿದ್ದರೆ ಪತಿತನೆನಿಸುವನು. ಬಡವ. ಪುತ್ರ ಸಂತಾನ ಕಡಿಮೆ. ವೇಶ್ಯೆಯ ಸಂಗ ಮಾಡುವನು. ಗಂಟುಗಂಟಾಗಿರುವ ಕಟ್ಟುಹುಣ್ಣು ಆಗುವುದು. ಸತ್ಪಾತ್ರರಿಗೆ ಖರ್ಚು ಮಾಡುತ್ತಾನೆ. ವಿರಕ್ತ, ಸನ್ಯಾಸ ಯೋಗವುಂಟು. ವಿಚಿತ್ರ ಮಂಚ, ಶಯ್ಯೆಗಳು ದೊರಕುವುವು.

ಗುರುದಶೆ ನಡೆಯುವ ಕಾಲ ಹದಿನಾರು ವರ್ಷಗಳು. ಪುನರ್ವಸು, ವಿಶಾಖ, ಪೂರ್ವಾಭಾದ್ರ ನಕ್ಷತ್ರಗಳಲ್ಲಿ ಹುಟ್ಟಿದವರಿಗೆ ಆರಂಭದಲ್ಲಿ ಗುರುದಶೆ.

ಚಿನ್ನ, ಆಭರಣ, ವಸ್ತ್ರಗಳ ಸಂಪಾದನೆ, ಸ್ವಜನಗಳಿಂದ ಸಂತೋಷ, ಪುತ್ರ ಪತ್ನೀ ಸುಖವೈಭವ, ವಿದ್ಯಾವೈಭವ, ಪಶುಧಾನ್ಯವೃದ್ಧಿ ಮೊದಲಾದ ಫಲಗಳು ಗುರುದಶೆಯಲ್ಲಿ ಅನುಭವಕ್ಕೆ ಬರುವುವು.

ಅತ್ಯುಚ್ಚ ರಾಶಿಯಲ್ಲಿರುವ ಗುರುವಿನ ದಶೆಯಲ್ಲಿ ರತ್ನಲಾಭ, ಸ್ವಜನರಿಂದ ಸಂತೋಷ, ವಾಹನ, ವಸ್ತ್ರ, ಆಭರಣ, ಅತೀವ ಸುಖಹೊಂದುವನು. ಗುರು ಉಚ್ಚರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಪುತ್ರವೃದ್ಧಿ, ಯಜ್ಞಾದಿ ಸತ್ಕರ್ಮಸಿದ್ಧಿ, ಸುಖ, ಬಂಧುವೃದ್ಧಿ, ಮನೋವಿಲಾಸ, ಪರಮಾಧಿಕಾರಗಳನ್ನು ಕೊಡುವನು. ಅತಿಮಿತ್ರ ರಾಶಿಯಲ್ಲಿರುವ ಗುರುವಿನ ದಶೆಯಲ್ಲಿ ರಾಜನಿಂದ ಬಹುಮಾನ, ಧನಧಾನ್ಯ ಸಮೃದ್ಧಿ, ಪತ್ನಿಪುತ್ರರ ಸುಖ, ಕೀರ್ತಿ ಲಾಭ, ರಾಜ್ಯ ಅಥವಾ ಗ್ರಾಮದ ಅಧಿಕಾರ, ಭೂಮಿ ಮೊದಲಾದವುಗಳ ಅಭಿವೃದ್ಧಿ ಸಿದ್ಧಿಸುವುದು. ಮಿತ್ರಕ್ಷೇತ್ರದಲ್ಲಿರುವ ಗುರುವಿನ ದಶೆಯಲ್ಲಿ ಉತ್ಕೃಷ್ಟವಾದ ವಸ್ತುಲಾಭ, ಪುರಾಣ ಸಂಗೀತ ಶ್ರವಣ, ಧಾನ್ಯಾಭಿವೃದ್ಧಿ, ರಾಜ್ಯ ಅಥವಾ ಗ್ರಾಮದ ಅಧಿಪತ್ಯ. ಪಶುವೃದ್ಧಿ ಉಂಟಾಗುವುದು. ಗುರು ಸ್ವಕ್ಷೇತ್ರದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಚಿನ್ನದ ಹೆಚ್ಚಳ, ಮನೆ ಧಾನ್ಯಗಳ ವಿಶೇಷಲಾಭ, ರಾಜ್ಯಾಧಿಕಾರದಿಂದ ದೊರಕುವ ವೈಭವ, ವಿದ್ಯಾ ವಿನೋದ ವೈಭವ, ಉತ್ತಮ ರತ್ನ ಲಾಭವನ್ನು ಕೊಡುವನು. ಸಮರಾಶಿಯಲ್ಲಿರುವ ಗುರು ದಶೆಯಲ್ಲಿ ರಾಜನ ಸ್ನೇಹ, ಸ್ವಜನರಿಂದ ಅನುಕೂಲ, ಉತ್ತಮ ತೀರ್ಥಯಾತ್ರೆಯ ಫಲ, ಧಾನ್ಯವೃದ್ಧಿ, ಅಲ್ಪ ಸುಖ ಉಂಟಾಗುವುದು. ಶತ್ರುರಾಶಿಯಲ್ಲಿರುವ ಗುರುವಿನ ದಶೆಯಲ್ಲಿ ಮನೋವ್ಯಥೆ, ಶಾರೀರಿಕ ಕಷ್ಟ, ಸ್ಥಾನ ಭ್ರಷ್ಟತೆ, ಧನಹಾನಿ, ಭೂಮಿನಾಶಗಳು ಒದಗುವುವು. ಅತಿ ಶತ್ರುರಾಶಿಯಲ್ಲಿರುವ ಗುರುವಿನ ದಶಾಕಾಲದಲ್ಲಿ ಪತ್ನಿಪುತ್ರರ ನಾಶ, ಅನಾರೋಗ್ಯ, ಅತೀವ

ಭಯ ಉಂಟಾಗುತ್ತದೆ. ನೀಚಗ್ರಹದೊಡನೆ ಇರುವ ಗುರುವಿನ ದಶೆಯಲ್ಲಿ ಮನೋವ್ಯಥೆ, ಧನ ಮುಂತಾದವುಗಳ ನಾಶ, ಪತ್ನೀನಾಶ, ಸ್ವಜನ ವಿರೋಧ, ಕೃಷಿನಾಶ, ಅತೀವ ಕಷ್ಟ ಸಂಭವಿಸುವುದು. ಅತಿನೀಚರಾಶಿಯಲ್ಲಿರುವ ಗುರುವಿನ ದಶೆಯಲ್ಲಿ ರಾಜದಂಡನೆ, ಸಮಾನ ಜನ ನಾಶ, ಪತ್ನಿಪುತ್ರರಿಗೆ ಅನಿಷ್ಟ, ಸ್ಥಾನನಾಶ, ಧನಹಾನಿ, ಅತಿಕಷ್ಟ ಉಂಟಾಗುತ್ತದೆ. ಆರೋಹಿಯಾಗಿರುವ ಗುರುವಿನ ದಶೆಯಲ್ಲಿ ಧನಧಾನ್ಯ ಲಾಭ, ರಾಜವಶ್ಯ ಹಾಗೂ ರಾಜ್ಯಫಲ ದೊರೆಯುವುದು. ಅವರೋಹಿ ಗುರುವಿನ ದಶಾಕಾಲದಲ್ಲಿ ಧನವ್ಯಯ, ಸ್ಥಾನಭ್ರಷ್ಟತ್ವ, ರಾಜದ್ವೇಷ, ಮನಸ್ತಾಪ ಘಟಿಸುವುವು. ಗುರು ಶುಭಗ್ರಹಯುಕ್ತನಾಗಿದ್ದರೆ ತನ್ನ ದಶೆಯಲ್ಲಿ ಯತ್ನಕಾರ್ಯದಲ್ಲಿ ಜಯ, ಬಂಧುಗಳ ಆಗಮನ, ಸುಖಫಲ ಕೊಡುವನು. ಪಾಪಗ್ರಹದೊಡನಿರುವ ಗುರುವಿನ ದಶೆಯಲ್ಲಿ ಕಷ್ಟಫಲ, ಎಲ್ಲರಲ್ಲಿ ದ್ವೇಷ, ಯತ್ನಕಾರ್ಯನಾಶ ಉಂಟಾಗುವುವು.

ಗುರು ಮೇಷರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಶ್ರೇಷ್ಠವಾದ ಅಧಿಪತ್ಯ, ಕಾರ್ಯಸಿದ್ಧಿ, ಮನೋವಿಲಾಸ, ಕ್ಷೇತ್ರ, ವಸ್ತ್ರ ಪ್ರಾಪ್ತಿ, ಸಮಾನ ಜನರ ಸ್ನೇಹ ಉಂಟುಮಾಡುವನು. ವೃಷಭದಲ್ಲಿರುವ ಗುರುವಿನ ದಶೆಯಲ್ಲಿ ರಾಜ್ಯ, ರಾಜಸನ್ಮಾನ, ಉತ್ತಮ ರತ್ನ ಲಾಭ, ಧನಧಾನ್ಯ ಪಶುವೃದ್ಧಿ, ಸಮಾನ ಜನರ ಸ್ನೇಹ ಲಭಿಸುವುದು. ಮಿಥುನದಲ್ಲಿರುವ ಗುರುವಿನ ದಶೆಯಲ್ಲಿ ಅತೀವ ಕಷ್ಟ, ರಾಜಕೋಪ, ಪತ್ನಿಪುತ್ರರನಾಶ, ಸ್ವಜನ ವಿರೋಧ, ಸ್ಥಾನಭ್ರಷ್ಟತೆ ಲಭಿಸುವುದು, ಗುರುವು ಕಟಕರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕ್ಷೇತ್ರಧನ ಹಸು ಧಾನ್ಯ ಸಮೃದ್ಧಿ, ರಾಜನ ಸ್ನೇಹ, ಸ್ವಜನರಿಂದ ಅನುಕೂಲ, ಉತ್ತಮ ವಸ್ತುಗಳ ಲಾಭ, ಭೂಮಿ ಅಥವಾ ಗ್ರಾಮದ ಒಡೆತನ ಉಂಟುಮಾಡುವನು. ಸಿಂಹದಲ್ಲಿರುವ ಗುರುವಿನ ದಶೆಯಲ್ಲಿ ಯತ್ನ ಕಾರ್ಯಸಿದ್ಧಿ, ರಾಜಸನ್ಮಾನ, ರಾಜಸ್ನೇಹ, ದುರ್ಗ ವಸಗಳ ವಿಚಾರಣೆ ಸಂಭವಿಸುವುದು. ಕನ್ಯಾದಲ್ಲಿರುವ ಗುರುವಿನ ದಶೆಯಲ್ಲಿ ಕ್ಷೇತ್ರ ಧನನಾಶ, ಶಾರೀರಕ ಕಷ್ಟ, ಪತ್ನಿಪುತ್ರರ ವಿರೋಧ, ಪಶುನಾಶ, ಮನಃಕ್ಷೋಭೆ ಉಂಟಾಗುತ್ತದೆ. ತುಲಾದಲ್ಲಿ ಇರುವ ಗುರುವಿನ ದಶಾಕಾಲದಲ್ಲಿ ಅತೀವ ಕಷ್ಟ ಅನುಭವಿಸಬೇಕಾಗುತ್ತದೆ. ಬ್ರಾಹ್ಮಣರೊಡನೆ ಜಗಳ ಉಂಟಾಗುವುದು. ವೃಶ್ಚಿಕದಲ್ಲಿರುವ ಗುರುವಿನ ದಶೆಯಲ್ಲಿ ಮನೋವಿಲಾಸ, ಯಜ್ಞಾದಿ ಸತ್ಕರ್ಮಫಲ, ದೇವಬ್ರಾಹ್ಮಣ ಪೂಜೆ,

ಶ್ರೇಷ್ಠವಾದ ಆಧಿಪತ್ಯ ಲಭಿಸುವುದು. ಗುರು ಧನುಸ್ಸಿನಲ್ಲಿದ್ದರೆ ತನ್ನ ದಶಾಕಾಲದಲ್ಲಿ ಪತ್ನಿಪುತ್ರ ಧನವೃದ್ಧಿ, ಎಲ್ಲಾ ಕೆಲಸಗಳಲ್ಲೂ ಸಿದ್ಧಿ, ಉತ್ತಮವಾದ ರತ್ನ ವಸ್ತ್ರಗಳ ಪ್ರಾಪ್ತಿ, ಸ್ನೇಹಿತನಾದ ರಾಜನಿಂದ ಧನಪ್ರಾಪ್ತಿ, ಅತೀವಸುಖ ವೃದ್ಧಿ, ಕೀರ್ತಿಲಾಭ ಉಂಟುಮಾಡುತ್ತಾನೆ. ಮಕರದಲ್ಲಿರುವ ಗುರುವಿನ ದಶೆಯಲ್ಲಿ ಪತ್ನಿ ಪುತ್ರರ ನಾಶ, ಅತೀವ ಕಷ್ಟ, ಧನಕ್ಷೇತ್ರಗಳ ಹಾನಿ, ರಾಜಾಜ್ಞೆ, ಬುದ್ಧಿ ಭ್ರಮಣೆ, ಪರಸ್ಥಳ ವಾಸ, ಜನರಲ್ಲಿ ವಿರೋಧ, ಶತ್ರು ವೃದ್ಧಿ ಸಂಭವಿಸುವುದು. ಕುಂಭದಲ್ಲಿರುವ ಗುರುವಿನ ದಶೆಯಲ್ಲಿ ಸ್ವಜನರಿಗೆ ಅನಿಷ್ಟ, ಶತ್ರುವೃದ್ಧಿ. ಮೀನ ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ವಿಖ್ಯಾತ ಕೀರ್ತಿ, ತೀರ್ಥಸ್ನಾನ ಯಜ್ಞ ದೀಕ್ಷೆಗಳಂಥವು, ಭೂಮಿ ಧನಗಳ ಸುಖ ಕ್ಷೇತ್ರ ಗ್ರಾಮ ಪುರಗಳು, ಪಶುಧಾನ್ಯ ವೃದ್ಧಿ, ಅಧಿಕ ಪುತ್ರಫಲ, ವಿಶೇಷ ಜಯ, ವಿದ್ಯಾ ವಿವಾದಗಳನ್ನು ಕೊಡುವನು.

ಲಗ್ನದಲ್ಲಿರುವ ಗುರುವಿನ ದಶೆಯಲ್ಲಿ ಸುಖ. ಚಿನ್ನ ವಸ್ತ್ರಲಾಭಗಳು ಉಂಟಾಗುತ್ತವೆ. ಎರಡರಲ್ಲಿರುವ ಗುರುವಿನ ದಶೆಯಲ್ಲಿ ಸತ್ಯವಂತ ಉದಾರತೆ, ದೇವ ಬ್ರಾಹ್ಮಣ ಪೂಜೆ, ಕುಟುಂಬ ಪೋಷಣೆಗೆ ಅನುಕೂಲ, ವಾಗ್ವಿಲಾಸ, ಧಾನ್ಯ ಪ್ರಾಪ್ತಿ ಉಂಟಾಗುತ್ತದೆ. ಮೂರರಲ್ಲಿರುವ ಗುರುವಿನ ದಶೆಯಲ್ಲಿ ಸೋದರವೃದ್ಧಿ, ಯುದ್ಧ ಜಯ, ಯತ್ನಕಾರ್ಯಸಿದ್ಧಿ ಜರಗುವುವು. ಗುರು ನಾಲ್ಕನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಅಧಿಕ ಭೂ ಸಮೃದ್ಧಿ, ಉತ್ತಮ ಆಭರಣ ಲಾಭ, ಮಾತೃವೃದ್ಧಿ, ಧಾನ್ಯವೃದ್ಧಿ, ಆನೆ ಕುದುರೆ ಮೊದಲಾದ ವಾಹನಲಾಭ ಉಂಟುಮಾಡುತ್ತಾನೆ. ಐದರಲ್ಲಿರುವ ಗುರುವಿನ ದಶೆಯಲ್ಲಿ ಪುತ್ರ-ಧನ-ಭೂವೃದ್ಧಿ, ಗೋವು ಧನಲಾಭ, ಬ್ರಾಹ್ಮಣ ಪೂಜೆ, ಅನ್ನದಾನ, ಪ್ರಭುತ್ವ, ಉತ್ತಮ ವಸ್ತ್ರಪಾಪ್ತಿ, ಇಷ್ಟಾರ್ಥ ಸಿದ್ಧಿಗಳನ್ನು ಹೊಂದುವನು. ಆರರಲ್ಲಿರುವ ಗುರು ದಶೆಯಲ್ಲಿ ಮನೋವಿಕಾರ, ಧನಧಾನ್ಯ ನಾಶ. ಪತ್ನಿಪುತ್ರನಾಶ, ಪರದೇಶಸಂಚಾರ, ಮರಣ ಕೂಡಾ ಸಂಭವಿಸುತ್ತವೆ. ಏಳರಲ್ಲಿರುವ ಗುರುವಿನ ದಶೆಯಲ್ಲಿ ಪತ್ನಿಪುತ್ರರ ಸುಖ, ರತ್ನ ವಸ್ತ್ರಲಾಭ ಒಳ್ಳೆಯ ತೀರ್ಥ ಸೇವೆ, ಸತ್ಕರ್ಮ ಸಿದ್ಧಿ, ಧರ್ಮವೃದ್ಧಿ, ಅವಿರತ ಶುಭ ಉಂಟಾಗುವುದು. ಗುರು ಎಂಟನೆಯ ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಪುತ್ರನಾಶ, ಸಮಾನ ಜನ ನಾಶ, ಧನಧಾನ್ಯನಾಶ ಉಂಟುಮಾಡುವನು.

ಪುತ್ರನಾಶ, ಸಮಾನ ಜನನಾಶ, ಧನಧಾನ್ಯನಾಶ, ಉಂಟುಮಾಡುವನು. ಒಂಬತ್ತರಲ್ಲಿರುವ ಗುರುವಿನ ದಶೆಯಲ್ಲಿ ಬಹು ಧರ್ಮವೃದ್ಧಿ, ಶಿವಪೂಜೆಯಲ್ಲಿ ಆಸಕ್ತಿ, ಮಂತ್ರರಹ್ಯಸದ ಜ್ಞಾನ, ಪುತ್ರವೃದ್ಧಿ, ಅತೀವ ಚಿನ್ನದ ಹೆಚ್ಚಳ ಅಧಿಕ ಸುಖ ಫಲ ಕೊಡುವನು. ಹತ್ತರಲ್ಲಿರುವ ಗುರುವಿನ ದಶೆಯಲ್ಲಿ ಪತ್ನಿ ಪುತ್ರಸುಖ, ಕ್ಷೇತ್ರ ವಸ್ತ್ರ ಪ್ರಾಪ್ತಿ, ಸುಕೀರ್ತಿ ಲಾಭ, ಯಜ್ಞಾದಿ ಸತ್ಕರ್ಮ ಫಲವನ್ನು ಉಂಟುಮಾಡುವನು. ಹನ್ನೊಂದರಲ್ಲಿರುವ ಗುರುವಿನ ದಶೆಯಲ್ಲಿ ಉತ್ಕೃಷ್ಟ ಆಭರಣ ಲಾಭ, ವಾಹನ ಧಾನ್ಯ ಬಂಧು ಸಮೃದ್ಧಿ, ಚಿನ್ನವೃದ್ಧಿ ರಾಜಸನ್ಮಾನ ಸುಖ ಲಭಿಸುವುದು. ಗುರು ಹನ್ನೆರಡರಲ್ಲಿದ್ದರೆ ತನ್ನ ದಶಾ ಕಾಲದಲ್ಲಿ ಪುತ್ರನಾಶ, ಬುದ್ಧಿ ಭ್ರಮಣೆ, ಮಾನಭಂಗ, ಸಮಾನ ಜನ ಹಾನಿ ಉಂಟುಮಾಡುವನು.

ಕೇಂದ್ರಗಳಲ್ಲಿರುವ ಗುರು ತನ್ನ ದಶೆಯಲ್ಲಿ ಅತೀವ ಸುಖ, ಉತ್ತಮ ವಸ್ತ್ರ ಲಾಭ, ಸತ್ಕೀರ್ತಿ ಲಾಭ, ಬ್ರಾಹ್ಮಣಪೂಜೆಯಲ್ಲಿ ಆಸಕ್ತಿ, ಪತ್ನಿ ಪುತ್ರ ಸೌಖ್ಯ ಆದಿಯಾಗಿ ಶುಭ ಫಲಗಳು ಸಂಭವಿಸುತ್ತವೆ. ತ್ರಿಕೋಣಸ್ಥಾನಗಳಲ್ಲಿರುವ ಗುರುವಿನ ದಶೆಯಲ್ಲಿ ಯತ್ನ ಕಾರ್ಯಸಿದ್ಧಿ, ಧನಾಗಮ, ಪುತ್ರವೃದ್ಧಿ, ಸುಖ ಉಂಟಾಗುವುವು. 6-8-12ನೇ ಮನೆಗಳಲ್ಲಿರುವ ಗುರುವಿನ ದಶೆಯಲ್ಲಿ ಭಯ, ಸಮಾನ ಜನ ಕಷ್ಟ, ಸ್ಥಾನಚ್ಯುತಿಗೆ ಕಾರಣ ಸಂಭವಿಸುತ್ತದೆ.

ಧನುರ್ಲಗ್ನದಲ್ಲಿ ಹುಟ್ಟಿದವರಿಗೆ ಶುಕ್ರ ಏಕಮಾತ್ರ ಪಾಪಗ್ರಹ. ರವಿ ಕುಜರು ಯೋಗದಾಯಕರಾದ ಶುಭರು. ಶನಿ ಮಾರಕನಾಗಿದ್ದರೂ ಇವರೊಡನೆ ಸೇರಿದರೆ ಕೊಲ್ಲುವುದಿಲ್ಲ. ಪಾಪಗ್ರಹಗಳೊಡನೆ ಸೇರಿದರೂ ಬುಧ ಮಾರಕನಾಗುವುದಿಲ್ಲ. ಶುಕ್ರಾದಿಗಳು ಮಾರಕರಾದರೆ ಮರಣವನ್ನುಂಟುಮಾಡುತ್ತಾರೆ.

ಮೂಲ, ಪೂರ್ವಾಷಾಢ, ಉತ್ತರಾಷಾಢ ಮೊದಲನೆಯ ಪಾದ ಧನುಸ್ಸಿಗೆ ಸೇರುವ ನಕ್ಷತ್ರಗಳು.

ಹನುಮಂತ ಜನಿಸಿದ್ದು ಮೂಲಾ ನಕ್ಷತ್ರದಲ್ಲಿ. ಇದಕ್ಕೆ ಅಧಿದೇವತೆ ನಿಋಋತಿ. ಈ ನಕ್ಷತ್ರದಲ್ಲಿ ಹುಟ್ಟಿದವನು ಧನವಂತ ಅಥವಾ ಬಡವನಾಗುತ್ತಾನೆ, ಒಳ್ಳೆಯ ಮನಸ್ಸು, ಹೆಂಡತಿಯೇ ಪ್ರಬಲಳಾಗಿರುವಳು, ಬಂಧುಹಾನಿ ಆಗುವುದು, ಪತ್ನಿಪುತ್ರರ ಸುಖಲೇಸು, ದಯಾವಂತ. ಇರುವಷ್ಟರಲ್ಲಿ ಸುಖ

ಪಡುವ ಸ್ವಭಾವ. 1ನೆಯ ಪಾದದಲ್ಲಿ ಜನನವಾದರೆ ತಂದೆಗೆ ಗಂಡಾಂತರ, ಮಾವನಿಗೆ ಗಂಡ, ಕಡತನ, ಮೂಲವ್ಯಾಧಿ. 2ನೇ ಪಾದವಾದರೆ ತಾಯಿಗೆ ಗಂಡಾಂತರ, ಭೋಜನಪ್ರಿಯ. 3ನೆಯ ಪಾದವಾದಲ್ಲಿ ತ್ಯಾಗಿ, ಭೋಗಿ, ವಾಚಾಳಿ, ಉಪಾಯಗಾರ. 4ನೇ ಪಾದವಾದರೆ ಧನವಂತ, ಭಾಗ್ಯಶಾಲಿ. 20 23-29-50-60ನೇ ವರ್ಷಗಳಲ್ಲಿ ಗಂಡಾಂತರ. ಪರಮಾಯುರ್ದಾಯ 90 ವರ್ಷಗಳು. ಈ ನಕ್ಷತ್ರದಲ್ಲಿ ರೋಗ ಬಂದರೆ ಒಂಬತ್ತು ದಿನ ಕ್ರೂರ.

ಪೂರ್ವಾಷಾಢ ನಕ್ಷತ್ರದಲ್ಲಿ ಜನಿಸಿದವನು ಬುದ್ಧಿವಂತ, ಇಂಗಿತಜ್ಞ, ಬೆರಳು ಸುಮಾರು ಸಣ್ಣಗಿರುತ್ತದೆ. 1ನೆಯ ಪಾದದಲ್ಲಿ ಹುಟ್ಟಿದವರು ಶೂರ, ಅಲ್ಪ ಸುಖ ಪಡೆಯುತ್ತಾರೆ. 2ನೆಯ ಪಾದವಾದರೆ ಮಾತುಗಾರ. ಭಯವಿಲ್ಲದವ, ಧೈರ್ಯ ಕಡಿಮೆ. 3ನೇ ಪಾದವಾದರೆ ಆಚಾರಶೀಲ, ಭಾಗ್ಯವಂತ, ಮೃದು ಮನಸ್ಸು, ಚಪಲಚಿತ್ತ. 4ನೆಯ ಪಾದವಾದರೆ ಸುಳ್ಳುಗಾರ, ಕಠಿನ ಹೃದಯ, ಪಾಪಕಾರ್ಯ ಪ್ರವೇಶ. 12-16-30ನೆಯ ವರ್ಷಗಳಲ್ಲಿ ಗಂಡವಿದೆ. ಪರಮಾಯುಷ್ಯ 80 ವರ್ಷಗಳು. ಈ ನಕ್ಷತ್ರದಲ್ಲಿ ಜ್ವರ ಬಂದರೆ ಒಂದು ತಿಂಗಳು ಕ್ರೂರ.

ವಿಶ್ವೇದೇವತೆಗಳು ಉತ್ತರಾಷಾಢ ನಕ್ಷತ್ರದ ಅಧಿದೇವತೆಗಳು. ಈ ನಕ್ಷತ್ರದಲ್ಲಿ ಹುಟ್ಟಿದವರು ಜ್ಞಾನ, ಪರಿಶುದ್ಧತೆ, ಸುಗುಣ, ಪುಣ್ಯ, ಸಂತಾನ ಭಾಗ್ಯಗಳನ್ನು ಹೊಂದಿರುತ್ತಾರೆ. 1ನೇ ಪಾದದಲ್ಲಿ ಹುಟ್ಟಿದವನು ಭಕ್ತ, ಸ್ವಂತ ದುಡಿದುಗಳಿಸಿದ ಹಣದಿಂದ ಜೀವನ ನಡೆಸುತ್ತಾನೆ. ಸ್ವಧರ್ಮವನ್ನು ಪಾಲಿಸುತ್ತಾನೆ. 5-28-40-80 ವರ್ಷಗಳಲ್ಲಿ ಗಂಡವುಂಟು. ಪರಮಾಯಸ್ಸು 89 ವರ್ಷಗಳು. ಈ ನಕ್ಷತ್ರದಲ್ಲಿ ಜ್ವರ ಬಂದ ಪಕ್ಷದಲ್ಲಿ ಒಂದು ತಿಂಗಳು ಕ್ರೂರ.

ಮೀನ ಲಗ್ನ ಜಾತಕನಿಗೆ ರವಿ, ಬುಧ, ಶುಕ್ರ, ಶನಿಗಳು ಪಾಪಿಗಳು. ಚಂದ್ರ, ಕುಜಶುಭರು. ಗುರು, ಕುಜ ಸೇರಿದರೆ ರಾಜಯೋಗ ಉಂಟುಮಾಡುತ್ತಾರೆ. ಕುಜನೊಬ್ಬನೆ ರಾಜಯೋಗ ಕೊಡಲಾಗುವುದಿಲ್ಲ. ಕುಜ, ರವಿ ಮುಂತಾದ ಪಾಪಗ್ರಹಗಳು ಮರಣವುಂಟುಮಾಡುತ್ತಾರೆ.

ಮೀನ ರಾಶಿಯಲ್ಲಿ ಬರುವ ನಕ್ಷತ್ರಗಳು ಪೂರ್ವಾಭಾದ್ರ ಕೊನೆಯ ಪಾದ, ಉತ್ತರಾಭಾದ್ರ ಮತ್ತು ರೇವತಿ.

ಪೂರ್ವಾಭಾದ್ರ ನಕ್ಷತ್ರದವರು ಸಾಹಸಿ, ವಿನಯಶಾಲಿ, ದೂರದೃಷ್ಟಿ

ಯುಳ್ಳವನು, ದುಂದುಗಾರ, ಗಂಭೀರಸ್ವಭಾವ, ಸಮರ್ಥ, ಉದ್ದವಾಗಿ ಬೆಳೆಯುವವನು, ಒಳ್ಳೆಯ ಕೆಲಸ ಮಾಡುವನು, ಮಕ್ಕಳುಳ್ಳವನು. 1ನೇ ಪಾದದಲ್ಲಿ ಹುಟ್ಟಿದವನು ಉದ್ಯೋಗಿ, ಭೋಗಶಾಲಿಯಾಗುವನು. 3-4-8-27-80ನೇ ವರ್ಷಗಳಲ್ಲಿ ಗಂಡವಿದೆ. ಪರಮಾಯುರ್ದಾಯ 90 ವರ್ಷಗಳು. ಈ ನಕ್ಷತ್ರದಲ್ಲಿ ಜ್ವರ ಬಂದರೆ ಒಂದು ತಿಂಗಳು ಕ್ರೂರ.

ಉತ್ತರಾಭಾದ್ರ ನಕ್ಷತ್ರಕ್ಕೆ ಅಹಿರ್ಬುಧ್ನ್ಯ ದೇವತೆ. ಈ ನಕ್ಷತ್ರದಲ್ಲಿ ಹುಟ್ಟಿದವನು ದೈವಭಕ್ತ. ಚಪಲಬುದ್ಧಿ, ನೀತಿವಂತ, ಧನಿಕ, ಆಲಸಿಯೂ ಆಗಿರುತ್ತಾನೆ. 1ನೇ ಪಾದದಲ್ಲಿ ಜನಿಸಿದವನಿಗೆ ಕೋಪ, ಪಿತ್ತರೋಗ ಉಂಟು. 2ನೇ ಪಾದವಾದಲ್ಲಿ ಪ್ರಜ್ಞಾವಂತ, ಗುಣಗ್ರಾಹಿ ಎನಿಸುವನು. 3ನೇ ಪಾದವೆಂದರೆ ಬುದ್ಧಿವಂತ, ಭೋಗಿ, ಧೈರ್ಯಶಾಲಿ ಆಗುವನು 4ನೇ ಪಾದವಾದರೆ ಸ್ವಲ್ಪ ರೋಗ, ಕೊಂಚ ಸಿಟ್ಟು, ಧಾರಾಳಬುದ್ಧಿ ಇರುವುದು. 11-18-46 ವರ್ಷಗಳಲ್ಲಿ ಗಂಡಾಂತರವಿದೆ. ಪರಮಾಯುಷ್ಯ 90ವರ್ಷಗಳು. ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ಸಿಗುವುದು ನಿಧಾನ. ಇದರಲ್ಲಿ ಜ್ವರ ಒಂದರೆ ಐದು ದಿವಸ ಕ್ರೂರ.

ಪೂಷನೆಂಬ ರವಿ ರೇವತಿನಕ್ಷತ್ರದ ದೇವತೆ. ಇದು ಕೊನೆಯ(ಅಂತಿಮ) ನಕ್ಷತ್ರವಾದುದರಿಂದ ಇದರಲ್ಲಿ ಆರಂಭಿಸಿದ ಕೆಲಸಗಳು ಆಗಿಹೋಗುತ್ತವೆ. ಈ ನಕ್ಷತ್ರದಲ್ಲಿ ಜನಿಸಿದವರು ರೂಪಸ್ಥ, ಬುದ್ಧಿವಂತ, ಧೂರ್ತ, ಇತರರನ್ನು ಸುಖ ಪಡಿಸುವುದಲ್ಲದೆ ತಾನೂ ಸುಖಪಡುವನು, ದೂರದೃಷ್ಟಿ ಇರುತ್ತದೆ. ಅನ್ನದಾನದಲ್ಲಿ ಆಸಕ್ತ. 1ನೇ ಪಾದದಲ್ಲಾದರೆ ಸ್ವಂತ ಗಳಿಕೆಯಿಂದ ಜೀವನ, ನೀತಿ ಜ್ಞಾನಿ. 2ನೆಯ ಪಾದವಾದರೆ ರಹಸ್ಯವಾಗಿ ಪಾಪ ಮಾಡುವವನು. ಜೂಜುಗಾರ, ಕಪಟಿ. 3ನೇ ಪಾದವೆಂದರೆ ರೂಪವಂತ, ಬುದ್ಧಿವಂದ, ಕೋಪಿಷ್ಠ. 4ನೆಯ ಪಾದದಲ್ಲಾದರೆ ಪಂಡಿತ, ಧರ್ಮಕರ್ತ, ಧೈರ್ಯಶಾಲಿ. 5-12-15-30ನೇ ವರ್ಷಗಳು ಗಂಡಕಾರಕ. 60ನೇ ವರ್ಷದಲ್ಲಿ ಕಂಟಕ ಭಯ. ಪರಮಾಯುರ್ದಾಯ 84 ವರ್ಷಗಳು. ಈ ನಕ್ಷತ್ರದಲ್ಲಿ ಜ್ವರ ತಗುಲಿದರೆ 20 ದಿನಗಳು ಕ್ರೂರ.

ಶುಕ್ರ

ಮಂತ್ರಿಪದವಿ, ಪ್ರಾಬಲ್ಯ,ಸಹಾಯ, ಮುತ್ತು, ಹೆಂಗಸು, ಭೋಗ, ಸಂಸಾರ, ಅವರೆ, ಕಳತ್ರ, ಬೆಳ್ಳಿ, ಬಿಳಿಬಟ್ಟೆ, ಪ್ರಕಾಶಮಾನವಾದ ದೃಷ್ಟಿ, ಮಳೆ, ಜ್ಞಾಪಕಶಕ್ತಿ, ಹೊಂದಾಣಿಕೆ, ಕವಿತಾರಚನೆ, ಒಳ್ಳೆಯ ಊಟ, ಹಾಸಿಗೆ, ಆಮೋದ ಪ್ರಮೋದ, ಆಟಗಳು, ಸಂಗೀತ, ಕಾಮ, ಹೂವು, ಸುಗಂಧ, ಭೋಗಗಳಿಗೆ ಶುಕ್ರ ಕಾರಕ.

ಶುಕ್ರನ ಸ್ವಕ್ಷೇತ್ರಗಳು ವೃಷಭ, ತುಲಾ. ಮೀನ ಉಚ್ಚರಾಶಿ. ಕನ್ಯಾ ರಾಶಿ ನೀಚಸ್ಥಾನ. ಮೂಲ ತ್ರಿಕೋಣ ತುಲಾ. ವಜ್ರವು ಗ್ರಹರತ್ನ, ಗ್ರಹ ಲೋಹ ತಾಮ್ರ. ಶುಕ್ರನಿಗೆ ಬುಧ, ಶನಿ ಮಿತ್ರರು. ರವಿ, ಚಂದ್ರ ಶತ್ರುಗಳು. ಕುಜ, ಗುರು ಸಮರು.

ಲಗ್ನದಿಂದ ಹನ್ನೆರಡು ಮನೆಗಳಲ್ಲಿರುವ ಶುಕ್ರನು ಕೊಡುವ ಫಲ ಹೀಗಿದೆ: ಶುಕ್ರ ಲಗ್ನದಲ್ಲಿದ್ದರೆ ಲೆಕ್ಕಚೆನ್ನಾಗಿ ಮಾಡುವನು. ದೀರ್ಘಾಯುಷಿ, ಪ್ರಿಯಳಾದಂಥ ಹೆಂಡತಿಯುಳ್ಳವನು, ಬಟ್ಟೆ ಅಲಂಕಾರಗಳ ವ್ಯಾಮೋಹ, ಸುಗಂಧ ಪುಷ್ಪಗಳೆಂದರೆ ಆಸೆ, ಹೆಂಗಸರಿಗೆ ಬೇಕಾದವನು ಆಗುವನು. ಎರಡನೇ ಮನೆಯಲ್ಲಿ ಶುಕ್ರ ಉಳ್ಳ ಜಾತಕನು ಒಳ್ಳೆಯದಾಗತಕ್ಕವನು, ದೊಡ್ಡ ಕುಟುಂಬ ಉಳ್ಳವನು. ಸುಖ ಭೋಜನ, ಉತ್ತಮಳಾದ ಹೆಂಡತಿ ಹಾಗೂ ಸುಖ ಹೊಂದುತ್ತಾನೆ. ವಿಶಾಲವಾದ ಕಣ್ಣು, ಸುಂದರ ಮುಖ, ಸ್ತ್ರೀಯರಿಂದ ವಿರೋಧ, ವಿದ್ಯಾವಿನಯಸಂಪನ್ನ ಎನಿಸಿಕೊಳ್ಳುವನು. ಮೂರರಲ್ಲಿರುವ ಶುಕ್ರ ಸೋದರರ ಅಭಿವೃದ್ಧಿ, ದಯೆ, ದೃಢ ಶರೀರ ಕೊಡುತ್ತಾನೆ. ಕಡುಜಿಪುಣನೂ ಆಗಿರುತ್ತಾನೆ. ನಾಲ್ಕನೇ ಮನೆಯಲ್ಲಿ ಶುಕ್ರ ಇದ್ದರೆ ಅಚ್ಚುಕಟ್ಟಾಗಿ ಭೋಜನ ಮಾಡುತ್ತಾನೆ. ಬುದ್ಧಿವಂತ, ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವನು. ಹಸುಗಳ ಸಂರಕ್ಷಣೆಮಾಡುತ್ತಾನೆ. ಹಾಲು ಯಥೇಚ್ಛವಾಗಿರುವುದು. ಕುದುರೆ ಮೊದಲಾದ ವಾಹನಗಳಿರುವುವು. ಪಂಡಿತ, ಬಂಧುಗಳಿಗೆ ಬೇಕಾದವನಾಗಿರು

ತ್ತಾನೆ. ದುಡ್ಡು, ಧಾನ್ಯಗಳು ಸಂಗ್ರಹವಾಗಿರುತ್ತವೆ. ಪಂಚಮ ಸ್ಥಾನದಲ್ಲಿ ಶುಕ್ರ ಇದ್ದರೆ ಬುದ್ಧಿವಂತನಾಗುತ್ತಾನೆ. ಮಂತ್ರಿಯಾಗಲು ತಕ್ಕುದಾದ ಬುದ್ಧಿವಂತಿಕೆ, ತಾಯಿಗೆ ಅನಿಷ್ಟ ಉಂಟಾಗುವುದು. ಸೇನಾಧಿಪತ್ಯ ಲಭ್ಯ, ಭೂಪಾಲನಾಗುತ್ತಾನೆ. ಸಂತಾನ ಭಾಗ್ಯವಿದೆ. ವಿದ್ವಾಂಸ. ಆರನೇ ಮನೆಯಲ್ಲಿ ಶುಕ್ರ ಇದ್ದರೆ ಶತ್ರುಗಳು ನಾಶ ಹೊಂದುವರು. ಜ್ಞಾತಿಗಳು ವರ್ಧಿಸುವರು. ಮೊಮ್ಮಕ್ಕಳನ್ನು ಕಾಣುವನು. ಶಿಥಿಲವಾದ ಕೌಪೀನ ಧರಿಸುವನು. ಪರಸ್ತ್ರೀ ಸಂಗ ಮಾಡುವನು. ಸ್ತ್ರೀವ್ಯಾಧಿ. ಶುಕ್ರ ಏಳನೇ ಮನೆಯಲ್ಲಿ ಇದ್ದರೆ ಅತೀವ ಕಾಮಿಯಾಗಿರುತ್ತಾನೆ. ಭಗಚುಂಬಕ, ಅಕೃತ್ಯಗಳನ್ನು ಮಾಡುವನು. ಪರಸ್ತ್ರೀಯಲ್ಲಿ ಆಸಕ್ತ, ವೈಭವವುಳ್ಳವನು. ಶುಕ್ರನ ಜೊತೆ ಶನಿ ಸೇರಿದ್ದರೆ ವ್ಯಭಿಚಾರಿಯಾಗುತ್ತಾನೆ. ಎಂಟನೆಯ ಮನೆಯಲ್ಲಿ ಶುಕ್ರ ಇದ್ದ ಜಾತಕನು ಸುಖಿಯಾಗಿರುವನು. ತಾಯಿಗೆ ಗಂಡಾಂತರ, ಅಲ್ಪಾಯುಷ್ಯ. ಪ್ರಖ್ಯಾತನಾಗುವನು. ಕೆಟ್ಟಮಾರ್ಗ ಹಿಡಿಯುವನು. ಜಾತಕನು ಬದುಕಿರುವ ಪರ್ಯಂತ ಧನವಂತನಾಗಿಯೇ ಇರುವನು. ತಾಪಸಿ, ಶುಕ್ರ ಒಂಬತ್ತರಲ್ಲಿದ್ದರೆ ಹಿಂದಿನಿಂದ ನಡೆದು ಬಂದ ಸಂಪ್ರದಾಯಗಳನ್ನು ಅನುಸರಿಸಿಕೊಂಡು ಬರುತ್ತಾನೆ. ಪದಾತಿ ರಕ್ಷಕ, ಗುರುವಿನ ವಿಶ್ವಾಸಕ್ಕೆ ಪಾತ್ರನಾಗುವನು. ತನ್ನ ಕೆಲಸಗಳನ್ನು ಸಾಧಿಸಿಕೊಳ್ಳುವುದರಲ್ಲಿ ನಿರತನಾಗಿರುತ್ತಾನೆ. ಹತ್ತರಲ್ಲಿ ಶುಕ್ರ ಇದ್ದರೆ ತಂದೆ ಹಾಗೂ ದೇವರಲ್ಲಿ ಭಕ್ತಿ ಹೊಂದಿರುತ್ತಾನೆ. ವಿದ್ಯಾಭ್ಯಾಸಕ್ಕೆ ಅಡ್ಡಿ ಆತಂಕಗಳು. ಅಣ್ಣಂದಿರು ಇರುವುದಿಲ್ಲ. ಅಂದರೆ ಜಾತಕನೆ ಹಿರಿಯನು. ವಾಹನಸುಖವುಂಟು. ಹನ್ನೊಂದರಲ್ಲಿ ಶುಕ್ರ ಇದ್ದವನು ವಿದ್ವಾಂಸ, ಅಪಾರ ಧನಿಕನೂ ಆಗಿರುತ್ತಾನೆ. ಭೂಮಿ ಲಾಭವಾಗಿರುವುದಲ್ಲದೆ ಪಲ್ಲಕ್ಕಿ ಮೊದಲಾದ ವಾಹನಗಳ ಯೋಗವೂ ಉಂಟು. ಶುಕ್ರ 12 ರಲ್ಲಿದ್ದರೆ ಇತರ ಗ್ರಹಗಳ ಹಾಗೆ ಪಾಪಫಲ ಕೊಡುವವನಾಗುವುದಿಲ್ಲ. ಜಾತಕನು ವಿಷಯಲಂಪಟನಾಗಿರುವನು. ಜಿಪುಣ. ಸಕಲವಿಧವಾದ ಸಂಪತ್ತುಳ್ಳವನು. ಮನಸ್ಸಿನಲ್ಲಿ ದ್ವೇಷ ಹೊಗೆಯಾಡುತ್ತಿದ್ದರೂ ಮೇಲೆ ಮಾತ್ರ ಚೆನ್ನಾಗಿ ಉಪಚಾರ ಮಾಡಿ, ಆಡಂಬರವಾಗಿ ಮಾತಾಡಿಸುವ ಕಲೆ ಸಾಧಿಸಿರುತ್ತದೆ.

ಪುಬ್ಬ, ಪೂರ್ವಾಷಾಢ, ಭರಣಿ ನಕ್ಷತ್ರಗಳಲ್ಲಿ ಜನಿಸಿದವರಿಗೆ ಜನನ ಕಾಲದಲ್ಲಿ ಶುಕ್ರದಶೆ ನಡೆಯುವುದು. ಶುಕ್ರದಶೆ ನಡೆಯುವ ಅವಧಿ 20 ವರ್ಷ

K\33.5
SUH

ಗಳು. ಶುಕ್ರನ ದಶೆಯಲ್ಲಿ ಬಹುಕೀರ್ತಿ ಲಾಭ, ರಾಜ್ಯಾಧಿಪತ್ಯ, ವಾಹನ ಪ್ರಾಪ್ತಿ, ರಾಜನ ಸ್ನೇಹ, ವಸ್ತ್ರ ಆಭರಣ ಲಾಭ ಇಷ್ಟಾರ್ಥಸಿದ್ಧಿ ಲಭಿಸುವುವು.

ಅತ್ಯುಚ್ಚ ರಾಶಿಯಲ್ಲಿರುವ ಶುಕ್ರನ ದಶೆಯಲ್ಲಿ ಕ್ಷೇತ್ರಾರ್ಥಸಿದ್ಧಿ, ತನ್ನ ಹೆಸರಿನಲ್ಲಿ ಪದ್ಯ ರಚನೆ, ಕೀರ್ತಿ, ಸ್ತ್ರೀಸೌಖ್ಯ ಘಟಿಸುವುದು. ಉಚ್ಚರಾಶಿಯಲ್ಲಿರುವ ಶುಕ್ರನ ದಶೆಯಲ್ಲಿ ರಾಜ್ಯಾಧಿಕಾರ ವೈಭವ, ರಾಜನ ಸ್ನೇಹ, ಹಸು-ಗಜಗಳ ಲಾಭ ಉಂಟಾಗುತ್ತದೆ. ಶುಕ್ರಮಿತ್ರರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ವಾರಾಂಗನ ಸಂಗದಿಂದ ಸುಖ, ಮನೋವಿಲಾಸ, ರಾಜನ ಸ್ನೇಹ ಉಂಟು ಮಾಡುವನು. ಸಮರಾಶಿಯಲ್ಲಿರುವ ಶುಕ್ರನ ದಶೆಯಲ್ಲಿ ಅಲ್ಪ ಸುಖ, ಸ್ವಲ್ಪ ಗ್ರಾಮಾಧಿಪತ್ಯ, ಅಲ್ಪ ಧಾನ್ಯಾದಿಗಳ ಗಳಿಕೆ ಸಂಭವಿಸುವುದು. ಶತ್ರುರಾಶಿಯಲ್ಲಿರುವ ಶುಕ್ರನ ದಶೆಯಲ್ಲಿ ಪತ್ನಿಪುತ್ರರಿಗೆ ಪೀಡೆ, ಬುದ್ಧಿಚಾಂಚಲ್ಯ, ಧನನಾಶ, ಸ್ವಜನವಿರೋಧ, ಕ್ಷೇತ್ರ ಧನಧಾನ್ಯಗಳ ನಾಶ, ಅಧಿಕಾರಚ್ಯುತಿ ಉಂಟಾಗುವುದು. ಶುಕ್ರ ನೀಚರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನ ಧಾನ್ಯ ವಸ್ತ್ರ ಆಭರಣಗಳ ನಾಶ, ಪತ್ನಿ ನಾಶ, ಜಗಳ, ಧನಕ್ಷಯ, ಜ್ಞಾತಿವರ್ಗಕ್ಕೆ ಅನಿಷ್ಟ ಉಂಟುಮಾಡುತ್ತಾನೆ. ಆರೋಹಿಯಾಗಿರುವ ಶುಕ್ರನ ದಶೆಯಲ್ಲಿ ಉದ್ಯೋಗ ಲಾಭ, ಅಧಿಕಾರ ಮೊದಲಾದ ಸುಖ. ಮುತ್ತು ರತ್ನಾದಿಗಳ ಲಾಭ, ಸಮಾನ ಬಂಧುವಿನ ಸ್ನೇಹವೃದ್ಧಿನಡೆಯುವುವು. ಅವರೋಹಿಯಾಗಿರುವ ಶುಕ್ರನ ದಶೆಯಲ್ಲಿ ಸಮಾನ ಜನ ವಿರೋಧ, ಚತುಷ್ಪಾದ ಜೀವಿಗಳ ನಾಶ ಆದಿಯಾಗಿ ಕಷ್ಟಫಲಗಳು ಸಂಭವಿಸುವುದು. ಶುಭರಾಶಿಯಲ್ಲಿರುವ ಶುಕ್ರನ ದಶೆಯಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿ, ಅಧಿಕಾರವೃದ್ಧಿ, ವಾಹನ ಮೊದಲಾದುವುಗಳ ವೃದ್ಧಿ ಉಂಟಾಗುವುವು. ಪಾಪಗ್ರಹದ ಜೊತೆ ಇರುವ ಶುಕ್ರನ ದಶೆಯಲ್ಲಿ ಪತ್ನಿಪುತ್ರಪಶುನಷ್ಟ, ಎಲ್ಲರಲ್ಲೂ ಜಗಳ, ಮುಂತಾದ ಕಷ್ಟಫಲಗಳು ಜರುಗುವದು.

ಶುಕ್ರ ಮೇಷ ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜನ ಸ್ನೇಹ, ವಿಚಿತ್ರವಾದ ಮನೆಗಳಲ್ಲಿ ವಾಸ, ಅಧಿಕಾರ ಪ್ರಾಪ್ತಿ. ಉತ್ಕೃಷ್ಟ ವಸ್ತ್ರಭೂಷಣಗಳ ವೃದ್ಧಿ ಉಂಟುಮಾಡುತ್ತಾನೆ. ವೃಷಭದಲ್ಲಿರುವ ಶುಕ್ರನ ದಶೆಯಲ್ಲಿ ಗೋವು ಕುದುರೆಗಳ ಲಾಭ, ಗ್ರಾಮಾಧಿಪತ್ಯ, ಬಂಧು ವೃದ್ಧಿ, ವೇಶ್ಯೆಯಿಂದ ಸುಖ ಲಭಿಸುವುದು. ಮಿಥುನದಲ್ಲಿರುವ ಶುಕ್ರನ ದಶೆಯಲ್ಲಿ ಪತ್ನಿಯಿಂದ ಸುಖ, ಭೂಲಾಭ, ಧನ, ಚಿನ್ನದ ಒಡವೆಗಳ ಲಾಭ ಉಂಟಾಗುವುದು. ಶುಕ್ರ

ಕಟಕದಲ್ಲಿರುವಾಗ ತನ್ನ ದಶೆಯಲ್ಲಿ ಸ್ಥಾನಚ್ಯುತಿ, ಪರಸ್ಥಳವಾಸ, ಯತ್ನಿಸಿವ ಕೆಲಸಗಳ ನಾಶ, ಧನ ನಷ್ಟ, ಸ್ತ್ರೀ ಕಲಹ ಉಂಟುಮಾಡುವನು. ಸಿಂಹದಲ್ಲಿರುವ ಶುಕ್ರನ ದಶೆಯಲ್ಲಿ ರಾಜಕೋಪ, ಜಗಳ, ಪತ್ನೀವಿರೋಧ, ದಾಸೀಜನ ಹಾನಿ ಜರುಗುವುದು. ಕನ್ಯಾದಲ್ಲಿರುವ ಶುಕ್ರನ ದಶೆಯಲ್ಲಿ ಪತ್ನೀನಾಶ, ಅಧಿಕಾರ ಹಾನಿ, ಬುದ್ಧಿ ಚಾಂಚಲ್ಯ, ಜಗಳ, ವಿರೋಧ, ಕ್ಷೇತ್ರಧನಧಾನ್ಯ ನಷ್ಟ ಸಂಭವಿಸುವುದು. ತುಲಾದಲ್ಲಿರುವ ಶುಕ್ರನ ದಶೆಯಲ್ಲಿ ಪುತ್ರಾದಿ ಸುಖ, ಧನ ಲಾಭ, ಗ್ರಾಮಾಧಿಪತ್ಯ, ರಾಜನ ಸ್ನೇಹ, ಅಧಿಕಾರ ಪ್ರಾಪ್ತಿ ಘಟಿಸುವುದು ಶುಕ್ರ ವೃಶ್ಚಿಕದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಬಂಧುವರ್ಗ ನಾಶ, ಸ್ತ್ರೀದ್ವೇಷ, ಜ್ಞಾತಿಶತ್ರುಗಳ ವೃದ್ಧಿ ಆದಿ ಕಷ್ಟ ಫಲಗಳನ್ನು ಕೊಡುವನು. ಧನುಸ್ಸಿನಲ್ಲಿರುವ ಶುಕ್ರನ ದಶೆಯಲ್ಲಿ ದೇವತಾಪೂಜೆ, ಯಜ್ಞ ಮೊದಲಾದ ಸತ್ಕರ್ಮ ಸಿದ್ಧಿ, ಸತ್ಕೀರ್ತಿಲಾಭ,ಪುರಾಣಶ್ರವಣ ವಿನೋದ ಉಂಟಾಗುತ್ತದೆ. ಮಕರದಲ್ಲಿರುವ ಶುಕ್ರನ ದಶಾಕಾಲದಲ್ಲಿ ಪರಸ್ಥಳ ಸಂಚಾರ, ಉತ್ತಮ ಆಭರಣ ಪ್ರಾಪ್ತಿ, ವಾಹನ ಲಾಭ, ಸ್ತ್ರೀ ಸುಖಹೀನತೆ ಲಭಿಸುವುದು. ಶುಕ್ರ ಕುಂಭರಾಶಿಯಲ್ಲಿದರೆ ತನ್ನ ದಶಾಕಾಲದಲ್ಲಿ ಶುಭ, ಸದಾಕಾಲ ವೇದಶಾಸ್ತ್ರಗಳಿಂದ ಜ್ಞಾನ ವೃದ್ಧಿ, ರಾಜನ ಸ್ನೇಹ, ಪತ್ನೀ ಸುಖ, ಕ್ಷೇತ್ರವೃದ್ಧಿ, ರತ್ನ ಚಿನ್ನ ವಸ್ತ್ರಗಳ ಲಾಭ ಉಂಟುಮಾಡುತ್ತಾನೆ. ಮೀನದಲ್ಲಿರುವ ಶುಕ್ರನ ದಶೆಯಲ್ಲಿ ರಾಜಾಧಿಕಾರ ವೈಭವ, ಮಣಿರತ್ನಗಳ ಲಾಭ, ವಾಹನವೃದ್ಧಿ, ಕ್ಷೇತ್ರ ಧನ ಧಾನ್ಯ ಪಶುವೃದ್ಧಿ ಕಳತ್ರ ಸುಖ ಉಂಟಾಗುವುದು.

ಶುಕ್ರ ಲಗ್ನದಲ್ಲಿದ್ದರೆ ತನ್ನದಶಾಕಾಲದಲ್ಲಿ ದೇಹಾರೋಗ್ಯ, ಕೀರ್ತಿವೃದ್ಧಿ, ಮನೆಯಲ್ಲಿ ವೈಭವ, ಸಮೃದ್ಧಿ, ಶ್ರೇಷ್ಠವಾದ ಭೂಷಣ ವಸ್ತ್ರಗಳ ಲಾಭ ಕೊಡುವನು. ಎರಡನೆ ಮನೆಯಲ್ಲಿರುವ ಶುಕ್ರನ ದಶೆಯಲ್ಲಿ ಧನ, ಅಧಿಕಾರ, ಉತ್ತಮ ಪದಾರ್ಥಗಳ ಲಾಭ, ವಿದ್ಯಾವಿನೋದ, ಸ್ವಜನರಿಂದ ಸಂತೋಷ, ಕುಟುಂಬ ಪೋಷಣೆ, ವಾಗ್ವಿಲಾಸ ಲಭ್ಯ, ಮೂರರಲ್ಲಿರುವ ಶುಕ್ರನ ದಶೆಯಲ್ಲಿ ವಸ್ತ್ರ ಆಭರಣಗಳ ಲಾಭ, ಸುಖ ವೃದ್ಧಿ, ಗಾನ ವಿದ್ಯೆಯಂದ ಸಂತೋಷ ಉಂಟಾಗುವುದು, ಶುಕ್ರ ನಾಲ್ಕರಲ್ಲಿದ್ದರೆ ತನ್ನ ದಶಾಕಾಲದಲ್ಲಿ ಬಂಧು ಜನಗಳ ಉಪಕಾರ, ಉತ್ತಮವಾದ ವಾಹನ ಲಾಭ, ಪತ್ನೀ ಪುತ್ರರ ಸುಖ, ಮನೆ ಭೂಮಿ ಮುಂತಾದುವುಗಳ ಲಾಭ, ಶ್ರೇಷ್ಠ ವಸ್ತುಗಳ ಲಾಭ, ಶಯ್ಯಾಸುಖ

ಉಂಟುಮಾಡುವನು. ಐದರಲ್ಲಿರುವ ಶುಕ್ರನ ದಶೆಯಲ್ಲಿ ರಾಜನ ಸ್ನೇಹ, ಧನ ಲಾಭ, ರತ್ನ ಚಿನ್ನ ವಸ್ತ್ರಗಳ ಲಾಭ, ಪುತ್ರವೃದ್ಧಿ, ಉದ್ಯೋಗಲಾಭ, ಭೂಮಿಯ ಆಧಿಪತ್ಯ, ಇಷ್ಟಾರ್ಥಸಿದ್ಧಿ ಲಭಿಸುವುವು. ಆರರಲ್ಲಿರುವ ಶುಕ್ರನ ದಶೆಯಲ್ಲಿ ಪತ್ನಿ ಪುತ್ರ ಧನನಾಶ, ಅತಿಕಷ್ಟ, ಜಗಳ, ಆನೆ ಕುದುರೆ ಪಶು ನಾಶ, ಶತ್ರು ಗಳಿಂದ ವೇಧೆ, ಆಪ್ತಬಂಧುವರ್ಗ ನಾಶ, ಮಾನಹಾನಿ ಸಂಭವಿಸುವುದು. ಏಳನೆಯ ಮನೆಯಲ್ಲಿರುವ ಶುಕ್ರನ ದಶೆಯಲ್ಲಿ ಪತ್ನೀಸುಖ,ಉತ್ತಮ ಭೂಮಿ ಲಾಭ, ಶ್ರೇಷ್ಠ ಆಭರಣ ಲಾಭ, ವಿಚಿತ್ರವಸ್ತ್ರಾದಿ ಲಾಭ, ಘಟಿಸುವುದು. ಶುಕ್ರ ಎಂಟರಲ್ಲಿರುವಾಗ ತನ್ನ ದಶಾಕಾಲದಲ್ಲಿ ಅನಾರೋಗ್ಯ, ಬಂಧುವರ್ಗ ಪೀಡೆ, ಕ್ಷೇತ ಧನ, ಪಶು ನಾಶ, ಪರರ ಮನೆಯಲ್ಲಿ ವಾಸ, ಪರಾನ್ನ ಭೋಜನ ಉಂಟುಮಾಡುವನು. ಒಂಬತ್ತರಲ್ಲಿರುವ ಶುಕ್ರನ ದಶೆಯಲ್ಲಿ ಸನ್ಮಾನ, ಸುಕೀರ್ತಿ, ಜ್ಞಾನಸಿದ್ಧಿ, ವಿದ್ಯಾಲಾಭ, ಯುದ್ಧದಲ್ಲಿ ಶತ್ರುನಾಶ, ರಾಜ್ಯಾಧಿ ಕಾರ, ಜಯ, ಸುಖ ಲಭಿಸುವುದು. ಹತ್ತರಲ್ಲಿರುವ ಶುಕ್ರನ ದಶಾಕಾಲದಲ್ಲಿ ಸುಕೀರ್ತಿ, ಸ್ವಜನ ಸಂತೋಷ, ಅನೇಕ ವಿಧವಾದ ರತ್ನ ಆಭರಣ ವಸ್ತ್ರಗಳ ಲಾಭ, ರಾಜನ ಸ್ನೇಹ, ಅಧಿಕಾರ ವೃದ್ಧಿ ಸಂಭವಿಸುವುದು. ಹನ್ನೊಂದನೆಯ ಮನೆಯಲ್ಲಿರುವ ಶುಕ್ರನ ದಶೆಯಲ್ಲಿ ಜ್ಞಾನ ಸತ್ಪುರುಷರ ಪೂಜೆ, ಇಷ್ಟಾರ್ಥ ಸಿದ್ಧಿ, ಸುಖ, ಪತ್ನಿಪುತ್ರರಿಂದ ಸುಖ, ನಾನಾ ವಿಧವಾದ ಧಾನ್ಯವೃದ್ಧಿ, ರಾಜ್ಯಾಧಿಕಾರ ವೇಶ್ಯೆಯರಿಂದ ಸುಖ, ಶ್ರೇಷ್ಠ ರತ್ನಭೂಷಣ ವಸ್ತ್ರಗಳ ಲಾಭ ಉಂಟಾಗುವುದು. ಶುಕ್ರ 12ರಲ್ಲಿದ್ದರೆ ತನ್ನ ದಶೆಯಲ್ಲಿ ಪತ್ನೀಪೀಡೆ, ಧನನಷ್ಟ, ಜಗಳ, ಬಂಧುಗಳ ವಿರೋಧ, ಆಪ್ತಬಂಧು ನಾಶ ಉಂಟುಮಾಡುತ್ತಾನೆ.

ಕೇಂದ್ರದಲ್ಲಿರುವ ಶುಕ್ರನು ತನ್ನ ದಶೆಯಲ್ಲಿ ಪತ್ನಿ ಪುತ್ರರ ಸುಖ, ಸಂತೋಷ, ರತ್ನವಸ್ತ್ರಗಳ ಲಾಭ, ರಾಜನಿಂದ ಸುಖ, ವಾಹನವೃದ್ಧಿ, ಪಶು ಧಾನ್ಯಭೃತ್ಯರ ವೃದ್ಧಿ ಉಂಟುಮಾಡುವನು. ತ್ರಿಕೋಣಗಳಲ್ಲಿರುವ ಶುಕ್ರನ ದಶೆಯಲ್ಲಿ ವಸ್ತ್ರವಾಹನಗಳ ಸುಖ, ತನ್ನ ಹೆಸರಿನ ಪದ್ಯಗಳಿಂದ ಹೊಗಳಿಕೆ, ಕೀರ್ತಿವೃದ್ಧಿ, ವೇಶ್ಯೆಯಿಂದ ಸುಖ ಉಂಟಾಗುವುದು. ದುಸ್ಥಾನಗಳಿಂದು ಹೇಳುವ 3-6-8-12 ನೇ ಮನೆಗಳಲ್ಲಿರುವ ಶುಕ್ರದಶೆಯಲ್ಲಿ ಪತ್ನಿ ಪುತ್ರಾದಿ ಪೀಡೆ, ಜಗಳ, ಧನ ನಷ್ಟ, ಮನೋವಿಕಾರ, ಸ್ವಜನ ವಿರೋಧ, ನೋವು, ಕುದುರೆ ಪಶು ಆದಿಯಾಗಿ ಎಲ್ಲವುಗಳ ನಾಶ ಸಂಭವಿಸುವುದು.

ವೃಷಭ ಲಗ್ನದಲ್ಲಿ ಹುಟ್ಟಿದವರಿಗೆ ಗುರು, ಶುಕ್ರ, ಚಂದ್ರ ಕೆಟ್ಟ ಫಲ ಕೊಡುತ್ತಾರೆ. ಶನಿ, ರವಿ ಶುಭ ಫಲ ಕೊಡುವವರು. ಶನಿ ತನ್ನ ದಶಾಭುಕ್ತಿಗಳಲ್ಲಿ ರಾಜಯೋಗವನ್ನುಂಟುಮಾಡುತ್ತಾನೆ. ಏಕೆಂದರೆ ಕೇಂದ್ರ ತ್ರಿಕೋಣಗಳಾದ 9–10ನೇ ಮನೆಗಳ ಆಧಿಪತ್ಯ ಶನಿಗೆ ಬರುತ್ತದೆ. ಕುಜ, ಬುಧ, ಗುರುಗಳು ಮಾರಕಸ್ಥಾನದಲ್ಲಿ ಇದ್ದರೆ, ಅಥವಾ ಮಾರಕ ಗ್ರಹಗಳೊಡನೆ ಸೇರಿದರೆ ಮರಣ ಉಂಟುಮಾಡುತ್ತಾರೆ.

ವೃಷಭರಾಶಿಗೆ ಸೇರಿದ ನಕ್ಷತ್ರಗಳು ಕೃತ್ತಿಕಾ 2-8-4 ನೇ ಪಾದಗಳು, ರೋಹಿಣಿ ಮತ್ತು ಮೃಗಶಿರಾ 1–3ನೆಯ ಪಾದಗಳು.

ಕೃತ್ತಿಕಾ ನಕ್ಷತ್ರದ ಬಗೆಗೆ ವಿವರಗಳು 'ಕುಜ' ಅಧ್ಯಾಯ 4 ರಲ್ಲಿ ಬಂದಿವೆ. ಕೃತ್ತಿಕಾ 2ನೇ ಪಾದದಲ್ಲಿ ಹುಟ್ಟಿದವರು ಬಲಿಷ್ಠ, ಪುಷ್ಟಿಯುತರಾಗಿರುತ್ತಾರೆ. ಮಾತು ನಿಧಾನ. 3 ನೆಯ ಪಾದಪಾದರೆ ಶೂರ, ದುರ್ಬುದ್ಧಿಯುಳ್ಳವ, ಕೋಪಿಷ್ಠ, ಆಲಸಿಗ. 4ನೇ ಪಾದವಾದಲ್ಲಿ ವಿದ್ಯಾ, ಬುದ್ಧಿ, ತೇಜಸ್ಸು, ಯುಕ್ತಿ, ಸಂಪತ್ತು ಹೊಂದಿರುತ್ತಾನೆ.

ಶ್ರೀಕೃಷ್ಣ, ಭೀಮ ಜನಿಸಿದು ರೋಹಿಣಿ ನಕ್ಷತ್ರದಲ್ಲಿ. ಬ್ರಹ್ಮ ಈ ನಕ್ಷತ್ರದ ಅಧಿದೇವತೆ. ಈ ನಕ್ಷತ್ರದಲ್ಲಿ ಜನಿಸಿದವರು ಸೌಂದರ್ಯವಂತರು. ಮಕ್ಕಳೊಂದಿಗ, ಚತುರ, ಪುಕ್ಕಲು ಸ್ವಭಾವ, ಧನಧಾನ್ಯಸಂಪನ್ನ. 1ನೇ ಪಾದವಾದರೆ ಕಳ್ಳ. 2 ನೇ ಪಾದಪಾದರೆ ಜಿತೇಂದ್ರಿಯ, ಭೋಜನಪ್ರಿಯ, ಸುಸ್ವಭಾವಿ. 3 ನೇ ಪಾದವಾದಲ್ಲಿ ವಿದ್ವಾಂಸ, ಗಣಿತ ತಿಳಿದವನು. 4 ನೆಯ ಪಾದವಾದಲ್ಲಿ ಧನವಂತ, ಪರೋಪಕಾರಿ, ಬುದ್ಧಿವಂತ ಹಾಗೂ ನೆಂಟರಲ್ಲಿ ಪ್ರೀತಿ ಇರುವವನು. 27-32-42-52ನೇ ವರ್ಷಗಳಲ್ಲಿ ಕಷ್ಟಗಳುಂಟಾಗುವುವು ಪರಮಾಯುಷ್ಯ 88 ವರ್ಷಗಳು. ಈ ನಕ್ಷತ್ರದಲ್ಲಿ ಜ್ವರಬಂದರೆ ಏಳು ದಿನಗಳು ಕ್ರೂರ. ಒಡವೆ ಕಳೆದುಹೋದರೆ ಬೇಗ ಸಿಗುವುದು.

5ನೇ ಅಧ್ಯಾಯ 'ಬುಧ'ದಲ್ಲಿ ಮೃಗಶಿರಾ ನಕ್ಷತ್ರದ ವಿವರಣೆಗಳನ್ನು ಕೊಟ್ಟಿದೆ. ಮೃಗಶಿರಾ 1ನೇ ಪಾದವಲ್ಲಿ ಜನನವಾದರೆ ದೇಹಪುಷ್ಟಿ,ಧನ,ಜಯ, ಹಾದರ ಉಳ್ಳವನಾಗುತ್ತಾನೆ. 2ನೆಯ ಪಾದವಾದರೆ ಪುರುಷಶಕ್ತಿ ಕಡಿಮೆ.

ತುಲಾ ಲಗ್ನದಲ್ಲಿ ಜನಿಸಿದವರಿಗೆ ರವಿ, ಕುಜ, ಗುರು ಪಾಪಿಗಳು. ಶನಿ ರಾಜಯೋಗಕಾರಕ. ಬುಧ, ಚಂದ್ರ ಸೇರಿದರೆ ರಾಜಯೋಗ ಉಂಟುಮಾಡು

ತ್ತಾರೆ. ಕುಜ ತನ್ನ ಭುಕ್ತಿಯಲ್ಲಿ ಮಾರಕನಾಗುವುದಿಲ್ಲ. ಗುರು ಮೊದಲಾದ ವರು ಪಾಪಿಗಳು.

ತುಲಾ ರಾಶಿಯಲ್ಲಿ ಬರುವ ನಕ್ಷತ್ರಗಳೆಂದರೆ ಚಿತ್ತ ನಕ್ಷತ್ರದ 3-4ನೇ ಪಾದಗಳು. ಸ್ವಾತಿ ಮತ್ತು ವಿಶಾಖ ನಕ್ಷತ್ರದ 1-2-3ನೇ ಪಾದಗಳು.

ಚಿತ್ತ ನಕ್ಷತ್ರದ ಪ್ರಸ್ತಾಪ 'ಬುಧ'—5ನೆಯ ಅಧ್ಯಾಯದಲ್ಲಿ ಬಂದಿದೆ. ಚಿತ್ತಾ 3ನೇ ಪಾದದಲ್ಲಿ ಹುಟ್ಟಿದರೆ ವಿದ್ಯೆ, ಶೌರ್ಯ ಕೀರ್ತಿ ಲಭಿಸುವುದು. 4ನೇ ಪಾದವಾದರೆ ಪರಾಕ್ರಮ, ಧೈರ್ಯ, ಕಳ್ಳತನ ಮಾಡುವ ಬುದ್ಧಿ ಬರುವುದು.

ವಾಯು ಅಧಿದೇವತೆಯಾಗಿರುವ ನಕ್ಷತ್ರ ಸ್ವಾತಿ. ಸ್ವಾತಿ ನಕ್ಷತ್ರದಲ್ಲಿ ಹುಟ್ಟಿದವರು ಭಾಗ್ಯಶಾಲಿಗಳು. ಧಾರಾಳಿ, ಧೈರ್ಯವಂತ, ಅಗಲವಾದ ಕಣ್ಣುಗಳು, ಪ್ರಸಿದ್ಧ, ಸುಖಪಡುವವನು, ಉದ್ಧವಾದವನು, ದೇವರ ಆರಾಧನೆ, ಗುರುಪೂಜೆ, ಮಾಡುವವನೂ, ಬಂಧುಗಳ ಸತ್ಕಾರ, ಸ್ವತಂತ್ರವಾದ ಬದುಕು ಈತನದು. 1ನೇ ಪಾದದಲ್ಲಿ ಹುಟ್ಟಿದರೆ ಮಾತು ಬುದ್ಧಿ ಚುರುಕಾಗಿರುವುದು. 2ನೆಯ ಪಾದವಾದರೆ ಚಿನ್ನ ಹೊಂದಿದ್ದು ಕೆಟ್ಟ ಆಲೋಚನೆ ಮಾಡುವನು. 3ನೆಯ ಪಾದವಾದರೆ ಮೂರ್ಖ, ಕೋಪಿಷ್ಠ, ಶತ್ರುಗಳನ್ನು ದ್ವೇಷಿಸಿ ಹಣ ಕಳೆದುಕೊಳ್ಳುತ್ತಾನೆ. 4ನೆಯ ಪಾದಪಾದಲ್ಲಿ ಸಿಟ್ಟಿನ ಸ್ವಭಾವದವನಾದರೂ ಒಳ್ಳೆಯವನೆನಿಸಿಕೊಂಡು, ಗುರುಹಿರಿಯರನ್ನು ಪೂಜಿಸಿ ಹಣವಂತನಾಗಿ ಬಾಳುವನು. 12-30-45ನೇ ವರ್ಷಗಳಲ್ಲಿ ಗಂಡಾಂತರವಿವೆ. ಪರಮಾಯುರ್ದಾಯ 90 ವರ್ಷಗಳು. ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ದೊರಕುವುದಿಲ್ಲ. ಜ್ವರ ಬಂದರಂತೂ ಬಲು ಕ್ರೂರ. ವಾಯುದೇವನಿಗೆ ಶಾಂತಿ ಮಾಡಿಸಿದರೆ ಒಂದು ತಿಂಗಳಿಗೆ ಗುಣವಾಗುತ್ತದೆ.

'ಕುಜ'—4ನೇ ಅಧ್ಯಾಯದಲ್ಲಿ ವಿಶಾಖ ನಕ್ಷತ್ರದ ವಿಚಾರ ತಿಳಿಸಿದೆ. ವಿಶಾಖ 1ನೇ ಪಾದವಾದರೆ ಧನದಿಂದ ಸುಖವಾಗಿರುವನು. 2ನೆಯ ಪಾದವಾದಲ್ಲಿ ಹಣ ಸಂಪಾದಿಸಿ, ಕುಟುಂಬದರ ಜೊತೆ ಸುಖವಾಗಿರುವನು. 3ನೆಯ ಪಾದವಾದರೆ ಧಾರಾಳಿ, ಚತುರ, ಕಣ್ಣುನೋವು ಇರುವವನೂ ಆಗುತ್ತಾನೆ.

ಶನಿ

ಶನಿಯ ಕಾರಕತ್ವಗಳು ದೌತ್ಯ, ಗುಲಾಮಗಿರಿ, ಬಂಧನ, ಗ್ರಹಣ, ಸೇವಕ, ಸೇವೆ, ವಾತಪೀಡೆ, ಶೂದ್ರರ ಕೆಲಸಗಳು, ನೀಚತನ, ಕುಟಿಲತೆ, ಕೆಟ್ಟ ಸಹವಾಸ, ಕೆಲಸ ಹಾಳಾಗುವುದು, ಕೇಡಿಗ, ದುರಭ್ಯಾಸಗಳು, ಜೂಜು, ಮದ್ಯಪಾನ, ಮತ್ತೇರುವುದು, ಎಳ್ಳೆಣ್ಣೆ, ಪಾತ್ರೆ, ಕಬ್ಬಿಣದಪುಡಿ, ಲೋಹ, ನೀಲಿಬಟ್ಟೆ, ಕಂಬಳಿ, ಕಸ್ತಿ, ಚಪ್ಪಲಿ, ಮೂರ್ಖತನ, ಕಾರಾಗೃಹ, ತೊಂದರೆ, ದುಃಖ, ಪ್ರಭುತ್ವ, ಶಿಲ್ಪಕಲೆ, ಕೂಲಿ, ಸಾವು ಇವುಗಳು.

ಶನಿಯ ಸ್ವಕ್ಷೇತ್ರಗಳು ಮಕರ, ಕುಂಭ. ಉಚ್ಚರಾಶಿ ತುಲಾ. ಮೇಷ ರಾಶಿ ನೀಚಸ್ಥಾನ. ಮೂಲತ್ರಿಕೋಣ ಕುಂಭ. ಗ್ರಹರತ್ನನೀಲ. ಸೀಸ ಮತ್ತು ಕಬ್ಬಿಣ ಗ ಹಲೋಹಗಳು. ಬುಧ, ಶುಕ್ರರು ಶನಿಯ ಮಿತ್ರರು. ಶತ್ರುಗಳು ಚಂದ್ರ, ಕುಜ. ಗುರು ಸಮ.

ಶನಿ ಲಗ್ನದಿಂದ ಆರಂಭಿಸಿ ಹನ್ನೆರಡು ಮನೆಗಳಲ್ಲಿದ್ದರೆ ಕೊಡುವ ಫಲಗಳಿವು: ಲಗ್ನಸ್ಥಾನದಲ್ಲಿ ಶನಿ ಇದ್ದರೆ ಮಗನಿಗೆ ಅರಿಷ್ಟ, ಕುಬುದ್ಧಿ, ಕೆಟ್ಟ ಆಲೋಚನೆಗಳು, ರಾಜನ್ಮೋಷಿ. ಗ್ರಾಮದ ಕೆಟ್ಟವನಾದ ಶೇಕದಾರ. ವಾಯು ಸಂಬಂಧವಾದ ಕಾಯಿಲೆಗಳು ಕಾಡುವುವು. ವಿದ್ಯಾಲಂಪ, ಕೊಳಕ, ಕಾವಿ, ಕುರೂಪಿ ಹಾಗೂ ರೋಗಿಯಾಗಿರುವನು. ಶನಿ ಎರಡನೆಯ ಮನೆಯಲ್ಲಿದ್ದರೆ ಜಾತಕನು ಧನಹೀನನಾಗುವನು, ಇಬ್ಬರು ಪತ್ನಿಯರು, ಕಡಿಮೆ ಕ್ಷೇತ್ರ ಉಳ್ಳವನು, ಮುಖ ರೋಗ ಇರುವುದು. ಕಣ್ಣು ದುರ್ಬಲ, ವಿದ್ಯಾಭ್ಯಾಸದಲ್ಲಿ ಆಡೆತಡೆಗಳು, ಶನಿಯು ಜೊತೆಗೆ ಪಾಪಗ್ರಹವೂ ಸೇರಿಬಿಟ್ಟರೆ ಇವು ನಿಶ್ಚಿತ. ಮೂರನೆ ಮನೆಯಲ್ಲಿ ಶನಿ ಇರುವುದು ಸಹೋದರರಿಗೆ ಹಾನಿಕರ. ಸುಪತ್ತು ಉಳ್ಳವನು. ಬಹುದುಷ್ಟ. ದಾಸಿಯರು ಕೆಲಸದವರ ಪರಿವಾರವನ್ನೇ ನೇಮಿಸಿಕೊಂಡಿರುತ್ತಾನೆ. ಸಾಹಸಿ, ಧನಧಾನ್ಯಗಳುಳ್ಳವನು. ವ್ಯವಸಾಯ ತತ್ಪರ. ನಾಲ್ಕನೇ ಮನೆಯಲ್ಲಿ ಶನಿ ಇದ್ದರೆ ತಾಯಿಗೆ ಗಂಡಾಂತರ, ಇಬ್ಬರು

ತಾಯಿಯವರಾಗುತ್ತಾರೆ. ಬಾಣಂತಿ ಕಾಯಿಲೆ, ಸುಖಕ್ಕೆ ಹಾನಿ, ಕಪಟ ಹೃದಯ, ಎಳ್ಳು ಮತ್ತು ಉದ್ದಿನ ಪದಾರ್ಥಗಳಿಂದರೆ ಆಸೆ, ರಾಜನಿಂದ ತೊಂದರೆ, ಪೂರ್ವಜರಿಂದ ಬಂದ ಧನ, ಭೂಮಿಗಳನ್ನು ತ್ಯಜಿಸುವನು. ಭಾರ ಹೊರುತ್ತಾನೆ. ಐದನೆಯ ಮನೆಯಲ್ಲಿ ಶನಿ ಇರುವುದು ಮಕ್ಕಳ ಭಾವಕ್ಕೆ ಹಾನಿಕಾರಕ. ಕೆಟ್ಟ ಬುದ್ಧಿ, ಕೆಟ್ಟ ವಿಚಾರಗಳನ್ನು ಮಾಡುವನು. ರಾಜನ ಕೋಪಕ್ಕೆ ಗುರಿಯಾಗುವನು. ಕೆಡಕು ಮಾಡುವ ಗ್ರಾಮಾಧಿಕಾರಿ. ಪುತ್ರ ಸ್ಥಾನವಾದ ಐದನೆಯ ಮನೆಯಲ್ಲಿ ಎರಡು ಗ್ರಹಗಳು ಸೇರಿದರೆ ಸ್ವಂತ ಮಕ್ಕಳಾಗದೆ ದತ್ತು ಮಗನನ್ನು ಪಡೆದುಕೊಳ್ಳಬೇಕಾಗುತ್ತದೆ. ಶನಿ ಆರನೇ ಮನೆಯಲ್ಲಿದ್ದರೆ ಅಲ್ಪ ಜ್ಞಾತಿಗಳಿರುತ್ತಾರೆ. ಕಿವುಡ, ಮೂರ್ಖ, ಶತ್ರುನಾಶ, ಹಣ ಧಾನ್ಯ ಸಂಪತ್ತು ಹೆಚ್ಚುವುದು. ಪುತ್ರರು ಕಡಿಮೆ. ಜ್ಞಾನಹೀನ, ಜಗಳಗಂಟಿಗ. ಏಳನೇ ಸ್ಥಾನದಲ್ಲಿ ಶನಿ ಇದ್ದರೆ ದೇಹದಲ್ಲಿ ದೋಷ ಇರುತ್ತದೆ. ಇಬ್ಬರು ಹೆಂಡತಿಯರು. ವೇಶ್ಯೆಯರನ್ನು ಸೇರುವನು. ಪರದೇಶಗಳಲ್ಲಿ ಸಂಚರಿಸುವನು. ಪರರ ಮನೆಯಲ್ಲಿ ಭೋಜನಮಾಡುವನು. ಹೆಂಡತಿಗೆ ಅನಿಷ್ಟ, ಅನೇಕ ಮಂದಿ ಪತ್ನಿಯರು. ಮೋಸಗಾರ. ಹೊಟ್ಟೆಯಲ್ಲಿ ರೋಗ. ಕಿವುಡ ಅಥವಾ ಕಿವಿಯಲ್ಲಿ ತೊಂದರೆ, ಶನಿಯೊಡನೆ ಶುಕ್ರನೂ ಸೇರಿದರೆ ವ್ಯಭಿಚಾರಿಯಾಗುವನು. ಎಂಟನೇ ಮನೆಯಲ್ಲಿ ಶನಿ ಇದರೆ ದೊಡ್ಡ ಹೊಟ್ಟೆ, ಅತೀವ ಒಡತನ, ಶೂದ್ರ ಹೆಂಗಸಿನ ಸಂಪರ್ಕ ಬೆಳೆಸುವನು, ಸೇವಕನಾಗುತ್ತಾನೆ. ಪುತ್ರ ಸಂತಾನ ಕಡಿಮೆ. ಆಗಾಗ್ಗೆ ಕಣ್ಣಿನ ತೊಂದರೆ ಪೀಡಿಸುತ್ತೆ. ಕುಷ್ಟ ರೋಗ ಪೀಡಿತ, ದೇಹದಲ್ಲಿ ಗಂಟುಗಳಾಗುತ್ತವೆ. ಪರಸ್ತ್ರೀಯರಲ್ಲಿ ಆಸಕ್ತಿ ಉಂಟು. ಜೊತೆಯಲ್ಲಿ ಶುಕ್ರ ಇದ್ದರೆ ಗ್ರಾಮಾಂತರಗಳಲ್ಲಿ ಸಂಚರಿಸುತ್ತಾನೆ. ಕುಜ ಜತೆಗೂಡಿದರೆ ತಾಪತ್ರಯ ಹೆಚ್ಚು—ನೀರಿನಲ್ಲಿ ಗಂಡಾಂತರ. ರಾಹುಯುತನಾಗಿದ್ದರೆ ಬೆಂಕಿ, ಶಸ್ತ್ರ, ವಿಷಗಳ ಭೀತಿ, ಮರ ಕಲ್ಲುಗಳಿಂದ ಹೆದರಿಕೆ—ಶನಿಯೊಡನೆ ರವಿ ರಾಹುಗಳೂ ಇದರೆ ಕರ್ಮದಲ್ಲಿ ವಿಘ್ನವೊದಗುವುದು. ಪಿತೃ ಕರ್ಮ ಮಾಡಲಾರ, ಜಾರ ವಿಚಾರ ಮಾಡುತ್ತಿರುತ್ತಾನೆ. ಕ್ಷಯ ಮೊದಲಾದ ರಕ್ತಮೂಲ ರೋಗಗಳು ಬರುವುವು. ಆಗಾಗ್ಗೆ ದೇಹಕ್ಕೆ ಆಯಾಸವಾಗುತ್ತಾ ಇರುತ್ತದೆ. ಯಾತ್ರೆಗೆ ಅಡ್ಡಿಗಳುಂಟು. ತಮ್ಮಂದಿರಿರುವುದಿಲ್ಲ—ಮನೆಯಲ್ಲಿ ಇವನೇ ಕಿರಿಯವನು. ಹೆಂಡತಿಯ ಕಡೆ ಬಂಧುಗಳಲ್ಲಿ ಅಪ

ವಾದ, ನ್ಯಾಯವಾದ ವಿಧಾನದಿಂದ ಧನ ಸಂಪಾದನೆ. ಇರುವ ಮಗ ಅವಿವೇಕಿಯಾಗಿರುತ್ತಾನೆ. ಅಂಗಹೀನ, ಪೂರ್ಣಾಯುಷ್ಯ. ಶನಿ ಒಂಬತ್ತನೇ ಮನೆಯಲ್ಲಿದ್ದರೆ ಕಡು ಜಿಪುಣ, ತೊಡುವುದು ಜೀರ್ಣವಾಗಿರುವ ಬಟ್ಟೆ, ಗೋಪುರ, ಕೊಳ, ಮರ ಮೊದಲಾದುವನ್ನು ಪ್ರತಿಷ್ಠಾಪನೆ ಮಾಡುವನು. ತಂದೆ ಕಡೆಯ ಮಹಿಳೆಗೆ ಅನಿಷ್ಟ ಉಂಟಾಗುವುದು. ತಂದೆಯ ಸಂಬಂಧಿಗಳಲ್ಲಿ ವಿರೋಧ ಘಟಿಸುವುದು. ಹತ್ತನೇ ಮನೆಯಲ್ಲಿ ಶನಿ ಇದ್ದರೆ ಗಂಗಾಸ್ನಾನ ಲಭ್ಯ. ಜಿಪುಣ, ವ್ಯವಸಾಯಗಾರ, ಪಿತ್ತಶರೀರ, ಗ್ರಾಮದಲ್ಲಿ ಅಧಿಕಾರಿ. ಜನಿಸಿದ ದೇಶವನ್ನು ಪರಿತ್ಯಾಗ ಮಾಡುವನು. ಜೀವನ ನಿರ್ವಹಣೆ ದೂರದೇಶ ಪೊಂದರಲ್ಲಿ ಆಗುವುದು. ಹನ್ನೊಂದರಲ್ಲಿ ಶನಿ ಇದ್ದರೆ ಅಪಾರ ಹಣವಂತನಾಗುವನು. ಭೂಲಾಭ, ರಾಜನಿಂದ ಮರ್ಯಾದೆ. ವಿದ್ಯಾಭ್ಯಾಸದಲ್ಲಿ ವಿಘ್ನ. ತಂದೆಯ ಅಣ್ಣ ಹಾಗೂ ಹಿರಿಯ ಸಹೋದರ ಇರುವುದಿಲ್ಲ. ವಾಹನ ಭಾಗ್ಯವುಂಟು. ಹನ್ನೆರಡನೆಯ ಮನೆಯಲ್ಲಿ ಶನಿ ಇದ್ದಲ್ಲಿ ಪಂಡಿತನಾಗುವನು. ಅಂಗವೈಕಲ್ಯವಿರುತ್ತದೆ. ಶನಿಯೊಡನೆ ಪಾಪಗ್ರಹವೂ ಸೇರಿದ್ದರೆ ಕಣ್ಣು ತೆಗೆಯಬೇಕಾಗುತ್ತದೆ. ಅದೇ ಶುಭಗ್ರಹದ ಯುತಿ ಇದ್ದಲ್ಲಿ ಶುಭವೇ ಆಗುವುದು. ಇತರರ ಕೆಲಸ ಮಾಡಿಕೊಡುವುದರಲ್ಲಿ ಆಸಕ್ತಿ. ಎರಡು ಕಣ್ಣೂ ಒಂದೇ ಸಮ ಇರುವುದಿಲ್ಲ. ಶನಿ ಇರುವ ಮನೆ ಪಾಪಗ್ರಹದ ಕ್ಷೇತ್ರವಾಗಿ, ಪಾಪಗ್ರಹವೂ ಸೇರಿದ್ದರೆ ಪಾಪಯೋಗವು ಭಂಗವಾಗುತ್ತದೆ.

ಶನಿದಶೆ, ಹತ್ತೊಂಬತ್ತು ವರ್ಷ ನಡೆಯುತ್ತದೆ. ಪುಷ್ಯ, ಅನೂರಾಧ ಮತ್ತು ಉತ್ತರಾಭಾದ್ರ ನಕ್ಷತ್ರದಲ್ಲಿ ಹುಟ್ಟಿದವರಿಗೆ ಜನನ ಕಾಲದಲ್ಲಿ ಶನಿದಶೆ. ಶನಿದಶೆಯಲ್ಲಿ ರಾಜಭೀತಿ, ಮಿಥ್ಯಾಪವಾದ, ಶತ್ರುಭಯ, ಧನಹಾನಿ, ಕ್ಷೇತ್ರನಾಶ, ಅಗ್ನಿಭಯ ಮನೋವಿಕಾರಗಳುಂಟಾಗುವುವು.

ಶನಿ ಅತ್ಯುಚ್ಚ ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಲಾಭ, ಪತ್ನಿ ಪುತ್ರ ಸೌಖ್ಯ, ಭೂಲಾಭ, ಪಶುಧಾನ್ಯವೃದ್ಧಿ, ವಾಹನ, ರತ್ನ–ಭೂಷಣ–ವಸ್ತ್ರಾದಿಗಳ ಲಾಭ, ಸ್ವಜನ ಸಂತೋಷವನ್ನುಂಟುಮಾಡುವನು. ಉಚ್ಚರಾಶಿಯಲ್ಲಿರುವ ಶನಿಯ ದಶೆಯಲ್ಲಿ ಚಿನ್ನ ಆಭರಣ ಧಾನ್ಯಗಳ ಲಾಭ, ಮಹಾ ಪ್ರಭುತ್ವ, ಮನಸ್ಸಿಗೆ ಉಲ್ಲಾಸ, ಕೀರ್ತಿಲಾಭ ಪಡೆಯುವನು. ಮೂಲತ್ರಿಕೋಣದಲ್ಲಿರುವ ಶನಿ ತನ್ನ ದಶೆಯಲ್ಲಿ ಬಟ್ಟೆ-ವಾಹನ-ಪಶು-ನವರತ್ನ ಗಳೇ

ಮೊದಲಾದ ಲಾಭ, ಕ್ಷೇತ್ರಾಭಿವೃದ್ಧಿ, ಸುಖ, ಶತ್ರುನಾಶ, ವೈಭವ ವಿದ್ಯಾ ವಿನೋದ,ಸ್ವಜನಾನುಕೂಲ ಹೊಂದುವನು. ಸ್ವಕ್ಷೇತ್ರಗತನಾದ ಶನಿ ತನ್ನ ದಶೆಯಲ್ಲಿ ರತ್ನಾದಿ ಲಾಭ, ಪತ್ನೀಸುಖ, ಪಶುವಾಹನ ಚಿನ್ನಗಳ ಲಾಭ, ರಾಜನಿಂದ ಸುಖ, ಸ್ವಜನಾಭಿವೃದ್ಧಿ ಉಂಟಾಗುವುವು. ಅತಿಮಿತ್ರ ಸ್ಥಾನ ದಲ್ಲಿರುವ ಶನಿ ತನ್ನ ದಶೆಯಲ್ಲಿಸುತಮಿತ್ರವನಿತೆಯರ ಸುಖ, ವಿದ್ಯಾವಿನೋದ, ರಾಜನಿಂದ ಸುಖ, ಯುದ್ಧದಲ್ಲಿ ಜಯ, ಅತ್ಯಂತ ಕೀರ್ತಿಲಾಭ, ಶ್ರೇಷ್ಠವಸ್ತು ಲಾಭ ಉಂಟುಮಾಡುತ್ತಾನೆ. ಮಿತ್ರರಾಶಿಯಲ್ಲಿರುವ ಶನಿಯ ದಶೆಯಲ್ಲಿ ಪಶು ಧಾನ್ಯವೃದ್ಧಿ, ಶ್ರೇಷ್ಠವಸ್ತು ಲಾಭ, ಕ್ಷೇತ್ರಾಭಿವೃದ್ಧಿ, ರಾಜಪೂಜ್ಯತೆ, ಸಮಾನ ಜನಗಳಿಂದ ವಿಶೇಷಲಾಭ ಘಟಿಸುವುದು. ಶನಿ ಸಮರಾಶಿಯಲ್ಲಿದ್ದ ರೆ ತನ್ನ ದಶಾ ಕಾಲದಲ್ಲಿ ಕ್ವಚಿತ್ತಾಗಿ ಸುಖ, ಧನಲಾಭ, ಪರದೇಶವಾಸ, ಸಮಾನ ಜನರ ಸ್ನೇಹ,ಸ್ವಂತಸ್ಥಾನವಾಸಉಂಟುಮಾಡುತ್ತಾನೆ. ಶತ್ರುರಾಶಿಯಲ್ಲಿರುವಶನಿಯ ದಶೆಯಲ್ಲಿ ಮಾನಭಂಗ, ರಾಜಕೋಪ, ಮನೋವಿಕಾರ, ಸ್ವಜನಾನುರೋಧ, ಸಮಾನ ಜನ ಕಷ್ಟ, ಪರದೇಶವಾಸ ಲಭಿಸುವುದು. ಅತಿ ಶತ್ರುಕ್ಷೇತ್ರದಲ್ಲಿರುವ ಶನಿದಶೆಯಲ್ಲಿಮಾನಹಾನಿ, ಮತಿಭ್ರಮಣೆ, ಧನಹಾನಿ, ಯುದ್ಧಭೀತಿ, ಪತ್ನಿ ಪುತ್ರ ನಾಶ, ಅತೀವಕಷ್ಟ, ಸಮಾನಪೀಡೆ, ಕ್ಷೇತ್ರಾರ್ಥನಾಶ ಸಂಭವಿಸುವುದು. ಆರೋಹಿಯಾಗಿರುವ ಶನಿಯ ದಶೆಯಲ್ಲಿ ಪತ್ನಿಪುತ್ರರ ವೃದ್ಧಿ, ಸೇವಕಜನ ವೃದ್ಧಿ, ಧನಸಮೃದ್ಧಿ, ಕ್ಷೇತ್ರಾಭಿವೃದ್ಧಿ, ಪಶುಧಾನ್ಯವೃದ್ಧಿ ಉಂಟಾಗುತ್ತದೆ. ಅವರೋಹಿಶನಿಯ ದಶೆಯಲ್ಲಿ ಸಮಾನಜನಕಷ್ಟ. ಚತುಷ್ಪಾದಿಗಳ ನಾಶ, ಪಶುಕ್ಷೇತ್ರ ನಾಶ ಸಂಭವಿಸುವುದು. ಶುಭಗ್ರಹದ ಜೊತೆಯಲ್ಲಿರುವ ಶನಿಯ ದಶೆಯಲ್ಲಿ ಸುಖ, ಪಶುಧಾನ್ಯವೃದ್ಧಿ, ಯತ್ನಕಾರ್ಯದಲ್ಲಿ ಸಿದ್ಧಿ. ಅಧಿಕಶುಭ ಲಭಿಸುವುದು. ಪಾಪಗ್ರಹದೊಡನೆ ಸೇರಿರುವ ಶನಿಯ ದಶೆಯಲ್ಲಿ ಸಮಾನಜನ ನಾಶ, ರಾಜಭಯ, ಚತುಷ್ಪಾದ ಜೀವಿಗಳ ಹಾನಿ ಉಂಟಾಗುವುದು.

ಶನಿ ಮೇಷರಾಶಿಯಲ್ಲಿದ್ದ ರೆ ತನ್ನ ದಶಾಕಾಲದಲ್ಲಿ ಪತ್ನಿಪುತ್ರರಿಗೆ ಪೀಡೆ, ಕ್ಷೇತ್ರಾದಿ ನಾಶ, ಸಮಾನ ಜನರಿಗೆ ಕಷ್ಟ, ಪದಭ್ರಂಶ, ಸ್ವಜನರಿಂದ ಹಿಂಸೆ ಉಂಟುಮಾಡುತ್ತಾನೆ. ವೃಷಭದಲ್ಲಿರುವ ಶನಿಯ ದಶೆಯಲ್ಲಿ ಉತ್ತಮವಸ್ತು ಲಾಭ, ವ್ಯವಸಾಯದಿಂದ ಧನಪ್ರಾಪ್ತಿ, ನೀಲಾಂಬರ ಲಾಭ, ನೀಲಮಣಿ ಲಾಭ, ಯುದ್ಧದಅಧಿಪತ್ಯ, ಅತ್ಯಂತ ಸುಖದೊರಕುವುದು. ಮಿಥುನದಲ್ಲಿರುವ

ಶನಿಯ ದಶೆಯಲ್ಲಿ ಪತ್ನೀಪುತ್ರ ಸೌಖ್ಯ, ರಾಜಸನ್ಮಾನ, ಸ್ವಜನ ಸಂತೋಷ, ಅಧಿಕಾರಲಾಭ, ಕ್ಷೇತ್ರಾರ್ಥಲಾಭ, ದಾಸಜನವೃದ್ಧಿ ಉಂಟಾಗುವುದು. ಕಟಕ ರಾಶಿಯಲ್ಲಿರುವ ಶನಿಯ ದಶೆಯಲ್ಲಿ ಕಷ್ಟ ಫಲಗಳು, ಸಮಾನಜನ ಶೋಕ, ಪಶುಕ್ಷಯ, ಸ್ಥಾನನಾಶ ಸಂಭವಿಸುವುದು. ಶನಿ ಸಿಂಹರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಶತ್ರು ವೃದ್ಧಿ, ಮನೋವಿಕಾರ, ರಾಜಕೋಪ, ಕ್ಷೇತ್ರಾದಿನಾಶ, ಸಮಾನ ಜನಗಳಿಂದ ಹಿಂಸೆ, ಅತ್ಯಂತ ಕಷ್ಟ ಉಂಟುಮಾಡುವನು. ಕನ್ಯಾದಲ್ಲಿರುವ ಶನಿಯ ದಶೆಯಲ್ಲಿ ರಾಜಸನ್ಮಾನ, ಧನವೃದ್ಧಿ, ಬ್ರಾಹ್ಮಣರ ಪಂಕ್ತಿಯಲ್ಲಿ ಭೋಜನ ಲಾಭ, ಗೋದಾನ, ಕ್ಷೇತ್ರಾಭಿವೃದ್ಧಿ ಸಂಭವಿಸುವುದು. ತುಲಾದಲ್ಲಿರುವ ಶನಿಯ ದಶೆಯಲ್ಲಿ ಪತ್ನೀಪುತ್ರ ಸೌಖ್ಯ, ಬಹುರತ್ನಲಾಭ, ಸತ್ಕೀರ್ತಿ, ರಾಜ್ಯಾಧಿಕಾರ ವೈಭವ, ಉತ್ತಮವಾದ ವಾಹನ, ತೀರ್ಥಯಾತ್ರೆ, ಬಹುಧಾನ್ಯ ಲಾಭ ಉಂಟಾಗುವುದು, ವೃಶ್ಚಿಕದಲ್ಲಿರುವ ಶನಿಯ ದಶೆಯಲ್ಲಿ ಮಾನಹಾನಿ, ಬುದ್ಧಿಭ್ರಮಣೆ, ಪತ್ನಿ ಪುತ್ರ ಧನ ನಾಶ, ಶತ್ರು ಭಯ, ವಿವಾದ, ಜಗಳ ಸಂಭವಿಸುವುದು. ಧನುಸ್ಸಿನಲ್ಲಿರುವ ಶನಿಯ ದಶಾಕಾಲದಲ್ಲಿ ಕೀರ್ತಿ ಲಾಭ, ಗುರು, ದೇವ ಬ್ರಾಹ್ಮಣರ ಪೂಜೆ, ಬಂಧುಗಳಲ್ಲಿ ವಿವಾಹಾದಿ ಮಂಗಳೋತ್ಸವಗಳು, ನೀಲಿಬಟ್ಟೆ ಲಾಭ, ಮಣಿ ವಸ್ತ್ರಗಳ ಲಾಭ, ಪುತ್ರ ವರ್ಗದವರಿಗೆ ಸುಖ ಉಂಟಾಗುವುವು. ಶನಿ ಮಕರರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜಪೂಜ್ಯತೆ, ಅಧಿಕ ಧಾನ್ಯಲಾಭ, ತೀರ್ಥಯಾತ್ರೆಯು ಫಲಸಿದ್ಧಿ, ಕ್ಷೇತ್ರ ವೃದ್ಧಿ ಉಂಟುಮಾಡುತ್ತಾನೆ. ಕುಂಭರಾಶಿಯಲ್ಲಿರುವ ಶನಿಯ ದಶಾಕಾಲದಲ್ಲಿ ಪುತ್ರ ಬಂಧುವರ್ಗಗಳಲ್ಲಿ ಸುಖ, ಯುದ್ಧದಲ್ಲಿ ಜಯ. ಯಾನಾರೋಹಣ, ಧರ್ಮಾಭಿವೃದ್ಧಿ, ಅನ್ನದಾನ ಸಂಭವಿಸುವುದು. ಮೀನದಲ್ಲಿರುವ ಶನಿಯ ದಶೆಯಲ್ಲಿ ಬಂಧುವಿರೋಧ, ಸ್ವಲ್ಪಸುಖ, ಸ್ವಲ್ಪಕಷ್ಟ, ಕುಲಾಚಾರಗಳ ನಾಶ ಉಂಟಾಗುವುದು.

ಶನಿಲಗ್ನದಲ್ಲಿದ್ದರೆ ದಶಾಕಾಲದಲ್ಲಿ ವಾಯುರೋಗ ಪೀಡೆ, ನಿಸ್ಸತ್ವ, ರಾಜಕೋಪ, ಆಚಾರಭಂಗ, ಸಮಾನಜನ ನಾಶ ಉಂಟುಮಾಡುತ್ತಾನೆ. ಎರಡರಲ್ಲಿರುವ ಶನಿಯ ದಶೆಯಲ್ಲಿ ಪತ್ನಿಯೊಡನೆಜಗಳ, ಪರಾನ್ನ ಭೋಜನ, ಧನಹಾನಿ, ಕಣ್ಣಿನ ರೋಗ, ಅನ್ಯರ ಮನೆಯಲ್ಲಿ ವಾಸ ಲಭಿಸುತ್ತದೆ. ಮೂರನೆಯ ಮನೆಯಲ್ಲಿರುವ ಶನಿಯ ದಶೆಯಲ್ಲಿ ಶುಭಾಧಿಕ್ಯ, ಪುತ್ರಾಭಿವೃದ್ಧಿ,

ಧನಲಾಭ ಸುಖ, ರತ್ನಲಾಭ, ನಾನಾ ವಿಧ ವಸ್ತ್ರಲಾಭ, ಆಭರಣ ಪ್ರಾಪ್ತಿ, ಧನ ಸಮೃದ್ಧಿ, ರಾಜಸಮಾನ ಪ್ರಭುತ್ವ ಉಂಟಾಗುವುವು. ನಾಲ್ಕರಲ್ಲಿರುವ ಶನಿಯ ದಶೆಯಲ್ಲಿ ಪಶುಕ್ಷೇತ್ರ ಧಾನ್ಯಸೇವಕ ವರ್ಗದ ಅಭಿವೃದ್ಧಿ ಲಭಿಸುವುದು. ಶನಿ ಐದನೇ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಅತೀವ ಕಷ್ಟಫಲ, ಬುದ್ಧಿವಿಕಾರ, ಶತ್ರುಕೋಪ, ಸಮಾನ ಪ್ರಭುವಿನಿಂದ ಯುದ್ಧಭಯ, ಪಶು ಕ್ಷೇತ್ರ ಸೇವಕಹಾನಿ ಉಂಟುಮಾಡುವನು. ಆರರಲ್ಲಿರುವ ಶನಿಯ ದಶೆಯಲ್ಲಿ ರಾಜಪೂಜ್ಯತೆ, ಶತು ನಾಶ, ಕೃಷಿಕ್ಷೇತ್ರ ವೃದ್ಧಿ, ಯಾನಾದಿ ಲಾಭ, ಸ್ವಜನರಲ್ಲಿ ಮಹತ್ವ, ಸೇವಕ ಜನವೃದ್ಧಿ, ಪುರಾಧಿಪತ್ಯ ಸಂಭವಿಸುವುವು. ಏಳರಲ್ಲಿರುವ ಶನಿಯ ದಶೆಯಲ್ಲಿ ಪಶುಕ್ಷೇತ್ರ ಧನ ಪತ್ನಿ ಪುತ್ರಾದಿ ಸುಖ, ಮಹತ್ತರ ಕೀರ್ತಿ ಲಾಭ, ರಾಜನಿಂದ ಸುಖ, ತನ್ನ ಹೆಸರುಳ್ಳ ಉದ್ಯೋಗದ ಲಾಭ ಉಂಟಾಗುವುದು. ಎಂಟನೇ ಮನೆಯಲ್ಲಿರುವ ಶನಿಯದಶೆಯಲ್ಲಿಅತೀವ ಕಷ್ಟ, ಪುತ್ರನಾಶ ಚಂಚಲಬುದ್ಧಿ, ಸ್ಥಾನನಾಶ, ಮೃತ್ಯುಭಯ, ಯುದ್ಧದ ಕಾರಣದಿಂದ ಶತ್ರುವೃದ್ಧಿ, ಪಶುಕ್ಷೇತ್ರ ಹಾನಿ, ಚಂಡಾಲ ಸೇವೆ ಪ್ರಾಪ್ತವಾಗುವುದು. ಒಂಬತ್ತರಲ್ಲಿರುವ ಶನಿ ದಶೆಯಲ್ಲಿ ತೀರ್ಥಯಾತ್ರಾದಿ ಫಲ, ಧರ್ಮಾಭಿವೃದ್ಧಿ, ರಾಜನ ಸ್ನೇಹ, ನೀಲವಸ್ತ್ರಪ್ರಾಪ್ತಿ, ಭೂಷಣ ಮುಂತಾದುವುಗಳ ಲಾಭ, ಪುತ್ರಾಭಿವೃದ್ಧಿ ಉಂಟಾಗುವುದು. ಹತ್ತನೇ ಮನೆಯಲ್ಲಿರುವ ಶನಿಯ ದಶೆಯಲ್ಲಿ ಕೀರ್ತಿ ಲಾಭ, ಐಶ್ವರ್ಯವೃದ್ಧಿ, ಉದ್ಯೋಗದಲ್ಲಿ ಜಯ, ಪುರಾಣಗೀತಶ ವಣದಿಂದ ವಿನೋದ, ಉತ್ಕೃಷ್ಟ ತೀರ್ಥಯಾತ್ರೆಯ ಫಲ ಲಭ್ಯ. ಹನ್ನೊಂದರಲ್ಲಿರುವ ಶನಿಯ ದಶೆಯಲ್ಲಿ ಧನಲಾಭ, ಕ್ಷೇತ್ರವೃದ್ಧಿ, ಪುತ್ರ ಪತ್ನೀ ಸೌಖ್ಯ, ಜ್ಞಾತಿ ಸುಖ ಉಂಟಾಗುವುದು. ಹನ್ನೆರಡನೇ ಮನೆಯಲ್ಲಿರುವ ಶನಿಯ ದಶಾಕಾಲದಲ್ಲಿ ಅತೀವ ಕಷ್ಟ, ಪಶುಕ್ಷೇತ್ರ ಸೇವಕರ ಹಾನಿ, ಪತ್ನಿಗೆ ಬಾಧೆ, ಶರೀರ ಕಷ್ಟ, ಶತ್ರುವೃದ್ಧಿ, ಯತ್ನಕಾರ್ಯ ನಾಶ ಉಂಟಾಗುತ್ತದೆ.

ಕೇಂದ್ರಸ್ಥಳಗಳಲ್ಲಿರುವ ಶನಿಯದಶೆಯಲ್ಲಿವಿವಿಧಆಭರಣಗಳು ಹಾಗೂಧನ ಲಾಭ, ರಾಜಪೂಜ್ಯತೆ, ದೊಡ್ಡವರ ಸ್ನೇಹ, ಪತ್ನಿ ಪುತ್ರರ ಸುಖ ಲಭಿಸುವುದು.

ಶನಿ ತ್ರಿಕೋಣಗಳಲ್ಲಿದ್ದರೆ ತನ್ನ ದಶಾಕಾಲದಲ್ಲಿ ಅತ್ಯಂತ ಶುಭಪ್ರದ, ಬಂಧು ಸ್ನೇಹ, ಮನಸ್ಸಿಗೆ ಸಂತೋಷ, ಕೃಷಿ ಕ್ಷೇತ್ರಗಳ ವೃದ್ಧಿ ಉಂಟು ಮಾಡುವನು. ದುಸ್ಥಾನಗಳಲ್ಲಿರುವ ಶನಿಯ ದಶೆಯಲ್ಲಿ ವ್ಯಾಧಿ, ದುಃಖ,

ಯುದ್ಧದಲ್ಲಿ ಭಯ, ಶತ್ರುವೃದ್ಧಿ, ಪಶುಕೃಷಿಕ್ಷೇತ್ರ ಹಾನಿ ಸಂಭವಿಸುವುದು.

ಮಕರ ಲಗ್ನದವರಿಗೆ ಕುಜ, ಗುರು, ಚಂದ್ರ ಪಾಪಿಗಳು. ಶುಕ್ರ, ಬುಧ ಶುಭರು. ಕೇಂದ್ರ ತ್ರಿಕೋಣಗಳೆರಡಕ್ಕೂ ಅಧಿಪತಿಯಾಗಿರುವ ಶುಕ್ರ ಮಾತ್ರ ರಾಜಯೋಗಕಾರಕ. ಬುಧನೊಡನೆ ಸೇರಿದರೆ ಶನಿ ಒಳ್ಳೆಯ ಫಲವನ್ನೇ ಕೊಡುತ್ತಾನೆ. ಶನಿ ಮಾರಕನಾಗುವುದಿಲ್ಲ. ಕುಜ, ಗುರು, ಚಂದ್ರ ಕಷ್ಟವನ್ನೇ ಉಂಟುಮಾಡುವರು. ಇವರಿಗೆ ಮಾರಕತ್ವವೂ ಲಭಿಸಿದರೆ ಮರಣವನ್ನೇ ಉಂಟುಮಾಡುವರು.

ಮಕರ ರಾಶಿಗೆ ಸೇರುವಂಥವು ಉತ್ತರಾಷಾಢ 2-3-4ನೇ ಪಾದಗಳು, ಶ್ರವಣ, ಮತ್ತು ಧನಿಷ್ಠ ನಕ್ಷತ್ರದ 1-2ನೇ ಪಾದಗಳು.

ಉತ್ತರಾಷಾಢ ನಕ್ಷತ್ರ 'ಗುರು'—6ನೇ ಅಧ್ಯಾಯದಲ್ಲಿ ವಿವರವಾಗಿ ಬಂದಿವೆ. 2ನೇ ಪಾದದಲ್ಲಿ ಹುಟ್ಟಿದರೆ ದುಂದುಗಾರ, ನೀಚರ ಸಹವಾಸ ಮಾಡುತ್ತಾನೆ. 3ನೇ ಪಾದವಾದರೆ ರೋಗಿಷ್ಠ, ಅಲ್ಪಸಂತೋಷಿ, ಕೋಪಿಷ್ಠ ಕೊಬ್ಬಿದ ದೇಹವುಳ್ಳವನು. 4ನೇ ಪಾದದಲ್ಲಾದರೆ ಪಂಡಿತ, ಧರ್ಮಕಾರ್ಯದಲಿ ಉತ್ಸಾಹಿ, ಶುಭಕಾರ್ಯ ಮಾಡುತ್ತಾನೆ.

ಶ್ರವಣ ನಕ್ಷತ್ರದ ಅಧಿದೇವತೆ ವಿಷ್ಣು. ಈ ನಕ್ಷತ್ರದಲ್ಲಿ ಜನಿಸಿದವರು ಪುಣ್ಯವಂತ, ಭಾಗ್ಯಶಾಲಿ, ಪರಸ್ತ್ರೀಯರಲ್ಲಿ ಆಸಕ್ತ, ಧಾರಾಳಿ, ವಾಚಾಳಿ, ಬಂಧುಯುಕ್ತ, ಸೊಗಸುಗಾರ, ದೃಢಶರೀರ, ಚಪಲಚಿತ್ತ, ವಿದೇಶವ್ಯಾಮೋಹ ದುರಹಂಕಾರಿ, ಯತ್ನಶೀಲ, ಪುಷ್ಪ-ಗಂಧ-ಅಲಂಕಾರ. ಸ್ತ್ರೀ ಪ್ರಿಯನಾಗಿರುವನು. 1ನೆಯ ಪಾದವಾದರೆ ಜಗಳಗಂಟಿಗ, ಗುಲ್ಮ ರೋಗಿ, ಅಲ್ಪಸಂತಾನ. 2ನೇ ಪಾದದಲ್ಲಾದರೆ ಭೋಗಿ, ಕಾಮಿ, ಸೇವಕರುಳ್ಳವನು, ತಂತ್ರಗಾರ. 3ನೇಪಾದವಾದದಲ್ಲಿ ಧಾರಾಳಿ, ನಾಜೂಕುವಂತ, ಜಗಳಗಂಟಿಗ, ಕೆಲಸಗಾರ 4ನೇ ಪಾದವೆಂದರೆ ಪರಮಾರ್ಥದಲ್ಲಿ ಆಸಕ್ತಿ, ವ್ಯಾಪಾರದಲ್ಲಿ ನಿಪುಣ, ಧನವಂತ 2-3-5-7-13-15-30ನೇ ವರ್ಷಗಳಲ್ಲಿ ಕಂಟಕಗಳುಂಟು. ಪರಮಾಯುಷ್ಯ 90 ವರ್ಷಗಳು. ಈ ನಕ್ಷತ್ರದಲ್ಲಿ ಕಳೆದುಹೋದ ವಸ್ತು ದೊರೆಯುವುದಿಲ್ಲ. ಜ್ವರ ಬಂದರೆ 11 ದಿನಗಳು ಕ್ರೂರ.

ಈ ನಕ್ಷತ್ರದಲ್ಲಿ ಮನೆ ಕಟ್ಟಿಸಿದರೆ ಶೀಘ್ರವಾಗಿ ಕೀಳಿಸಬೇಕಾಗಿ ಬರುತ್ತದೆ. ಕಳ್ಳತನ ಮಾಡಿದವನು ಸತ್ತೇ ಹೋಗುತ್ತಾನೆ.

ಧನಿಷ್ಠಾ ನಕ್ಷತ್ರದಲ್ಲಿ ಜನಿಸಿದವರು ಸಮರ್ಥಶಾಲಿ ಮತ್ತು ಛಲವಾದಿ. 1ನೇ ಪಾದವಾದರೆ ಮುಖಂಡನಾಗುತ್ತಾನೆ. 2ನೆಯ ಪಾದದಲ್ಲಾದರೆ ವಿದ್ಯಾವಿನಯ ಸಂಪನ್ನ. ಈ ನಕ್ಷತ್ರದಲ್ಲಿ ಹೋದ ವಸ್ತು ಸಿಗುತ್ತದೆ. ಜ್ವರ ಬಂದರೆ ಹದಿನೈದು ದಿವಸಗಳು ಕ್ರೂರ. 8–18–25–40–50–60ನೇ ವರ್ಷಗಳಲ್ಲಿ ಗಂಡಾಂತರಕಾರಿ-ಅಪಾಯಗಳುಂಟು. ಪರಮಾಯುರ್ದಾಯ 90ವರ್ಷಗಳು.

ಕುಂಭ ಲಗ್ನದಲ್ಲಿ ಹುಟ್ಟಿದವರಿಗೆ ಕುಜ, ಗುರು, ಚಂದ್ರ ಪಾಪಿಗಳು. ಶುಕ್ರ ಶುಭದಾಯಕ. ಶುಕ್ರ, ಕುಜ ಸೇರಿದರೆ ರಾಜಯೋಗ ಉಂಟುಮಾಡುವರು. ಗುರು ಮಾರಕನಾಗಿದ್ದರೂ ಸಾವುಂಟುಮಾಡುವುದಿಲ್ಲ. ಕುಜ ಮೊದಲಾದವರು ಸಾವುಂಟುಮಾಡುವರು.

ಧನಿಷ್ಠ 3–4ನೇ ಪಾದಗಳು, ಶತಭಿಷ ಮತ್ತು ಪೂರ್ವಾಭಾದ್ರ 1–2–3ನೇ ಪಾದಗಳು ಕುಂಭರಾಶಿಗೆ ಸೇರುತ್ತವೆ.

ಧನಿಷ್ಠಾ ನಕ್ಷತ್ರದ ವಿಚಾರ ಈ ಅಧ್ಯಾಯದ ಮೊದಲಿನಲ್ಲೇ ಹೇಳಿದೆ. 3ನೆಯ ಪಾದದಲ್ಲಿ ಜನನವಾಗಿದ್ದರೆ ಸುಗುಣಶಾಲಿ, ಆಯುಷ್ಯವಂತ. 4ನೇ ಪಾದವಾದರೆ ಕ್ರೂರಿ ಹಾಗೂ ಪಾಪಿ.

ಶತಭಿಷನಕ್ಷತ್ರದ ಅಧಿಪತಿ ವರುಣ. ಇದರಲ್ಲಿ ಹುಟ್ಟಿದವರು ಕುಟುಂಬವಂತರಾಗಿ, ಗೃಹಸ್ಥನೆನಿಸಿಕೊಂಡು, ಯೋಗ್ಯನಾಗಿ ಮೌನವಾಗಿ ಬಾಳ್ವೆ ಮಾಡುವನು. 1ನೆಯ ಪಾದವಾದರೆ ಸ್ನೇಹಶೀಲ ಮತ್ತು ಯಥಾರ್ಥ ಹೇಳುವವನು. 2ನೆಯ ಪಾದವಾದರೆ ಭಯಪಡುತ್ತಾನೆ. 3ನೇ ಪಾದವಾದರೆ ಕ್ರೂರವಾದ ಕೆಲಸ ಮಾಡುವವನೂ, ಮುಕ್ಕಳಿರುವವನೂ, ಆಗಿರುತ್ತಾನೆ. 4ನೆಯ ಪಾದವಾದಲ್ಲಿ ಅಭಿಮಾನಿ, ತಿಳುವಳಿಕಸ್ಥ, ಒಳ್ಳೆಯ ಕೆಲಸಗಳನ್ನು ಮಾಡುವವನು. 3–24–40–53–63ನೇ ವರ್ಷಗಳಲ್ಲಿ ಗಂಡಾಂತರವುಂಟು. ಪರಮಾಯುರ್ದಾಯ 80ವರ್ಷಗಳು. ಈ ನಕ್ಷತ್ರದಲ್ಲಿ ಹೋದ ವಸ್ತು ಮೂರು ದಿವಸಗಳಲ್ಲಿ ಸಿಕ್ಕುತ್ತದೆ. ಜ್ವರ ಬಂದರೆ ಹತ್ತು ದಿವಸಗಳು ಕ್ರೂರ. ಶಾಂತಿ ಆಚರಿಸಿದರೆ ಆರೋಗ್ಯವಾಗುತ್ತದೆ.

6ನೇ ಅಧ್ಯಾಯದಲ್ಲಿ ಪೂರ್ವಾಭಾದ್ರ ನಕ್ಷತ್ರದ ವಿಚಾರವನ್ನು ಪ್ರಸ್ತಾಪಿಸಿದೆ. 1ನೇ ಪಾದದಲ್ಲಿ ಜನನವಾದರೆ ಭೋಗಿ, ಉದ್ಯೋಗಿ. 2ನೆಯ ಪಾದವಾದರೆ ಸಾಹಸಿ, ಛಲಸಾಧಿಸುವಾತ, ಆಲೋಚಿಸುವವನು. 3ನೆಯ ಪಾದವಾದಲ್ಲಿ ಜ್ಞಾನಸುಖ ಪಡೆಯುವನು. ತಂದೆತಾಯಿಗಳಲ್ಲಿ ಪ್ರೀತಿ, ವಿಲಕ್ಷಣಪರ.

ರಾಹು

ರಾಹು, ಕೇತುಗಳನ್ನು ಛಾಯಾಗ್ರಹಗಳೆನ್ನುವರು. ವರಾಹಮಿಹಿರನ 'ಬೃಹಜ್ಜಾತಕ'ದಲ್ಲಿ ರಾಹು, ಕೇತುಗಳ ಪ್ರಸ್ತಾಪವೇ ಇಲ್ಲ. ಪಾಶ್ಚಾತ್ಯ ಜ್ಯೋತಿಷಿಗಳು ಈಚೆಗೆ ಹರ್ಷಲ್, ಪ್ಲೂಟೋ, ನೆಪ್ಚ್ಯೂನ್ ಗ್ರಹಗಳನ್ನು ಕಂಡುಕೊಂಡಂತೆ ಪೌರ್ವಾತ್ಯರು ರಾಹು, ಕೇತುಗಳನ್ನು ಸೇರಿಸಿಕೊಂಡರು. ಇವುಗಳನ್ನು ಕುರಿತು ಒಮ್ಮತ ಅಥವಾ ಏಕಾಭಿಪ್ರಾಯ ಇಲ್ಲ. ಹೀಗಾಗಿ ರಾಹು, ಕೇತುಗಳ ಫಲ ಹೇಳಬೇಕಾದರೆ 'ಜಾತಕ ಚಂದ್ರಿಕೆ'ಯಲ್ಲಿ ಹೇಳಿರುವಂತೆ:

ಯುದ್ಭಾವ ಗತೌವಾಪಿ, ಯುದ್ಭಾವೇಶ ಸಂಯುತಾ।
ತತ್ತತ್ಫಲಾನಿ ಪ್ರಬಲೌ, ಪ್ರದಿಶೇತಾಂ ತಮೋಗ್ರಹೌ॥

ಇರುವುದು ಯಾವ ಭಾವದಲ್ಲಿ, ಯಾವ ಭಾವಾಧಿಪತಿಯ ಸಂಬಂಧವಿದೆ. ಇವರುಗಳ ಕಾರಕತ್ವ ಎಲ್ಲವನ್ನೂ ಕ್ರೋಢೀಕರಿಸಿಕೊಂಡು ಸಮುದಾಯ ಫಲ ಹೇಳಬೇಕಾಗುತ್ತದೆ.

ಮಲಯಾಳಿಗಳು ರಾಹು ಕೇತುಗಳನ್ನು ಶಿಖಿಸರ್ಪಿ ಎನ್ನುತ್ತಾರೆ. ಈ ಪ್ರಕಾರ ರಾಹುವಿನ ಅಧಿದೇವತೆ ಸುಬ್ರಹ್ಮಣ್ಯೇಶ್ವರ ಆಗುತದೆ. ಸಾಧಾರಣವಾಗಿ ಕುಜನಿಗೆ ಈ ಅಧಿದೇವತೆಯನ್ನು ಸೂಚಿಸಿದ್ದಾರೆ. 'ರಾಹು ಇಂದವ ಶುಕ್ರಃ ಸ್ತ್ರೀಯಃ' ಎಂಬ ಇನ್ನೊಂದು ಹೇಳಿಕೆಯೂ ಇದೆ. ಇದರ ಪ್ರಕಾರ ದುರ್ಗೆ ಅಧಿದೇವತೆಯಾಗುವಳು.

'ಶನಿವದ್ ರಾಹುಃ ಕುಜವತ್ ಕೇತುಃ' ಎನ್ನುವ ವಾದವೂ ಒಂದಿದೆ. ಇದರ ಅನುಸಾರವಾಗಿ ರಾಹುವಿಗೆ ಶನಿಯ ಗುಣಗಳು, ಕೇತುವಿಗೆ ಕುಜನ ಗುಣಗಳನ್ನೂ ಸೂಚಿಸಬೇಕಾಗುತ್ತದೆ

'ಜಾತಕ ಕಳಾನಿಧಿ'ಯಲ್ಲಿ ರಾಹುವಿನ ಕಾರಕತ್ವವನ್ನು ಹೀಗೆ ವಿವರಿಸಿದೆ;

ಬೈಗಳು, ದಂಡನೆ, ವಿಪರೀತಬುದ್ಧಿ, ಹಾವು, ವಿದೇಶಿಯರು, ಧೈರ್ಯ,

ಸಾಹಸ, ಹೊಗೆ, ಸ್ಮಶಾನ, ಕಳ್ಳತನ, ಭೇದ, ವಿಧವೆ, ವ್ಯವಹಾರ, ಕಲ್ಲು ಕುಟ್ಟುವುದು, ಕುಟ್ಟುವುದು, ತೂತು, ಸುಳಿ, ಹುತ್ತ, ಅಕ್ಕಸಾಲೆ, ಚರ್ಮ, ಕಿಣ್ವ, ಪ್ರಭೇದ, ವ್ರಣ, ಮರ, ಬೀಳುವಿಕೆ, ಗಹನಾರಣ್ಯ, ಉತ್ಪಾತ, ಜ್ವರ, ಅಪಸ್ಮಾರ, ಕಾಲರಾ, ಕುಗ್ಗುವುದು, ದೇಶ ಪರ್ಯಟನೆ, ವೈರಾಗ್ಯ, ಬಲಾತ್ಕಾರ ಭ್ರಷ್ಟತೆ, ವಿಶ್ರ, ಕಾಡು, ದೊಡ್ಡಯುದ್ಧ, ಹಣ ಗಳಿಸುವ ಸುಖಕ್ಕೆ ಕಷ್ಟ ತಂದೊಡ್ಡುವುದು ಇವುಗಳಿಗೆ ರಾಹು ಕಾರಕನು.

ರಾಹು, ಕೇತುಗಳಿಗೆ ಸ್ವಕ್ಷೇತ್ರ, ಉಚ್ಚ ನೀಚ ರಾಶಿಗಳ ಕುರಿತಾಗಿ ಕೂಡಾ ಭೇದಗಳಿವೆ. ಆದರೂ ಬಹುಜನರಿಂದ ಸಮ್ಮತಿ ಪಡೆದಿರುವುದು ಹೀಗಿದೆ:

ರಾಹೋಸ್ತು ವೃಷಭಂ ಶ್ರೇಷ್ಠಃ।
ಕೇತೋಸ್ತು ವೃಶ್ಚಿಕ ಸಂಜ್ಞಿಕಂ ॥

ರಾಹುವಿಗೆ ಸ್ವಕ್ಷೇತ್ರ ಕನ್ಯಾ, ವೃಷಭದಲ್ಲಿ ರಾಹು ಉಚ್ಚ, ನೀಚ ರಾಶಿ ವೃಶ್ಚಿಕ, ಕಟಿಕ ಮೂಲ ತ್ರಿಕೋಣ. ರಾಹುವಿಗೆ ಗ್ರಹರತ್ನ ಹಳದಿ ಬಣ್ಣದ ರತ್ನ ಗೋಮೇಧಿಕ.

ಲಗ್ನದಿಂದ ಆರಂಭವಾಗಿ ಹನ್ನೆರಡು ಮನೆಗಳಲ್ಲಿರುವ ರಾಹು ಕೊಡುವ ಫಲಗಳನ್ನು ತಿಳಿಸಬೇಕಾಗುತ್ತದೆ.

ಯದಿಕೇಂದ್ರ ತ್ರಿಕೋಣೇವ। ನಿವಸೇತಾಂ ತನೋಗ್ರಹೌ ॥
ನಾಥೇನಾನ್ಯತರಸ್ಯೈವಾ। ಸಂಬಂಧಾದ್ಯೋಗ ಕಾರಕೌ ॥

'ಜಾತಕ ಚಂದ್ರಿಕೆ'ಯಲ್ಲಿ ರಾಹು ಕೇತುಗಳು ಕೇಂದ್ರ ಯಾ ತ್ರಿಕೋಣ ಸ್ಥಾನದಲ್ಲಿದ್ದು, ಕೇಂದ್ರತ್ರಿಕೋಣಾಧಿಪತಿಗಳ ಜೊತೆ ಸೇರಿದರೆ ಅಥವಾ ಯೋಗಕಾರಕವಾದ ಬೇರೆ ಗ್ರಹದ ಸಂಬಂಧವಿದ್ದರು ಕೂಡಾ ಯೋಗಕಾರಕ ರಾಗುತ್ತಾರೆ ಎಂದು ಹೇಳಿದೆ. ಈ ಎಲ್ಲಾ ವಿಷಯಗಳನ್ನೂ ಗಮನದಲ್ಲಿರಿಸಿ ಕೊಂಡು ಫಲಭಾಗ ಅರಿಯಬೇಕು.

ಲಗ್ನದಲ್ಲಿ ರಾಹು ಇದ್ದರೆ ಸಂತಾನ ಪ್ರಾಪ್ತಿ ಇರುವುದಿಲ್ಲ. ಮಗು ಸತ್ತು ಹುಟ್ಟುವುದು. ಮೇಷ, ಮಿಥುನ, ಕಟಕ, ಸಿಂಹ, ಕನ್ಯಾ, ಮಕರ ರಾಶಿಗಳಲ್ಲಿ ಯಾವುದರಲ್ಲಿ ರಾಹು ಇದ್ದರೆ ರಾಜಯೋಗವನ್ನುಂಟುಮಾಡುವನು. ಮಹಾ ಭೋಗಿ, ದಯಾವಂತ. ಎರಡನೇ ಮನೆಯಲ್ಲಿ ರಾಹು ಇದ್ದರೆ, ಶರೀರ ವೃದ್ಧಿ, ಬಡತನ, ಪುತ್ರಶೋಕ ಉಂಟಾಗುವುದು. ಇಬ್ಬರು ಮಡದಿಯರು. ಬಣ್ಣ ಕಪ್ಪು

ವಿಕಟವಾದ ಕಣ್ಣು. ಮುಖರೋಗ. ರಾಹು ಮೂರನೇ ಮನೆಯಲ್ಲಿದ್ದರೆ ಐಶ್ವರ್ಯವಂತ, ಲಕ್ಷಾಧೀಶ್ವರ, ಪುತ್ರ ಸಂತಾನ ಅಲ್ಪ, ಧೈರ್ಯಶಾಲಿ, ಸೋದರರಿಂದ ಸುಖ, ಪ್ರತಾಪಶಾಲಿ, ವಂಶಾಭಿವೃದ್ಧಿ ಆಗುವುದು. ಕವಿ ತೊಂದರೆ ಇರುತ್ತದೆ. ನಾಲ್ಕನೇ ಮನೆಯಲ್ಲಿ ರಾಹು ಇದ್ದಲ್ಲಿ ಹೇರಳವಾಗಿ ಆಭರಣಗಳಿರುತ್ತವೆ. ಇಬ್ಬರು ಪತ್ನಿಯರು. ಸೇವಕನಾಗುವನು. ಇಬ್ಬರು ತಾಯಂದಿರಾಗುವರು. ಐದನೆಯ ಮನೆಯಲ್ಲಿ ರಾಹು ಇದ್ದರೆ ಮಗನಿಗೆ ಅನಿಷ್ಟ, ಜನ್ಮಾಂತರದ ಸರ್ಪಶಾಪವು ಪೀಡಿಸುವುದು. ವಿಷ್ಣುವಿನ ಅನುಗ್ರಹದಿಂದ ಪುತ್ರ ಸಂತಾನ ಲಭ್ಯ. ಸಂಧಿವಾತ ತಗುಲುವುದು. ಕೆಟ್ಟದಾರಿ ಹಿಡಿಯುವನು. ರಾಜನ ಕೋಪಕ್ಕೆ ಗುರಿಯಾಗುವನು. ಕೆಟ್ಟ ಶೇಕದಾರ ಎನಿಸಿಕೊಳ್ಳುವನು. ರಾಹು ಆರನೆಯ ಮನೆಯಲ್ಲಿದ್ದರೆ ಪತ್ನೀ ನಾಶವಾಗುವುದು. ಶತ್ರುವನ್ನು ಸದೆಬಡಿಯುವನು. ಅತ್ಯಂತ ಧನಿಕ. ತುಂಬಾ ಸುಖಿ. ಶತ್ರುಗಳು ನಾಶ ಹೊಂದುವರು. ಜ್ಞಾತಿ ವೃದ್ಧಿಯಾಗುವುದು. ಏಳನೇ ಮನೆಯಲ್ಲಿ ರಾಹು ಇದ್ದರೆ ಇಬ್ಬರು ಹೆಂಡತಿಯರು. ಮೊದಲನೆಯ ಹೆಂಡತಿಗೆ ರಜಸ್ಸಿಗೆ ಸಂಬಂಧಪಟ್ಟ ಕಾಯಿಲೆ. ಎರಡನೇ ಹೆಂಡತಿ ಪ್ಲೀಹ ರೋಗದಿಂದ ಬಳಲುವಳು. ವಿಧವೆಯ ಸಂಗ ಮಾಡುವನು. ಮೂತ್ರರೋಗ ಬರುವುದು. ರಾಹು ಎಂಟನೆಯ ಮನೆಯಲ್ಲಿದ್ದರೆ ಜಗಳಗಂಟಿಗ ಸ್ವಭಾವ. ಪಾಪಿ, ಮೂವತ್ತೆರಡನೆಯ ವರ್ಷದಲ್ಲಿ ಕಂಟಕವಿದೆ. ರಾಹುವಿನೊಡನೆ ಶುಭಗ್ರಹ ಸೇರಿದರೆ ಐವತ್ತು ವರ್ಷಕ್ಕೆ ಗಂಡ. ಒಂಭತ್ತನೇ ಮನೆಯಲ್ಲಿ ರಾಹು ಇದ್ದರೆ ಸ್ತ್ರೀಯರನ್ನು ವಶಪಡಿಸಿಕೊಳ್ಳುವನು. ಗಂಡುಮಕ್ಕಳನ್ನು ಬಿಟ್ಟುಬಿಡುವನು. ಶೂದ್ರಸಂಪರ್ಕ ಆಗುವುದು. ಸೇವಕ ವೃತ್ತಿ ಮಾಡುವನು. ಧರ್ಮ ಕಿಂಚಿತ್ತೂ ಇರುವುದಿಲ್ಲ. ಹತ್ತನೇ ಮನೆಯಲ್ಲಿ ರಾಹು ಇದರೆ ಎಲ್ಲಾ ವಿಧವಾದ ಐಶ್ವರ್ಯಗಳೂ ಸೇರಿರುವುವು. ವಿಧವೆಯ ಸಂಗ ಮಾಡುತ್ತಾನೆ. ಕಾವ್ಯ, ನಾಟಕ, ಅಲಂಕಾರ ಮೊದಲಾದುವುಗಳಲ್ಲಿ ಪಾಂಡಿತ್ಯ. ದೂರದ ಯಾತ್ರೆ, ಒಳ್ಳೆಯ ಕೆಲಸಗಳಿಗೆ ವಿಘ್ನ ಬರುವುದು. ಸಂಧಿವಾತ ಕಾಯಿಲೆಯಿಂದ ನರಳುತ್ತಾನೆ, ರಾಹು ಹನ್ನೊಂದನೆಯ ಮನೆಯಲ್ಲಿದ್ದರೆ ಧನ ಧಾನ್ಯ ಸಮೃದ್ಧವಾಗಿರುತ್ತದೆ. ಪುತ್ರರು ಅನೇಕ ಮಂದಿ ಇರುವರು. ಮ್ಲೇಚ್ಛನನ್ನು ಪೂಜಿಸುವವನಾಗುತ್ತಾನೆ. ಹನ್ನೆರಡರಲ್ಲಿ ರಾಹು ಇದ್ದರೆ ಜಿಪುಣ, ತುಂಬಾ ಖರ್ಚು ಮಾಡಿಸು

ವನು. ಪುತ್ರಸಂತಾನ ಕಡಿಮೆ. ಕಣ್ಣಿನ ರೋಗ ಉಂಟಾಗುತ್ತದೆ.

ರಾಹು ದಶೆಯ ಅವಧಿ 18 ವರ್ಷಗಳು. ಅರಿದ್ರಾ, ಸ್ವಾತಿ, ಶತಭಿಷ ನಕ್ಷತ್ರಗಳಲ್ಲಿ ಜನಿಸಿದವರಿಗೆ ಜನನ ಕಾಲದಲ್ಲಿ ರಾಹು ದಶೆ ಇರುವುದು.

ರಾಹು ಕೇತುಗಳು ಶುಭಸ್ಥಾನಗಳಲ್ಲಿದ್ದು, ಯಾವುದೇ ಗ್ರಹದ ಸಂಬಂಧ ಇಲ್ಲದಿದ್ದರೆ, ತಮ್ಮ ಅಂತರ್ದಶೆಗಳಲ್ಲಿ ರಾಜಯೋಗವನ್ನು ಕೊಡುತ್ತಾರೆ ಎಂಬುದಾಗಿ 'ಜಾತಕ ಚಂದ್ರಿಕೆ'ಯಲ್ಲಿ ಹೇಳಿದೆ.

ರಾಹು ದಶೆ ಬಂದರೆ ಬುದ್ಧಿ ವಿಕಾರ, ಪತ್ನಿ ಪುತ್ರರ ಮರಣ, ಅತೀವ ಕಷ್ಟ, ತಂದೆಗೆ ಅನಿಷ್ಟ, ಪರದೇಶಕ್ಕೆ ಹೋಗುವುದು, ಸ್ವಜನ ವಿರೋಧ ಉಂಟಾಗುವುದು.

ರಾಹು ಉಚ್ಚರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ವಾಗ್ವಿಲಾಸ, ವಸ್ತ್ರ ವಾಹನ ಕ್ಷೇತ್ರಗಳ ಅಭಿವೃದ್ಧಿ, ಬಂಧು ಸಂರಕ್ಷಣೆ, ಪುರಾಧಿಪತ್ಯ ಉಂಟು ಮಾಡುವನು. ಉಚ್ಚರಾಶಿಯಲ್ಲಿರುವ ರಾಹುವಿನ ದಶೆಯಲ್ಲಿ ರಾಜಪೂಜ್ಯತೆ, ಉತ್ತಮ ವಸ್ತ್ರಪ್ರಾಪ್ತಿ, ಚಿನ್ನದ ಲಾಭ, ಉತ್ತಮಳಾದ ಸ್ತ್ರೀಯೊಡನೆ ವಿವಾಹ ಸುಖ ಉಂಟಾಗುವುದು. ಅತಿ ಮಿತ್ರ ರಾಶಿಯಲ್ಲಿರುವ ರಾಹುವಿನ ದಶೆಯಲ್ಲಿ ತೀರ್ಥಯಾತ್ರಾ ಫಲ, ಅತೀವ ಸುಖ, ಮನೆ ಕ್ಷೇತ್ರಗಳ ಅಭಿವೃದ್ಧಿ ಲಭ್ಯ. ಮಿತ್ರ ರಾಶಿಯಲ್ಲಿರುವ ರಾಹುವಿನ ದಶೆಯಲ್ಲಿ ಪರೋಪಕಾರ, ವಿದ್ಯಾವಿಲಾಸ, ಸ್ವಜನರಿಂದ ಸಂತೋಷ, ಮಣಿ ವಸ್ತ್ರಗಳ ಲಾಭ, ಪಾಂಡಿತ್ಯ, ದೀಕ್ಷಾ ಪ್ರಸಂಗ ಸಂಭವಿಸುವುದು. ರಾಹು ಸಮರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕೊಂಚ ಸುಖ, ಸ್ವಲ್ಪ ಕಷ್ಟ, ದಶೆಯ ಕೊನೆಯ ಭಾಗದಲ್ಲಿ ಅಲ್ಪ ತೊಂದರೆಗಳು, ಸ್ಥಾನನಾಶ ಉಂಟುಮಾಡುವನು. ಶತ್ರುರಾಶಿಯಲ್ಲಿರುವ ರಾಹುವಿನ ದಶೆಯಲ್ಲಿ ರಾಜ ಕೋಪ, ಯುದ್ಧಭೀತಿ, ಧಾನ್ಯನಾಶ, ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಅಡಚಣೆ ಒದಗುವುದು. ಅತಿಶತ್ರುರಾಶಿಯಲ್ಲಿರುವರಾಹುವಿನ ದಶೆಯಲ್ಲಿ ಜಗಳ, ಧನಕ್ಷಯ, ಸ್ವಜನಹಾನಿ, ಯತ್ನಕಾರ್ಯ ವಿಘ್ನ, ವಿಷ ಸರ್ಪಬಾಧೆ, ರಾಜಕೋಪ, ರೋಗಗಳುಂಟಾಗುವುವು. ನೀಚ ರಾಶಿಯಲ್ಲಿರುವ ರಾಹುವಿನ ದಶೆಯಲ್ಲಿ ಪತ್ನಿಗೆ ಹಾನಿ, ಸುಖ ನಾಶ. ನೀಚ ಜನರ ಸಹವಾಸ, ವಿಧವೆಯೊಡನೆ ಜಗಳ ಸಂಭವಿಸುವುದು. ಅತಿ ನೀಚರಾಶಿಯಲ್ಲಿರುವ ರಾಹುವಿನ ದಶೆಯಲ್ಲಿ ಅತೀವ ಭಯ. ಪ್ರಾಣಿಗಳ ನಾಶ, ಸಮಾನಜನರಿಗೆ ಹಾನಿ

ಉಂಟಾಗುವುದು. ಆರೋಹಿ ರಾಹುವಿನ ದಶೆಯಲ್ಲಿ ಪತ್ನಿ ಪುತ್ರ ಧನ ಸುಖ, ಮಿತ್ರನಾದ ರಾಜನಿಂದ ಸುಖ, ಗ್ರಾಮಾಧಿಪತ್ಯ ಲಭಿಸುವುದು. ರಾಹು ಅವರೋಹಿಯಾಗಿದ್ದರೆ ತನ್ನ ದಶಾಕಾಲದಲ್ಲಿ ರಾಜನೊಡನೆ ಜಗಳ, ಮಾನ ಭಂಗ, ಮನೋವ್ಯಥೆ, ಅತೀವ ತಾಪ ಉಂಟುಮಾಡುತ್ತಾನೆ. ಶುಭ ಗ್ರಹದ ಜೊತೆ ಇರುವ ರಾಹುವಿನ ದಶಾಕಾಲದಲ್ಲಿ ಅತೀವ ಸುಖ, ಜಯ, ಉದ್ಯೋಗ ಲಾಭ, ಗ್ರಾಮಾಧಿಪತ್ಯ, ಸ್ವಜನರಿಂದ ಅನುಕೂಲ, ರಾಜಪೂಜ್ಯತೆ ಲಭಿಸುವುದು. ಪಾಪ ಗ್ರಹದ ಜೊತೆ ಇರುವ ರಾಹು ತನ್ನ ದಶಾಕಾಲದಲ್ಲಿ ಸದಾ ಪಾಪಕಾರ್ಯಗಳ ಚಿಂತೆ, ಸ್ಥಾನನಾಶ, ಬಂಧುಗಳಿಂದ ಅಪವಾದ, ಮನೋವ್ಯಥೆ, ರಾಜಕೋಪ ಉಂಟಾಗುವುದು.

ರಾಹು ಮೇಷರಾಶಿಯಲ್ಲಿದ್ದರೆ ಮನೆಯಲ್ಲಿ ಉತ್ಸವ, ಮಂಗಳವಾದ್ಯಗಳ ಘೋಷ, ರಾಜಪೂಜ್ಯತೆ, ಭೂಮಿಯ ಒಡೆತನ, ಪತ್ನಿ ಪುತ್ರ ಮಿತ್ರರಿಂದ ಸುಖ ಉಂಟಾಗುವುದು. ವೃಷಭದಲ್ಲಿರುವ ರಾಹುವಿನ ದಶೆಯಲ್ಲಿ ವಿದ್ಯಾವಿಲಾಸ, ಉತ್ತಮ ವಸ್ತು ಲಾಭ, ಕ್ಷೇತ್ರಾಧಿಪತ್ಯ, ಚಿನ್ನ-ಗೋವು-ಭೂಮಿ-ಧಾನ್ಯ-ವಸ್ತ್ರಗಳ ಲಾಭ, ಸುಖ ಲಭಿಸುವುದು. ಮಿಥುನದಲ್ಲಿರುವ ರಾಹುವಿನ ದಶೆಯಲ್ಲಿ ರಾಜಭೀತಿ, ಶತ್ರುಕೋಪ, ಪತ್ನಿಗೆ ತೊಂದರೆ, ಕಷ್ಟ, ಬಂಧು ವಿರೋಧ, ಸ್ಥಾನನಾಶ ಹೊಂದುವನು. ಕಟಕದಲ್ಲಿರುವ ರಾಹುವಿನ ದಶೆಯಲ್ಲಿ ಪತ್ನಿ ಪುತ್ರರ ಸುಖ, ಬಹಳ ಧನ ಪ್ರಾಪ್ತಿ, ವಿದ್ಯೆ, ಲಕ್ಷ್ಮೀಕಟಾಕ್ಷ. ವಿವಿಧ ಧಾನ್ಯ ಸಮೃದ್ಧಿ, ಶುಭರಾಜ್ಯಾಧಿಪತ್ಯ ಸಂಭವಿಸುವುದು. ರಾಹು ಸಿಂಹದಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜನಿಗ್ರಹ, ಧನ ಧಾನ್ಯಕ್ಷೇತ್ರ ಪಶುಗಳ ಹಾನಿ ಉಂಟುಮಾಡುವನು. ಕನ್ಯಾದಲ್ಲಿರುವ ರಾಹುವಿನ ದಶೆಯಲ್ಲಿ ಸ್ತ್ರೀ ಸುಖ, ಗಣ್ಯರಿಂದ ಪೂಜ್ಯತೆ, ಭೂಮಿಕ್ಷೇತ್ರ ಧನ ಧಾನ್ಯ ಲಾಭ ಉಂಟಾಗುವುದು. ತುಲಾದಲ್ಲಿರುವ ರಾಹುವಿನ ದಶೆಯಲ್ಲಿ ವ್ಯವಸಾಯದಲ್ಲಿ ಫಲವಿರುವುದು. ಕ್ಷೇತ್ರಧನ ಧಾನ್ಯನಾಶ, ರಾಜಭಯ, ಸ್ಥಾನನಾಶ, ಸಮಾನಜನ-ಪಿತೃ-ಬಂಧುಗಳಲ್ಲಿ ನಾಶ ಸಂಭವಿಸುವುದು. ರಾಹು ವೃಶ್ಚಿಕದಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜಪೂಜ್ಯತೆ, ಬಂಧುಗಳಲ್ಲಿ ಸ್ನೇಹ, ಗೋವು ಭೂಮಿಗಳ ಲಾಭ, ಯುದ್ಧದಲ್ಲಿ ಶತ್ರುನಾಶ ಉಂಟುಮಾಡುವನು. ಧನುಸ್ಸಿನಲ್ಲಿರುವ ರಾಹುವಿನ ದಶೆಯಲ್ಲಿ ಪಶು ನಾಶ, ಅತಿಭಯ, ಸ್ವಜನ ವಿರೋಧ, ಶತ್ರುವೃದ್ಧಿ, ತಂದೆಯ

ಕಡೆಯ ಬಂಧು ನಾಶ, ಸಮಾನ ಜನ ಕಷ್ಟ ಉಂಟಾಗುವುದು. ಮಕರದಲ್ಲಿರುವ ರಾಹುವಿನ ದಶೆಯಲ್ಲಿ ಪತ್ನಿ ಪುತ್ರ ಸುಖ, ಭೂಮಿ ಗೋವು ಧನ ಕ್ಷೇತ್ರ ಗಳ ವೃದ್ಧಿ, ರಾಜಪೂಜ್ಯತೆ, ಗ್ರಾಮಾಧಿಪತ್ಯ ದೊರಕುವುದು. ಕುಂಭದಲ್ಲಿರುವ ರಾಹುವಿನ ದಶೆಯಲ್ಲಿ ಪತ್ನಿಪುತ್ರಾದಿ ಪೀಡೆ, ಶತ್ರುವೃದ್ಧಿ, ಕಷ್ಟ, ಕ್ಷೇತ್ರನಾಶ, ಶಾರೀರಿಕ ಕಷ್ಟ, ಗೋ ಭೂಮಿ ನಾಶ ಉಂಟಾಗುವುದು. ಮೀನದಲ್ಲಿರುವ ರಾಹುವಿನ ದಶೆಯಲ್ಲಿ ಕಷ್ಟ ಫಲ. ರಾಜಭೀತಿ, ಕಳ್ಳರ ಭಯ, ಜಗಳ, ಸ್ವಜನ ವಿರೋಧ, ಸಮಾನ ಜನ ಹಾನಿ ಸಂಭವಿಸುವುದು.

ರಾಹು ಲಗ್ನದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಉಷ್ಣ, ಕಾಂತಿಹೀನತೆ, ಬಂಧುವಿರೋಧ, ಸ್ಥಾನನಾಶ, ಶತ್ರುವೃದ್ಧಿ ಇವನ್ನು ಉಂಟುಮಾಡುವನು. ಎರಡರಲ್ಲಿರುವ ರಾಹುವಿನ ದಶೆಯಲ್ಲಿ ಪತ್ನಿಪುತ್ರನಾಶ, ಜಗಳ, ಭಯ, ಧನ ಧಾನ್ಯ ನಾಶ, ಎಲ್ಲರಲ್ಲಿ ವೈರತ್ವ, ರಾಜಕೋಪ ಸಂಭವಿಸುವುವು. ಮೂರರಲ್ಲಿ ರುವ ರಾಹುವಿನ ದಶೆಯಲ್ಲಿ ವಸ್ತ್ರ ಆಭರಣಗಳು ಹೆಚ್ಚುವುದು, ಪಂಡಿತರು ರಾಜರಿಂದ ಪೂಜ್ಯತೆ, ಬಂಧುಗಳಿಗೆ ಉಪಕಾರಿ ಆಗುತ್ತಾನೆ. 4ನೆಯ ಮನೆ ಯಲ್ಲಿರುವ ರಾಹುವಿನ ದಶೆಯಲ್ಲಿ ರಾಜಕೋಪ, ತಾಯಿಗೆ ಹಾನಿ, ಕೃಷಿನಾಶ, ಸಮಾನ ಜನರಿಗೆ ಕಷ್ಟ, ಬಂಧು ನಾಶ, ಭೂ ಕ್ಷೇತ್ರಗಳ ನಾಶ ಲಭಿಸುವುದು. ರಾಹು ಐದರಲ್ಲಿದ್ದರೆ ಪುತ್ರಹಾನಿ, ರಾಜಭೀತಿ, ಧನಕ್ಷಯ, ಸ್ವಜನರಲ್ಲಿ ಜಗಳವೂ ಆ ದಶೆಯಲ್ಲಿ ಘಟಿಸುವುದು. ಆರರಲ್ಲಿರುವ ರಾಹುವಿನ ದಶೆಯಲ್ಲಿ ತೇಜೋವೃದ್ಧಿ, ರಾಜನ ಸ್ನೇಹ, ಉತ್ತಮ ವಸ್ತು ಲಾಭ, ಶತ್ರುಹಾನಿ, ವಸ್ತ್ರ ಚಿನ್ನಾಭರಣಗಳ ಲಾಭ ಉಂಟಾಗುವುದು. ಏಳರಲ್ಲಿರುವ ರಾಹುವಿನ ದಶೆಯಲ್ಲಿ ದುಃಖ, ಕ್ಷೇತ್ರನಾಶ, ನೀಚರಾದ ಶತ್ರುಗಳ ಭಾದೆ, ರಾಜಭೀತಿ, ಸ್ಥಾನಚಲನೆ, ಮಿತ್ರದ್ವೇಷ, ವಿವಾದಭಯ ಇವು ಲಭಿಸುವುದು. ರಾಹು ಎಂಟನೆಯ ಮನೆ ಯಲ್ಲಿದ್ದರೆ ಜಗಳಗಂಟಿಗ ಸ್ವಭಾವ, ಪಾಪಿ, ಮೂವತ್ತಿರಡನೆಯ ವರ್ಷದಲ್ಲಿ ಕಂಟಕವಿದೆ. ರಾಹುವಿನೊಡನೆ ಶುಭಗ್ರಹ ಸೇರಿದ್ದರೆ ಐವತ್ತು ವರ್ಷಕ್ಕೆ ಗಂಡ. ರಾಹು ಒಂಬತ್ತರಲ್ಲಿದ್ದರೆ ತನ್ನ ದಶೆಯಲ್ಲಿ ರಾಜನ ಸ್ನೇಹ, ಉತ್ತಮ ತೀರ್ಥ ಯಾತ್ರಾ ಫಲ, ಬಂಧುಗಳಿಗೆ ಉಪಕಾರ, ಧನ ಧಾನ್ಯ ಧರ್ಮಗಳ ವೃದ್ಧಿ ಉಂಟುಮಾಡುತ್ತಾನೆ. ಹತ್ತರಲ್ಲಿರುವ ರಾಹುವಿನ ದಶೆಯಲ್ಲಿ ಯಜ್ಞ ನಡೆಸಿದರೆ ಶುಭ ಫಲ ಪ್ರಾಪ್ತವಾಗುವುದು. ದೇವ ಬ್ರಾಹ್ಮಣ ಪೂಜೆ, ಮನೆ

ಯಲ್ಲಿ ಮಂಗಳ ಮಹೋತ್ಸವಗಳಾಗುವುವು, ಲಕ್ಷ್ಮೀಕಟಾಕ್ಷ, ಧನ ಧಾನ್ಯ ಕ್ಷೇತ್ರ ವಸ್ತ್ರ ಆಭರಣಗಳ ವೃದ್ಧಿ ಲಭಿಸುವುದು. ಹನ್ನೊಂದರಲ್ಲಿರುವ ರಾಹುವಿನ ದಶಾಕಾಲದಲ್ಲಿ ಧನ ಧಾನ್ಯ ವೃದ್ಧಿ, ವಸ್ತ್ರ ವಾಹನ ಭೂಷಣಗಳ ಸುಖ, ರಾಜ ಪೂಜ್ಯತೆ, ಬಂಧುವಿಗೆ ಉಪಕಾರ ಜರುಗುವುದು. ಹನ್ನೆರಡರಲ್ಲಿರುವ ರಾಹುವಿನ ದಶಾಕಾಲದಲ್ಲಿ ಪತ್ನಿನಾಶ, ವ್ಯವಸಾಯದಲ್ಲಿ ಹಾನಿ, ಶತ್ರು ವೃದ್ಧಿ, ಸಮಾನಜನ ಕಷ್ಟ ಉಂಟಾಗುವುದು.

ಕೇಂದ್ರಗಳಲ್ಲಿರುವ ರಾಹುವಿನ ದಶೆಯಲ್ಲಿ ವಾಹನ ಆಭರಣ ಧನ ಧಾನ್ಯ ಕ್ಷೇತ್ರಗಳ ವೃದ್ಧಿ, ರಾಜಸ್ನೇಹ ಪಡೆಯುತ್ತಾನೆ. ತ್ರಿಕೋಣದಲ್ಲಿರುವ ರಾಹುವಿನ ದಶೆಯಲ್ಲಿ ಶುಭಫಲ, ಪತ್ನಿ ಪುತ್ರರ ನಾಶ, ತಾಯಿಗೆ ಹಾನಿ, ಕ್ಷೇತ್ರ ಧಾನ್ಯ ಅಭಿವೃದ್ಧಿ, ಮನೋವ್ಯಥೆ ಉಂಟಾಗುವುದು.

ಕೇತು

ಕೇತು ಮತ್ತೊಂದು ಛಾಯಾಗ್ರಹ. ರಾಹುವಿನಂತೆಯೇ ಕೇತುವಿನ ವಿಚಾರದಲ್ಲಿಯೂ ಭಿನ್ನಾಭಿಪ್ರಾಯಗಳಿವೆ ಎಂಬುದನ್ನು ಹಿಂದಿನ ಅಧ್ಯಾಯದಲ್ಲೇ ವಿಶದಪಡಿಸಿ ಆಗಿದೆ. ಕೇತುವಿಗೂ ರಾಹುವನ್ನನುಸರಿಸಿ ಚಂದ್ರ ನಕ್ಷತ್ರದಲ್ಲಿದೆ ಅಥವಾ ಕುಜನ ನಕ್ಷತ್ರದಲ್ಲಿದೆ ಎಂದು ಹೇಳುವ ವಾಡಿಕೆ ಉಂಟು. ರೋಹಿಣಿ ನಕ್ಷತ್ರದಲ್ಲಿ ಕೇತು ಇದ್ದರೆ ಚಂದ್ರನಕ್ಷತ್ರವೆಂದೂ ಮೃಗಶಿರಾ ನಕ್ಷತ್ರವಾದಲ್ಲಿ ಕುಜನ ನಕ್ಷತ್ರ ಎಂತಲೂ ಹೇಳುವರು. ಇತರ ಏಳು ಗ್ರಹಗಳು ಮುಂದೆ ನಡೆಯುವಾಗ ರಾಹು ಕೇತುಗಳದು ಹಿಮ್ಮುಖ ನಡೆ.

ಕೇತುವಿನ ಕಾರಕತ್ವವೆಂದರೆ ಮೃತ, ವೈರಾಗ್ಯ, ಅರ್ಥಹೀನ ಭಕ್ತಿ, ಹಣೆಯವೆಲೆ ಹಾಕಿಕೊಳ್ಳುವ ಗುರುತು, ಬಾಹ್ಯಾಡಂಬರ, ನಟನೆ, ವಂಚನೆ, ತೀರ್ಥಯಾತ್ರೆ, ಭಿಕ್ಷೆ ಬೇಡುವುದು., ಜಿಪುಣತನ, ಜಗಳ, ಜಗಳ ತಂದು ಹಾಕುವುದು, ಚಾಡಿಕೋರತನ, ವಿಕಾರ, ಪಿತ್ತ, ಅಸಂಬದ್ಧ ತಿಳುವಳಿಕೆ, ಈಶ್ವರ, ಒಂದರಕರ್ಮ ಇನ್ನೊಂದಕ್ಕೆ ಮಾಡುವುದು, ಗುಹೆಯ ವಾಸ, ನಿಧಿ, ಗಾಗಿ ಅಂಜನ ಸಾಧಿಸುವುದು, ಚಿತ್ರಕಲೆ, ಒಳ್ಳೆಯ ಹೆಸರು, ಪ್ರತಾಪ, ಹೊಟ್ಟೆ ಪಾಡಿಗಾಗಿ ವಿವಿಧ ವೇಷಗಳನ್ನು ಹಾಕಿಕೊಳ್ಳುವುದು, ಶುದ್ಧವಲ್ಲದ ಒಡವೆಗಳು, ತಲೆಯೋಡು, ಜ್ಯೋತಿಷ, ಶಕುನ ಹೇಳುವವನು, ವೈದ್ಯ, ಬೂಟಾಟಿಕೆ ಸನ್ಯಾಸಿ, ಮೋಕ್ಷ ಇವು.

ಮೀನ, ಕುಂಭ ರಾಶಿಗಳು ಕೇತುವಿಗೆ ಸ್ವಕ್ಷೇತ್ರಗಳು, ಉಚ್ಚರಾಶಿ ವೃಶ್ಚಿಕವಾದಂತೆ ವೃಷಭರಾಶಿ ನೀಚಸ್ಥಾನ. ಮಕರ ಮೂಲ ತ್ರಿಕೋಣ. ಗ್ರಹರತ್ನ ಬೆಕ್ಕಿನ ಕಣ್ಣಿನ ಬಣ್ಣದ ರತ್ನ.

ಲಗ್ನ ಮೊದಲಾಗಿ ಹನ್ನೆರಡು ಮನೆಗಳಲ್ಲಿ ಕೇತು ಇರುವುದರ ಫಲ ಹೀಗಿದೆ. ಲಗ್ನದಲ್ಲಿ ಕೇತು ಇದ್ದರೆ ಕೈ ಬೆವರುತ್ತಿರುತ್ತದೆ. ಸೊಂಟದಲ್ಲಿ ರೋಗ, ದೇಹ ಕೃಶ, ಬಲಹೀನ, ಸೌಜನ್ಯ ಇರುವುದಿಲ್ಲ. ವಿಷ ಹಾಕಿದುದರ ಪರಿಣಾಮ

ವಾಗಿ ಬರುವ ರೋಗಗಳು ಕಾಡುವುವು. ಕೇತು ಎರಡನೇ ಮನೆಯಲ್ಲಿದ್ದರೆ ಮಾತು ಚೆನ್ನಾಗಿ ಆಡುವನು, ದುಷ್ಟ, ಎಲ್ಲರಿಂದಲೂ ದೂಷಿಸಲ್ಪಡುತ್ತಾನೆ. ಮೂರನೇಯ ಮನೆಯಲ್ಲಿ ಕೇತು ಇದ್ದರೆ ಜನಪ್ರಿಯನಾಗುವನು. ಪ್ರಬಲ, ನೆಂಟರಿಂದ ಕೂಡಿರುತ್ತಾನೆ. ತಮ್ಮಂದಿರಿಂದ ಸುಖವಿರುವುದಿಲ್ಲ. ಸೊಪ್ಪು ತರಕಾರಿಗಳಿಂದರೆ ಇಷ್ಟ. ನಾಲ್ಕರಲ್ಲಿ ಕೇತು ಇದ್ದರೆ ವಿಷ ಪ್ರಯೋಗದಿಂದ ಬರುವಂಥ ಕಾಯಿಲೆಗಳು ಕಾಡುವುವು. ಜಗಳಗಂಟಿಗ. ಬಲಹೀನ, ತಾಯಿಗೆ ಕಾಯಿಲೆ ಕೇತು ಐದನೆಯ ಮನೆಯಲ್ಲಿದ್ದರೆ ತಲೆ ಮೃದುವಾಗಿರುತ್ತದೆ. ಉದಾರಿ. ಪಾಪಭೀತಿ ಉಳ್ಳವನು. ಮೊದಲು ಪಡೆಯುವುದು ಹೆಣ್ಣುಮಗು. ಮಗನಿಗೆ ಅರಿಷ್ಟಗಳುಂಟು. ಐದನೇ ಮನೆಗೆ ಶುಭಗ್ರಹಗಳ ದೃಷ್ಟಿ ಇದ್ದರೆ ನಿಧಾನವಾಗಿಯೇ ಆದರೂ ಮಗ ಜನಿಸುತ್ತಾನೆ. ಆರರಲ್ಲಿ ಕೇತುವಿದ್ದರೆ ಶತ್ರು ಹಿತವಂತನಂತೆ ತೋರಿಸಿಕೊಳ್ಳುವನು. ಕುಲದಲ್ಲಿ ಶ್ರೇಷ್ಠನೆನಿಸಿಕೊಳ್ಳುವನು. ಮಾತಿನಲ್ಲಿ ಚತುರ. ಮಹಿಳೆಯರಿಗೆ ಬೇಕಾದವನಾಗಿರುವನು. ಏಳರಲ್ಲಿ ಕೇತು ಇದ್ದರೆ ಸೇವಕಿಯ ಸಂಗ ಮಾಡುತ್ತಾನೆ. ಬಹುಕಾಮಿ. ಹೆಂಡತಿಗೆ ಕ್ರೂರ. ವಿಧವೆಯ ಸಂಗ ಮಾಡುವನು. ಗುಪ್ತವಾಗಿ ಕರ್ಮ ಮಾಡುತ್ತಾನೆ. ಕೇತು ಎಂಟನೆ ಮನೆಯಲ್ಲಿದ್ದರೆ ಉತ್ಸಾಹಶಾಲಿ, ಬುದ್ಧಿಶಕ್ತಿ ಕಡಿಮೆ. ಕಣ್ಣಿನ ರೋಗ. ಗಂಡುಮಕ್ಕಳಿಗೆ ಅರಿಷ್ಟ. ಹೆಂಗಸರನ್ನು ನಾಶಪಡಿಸುವನು. ಕಾರಣವಿಲ್ಲದೆ ಜನರಲ್ಲಿ ವಿರೋಧ ಘಟಿಸುವುದು. ಒಂಬತ್ತರಲ್ಲಿ ಕೇತು ಇದ್ದರೆ ಕುರುಡನಾಗುವನು. ಪಾಪಿಷ್ಠ. ಸುಳ್ಳು ಹೇಳುವನು. ಪುತ್ರ ಮಿತ್ರ ಪತ್ನಿ ಇವರುಗಳ ಮನೋಬಲನಾಗಿರುವನು. ಹತ್ತರಲ್ಲಿ ಕೇತು ಇದ್ದರೆ ಉತ್ಸಾಹಿ, ಭೋಗಿ, ಮಂತ್ರೋಪಾಸಕನಾಗಿರುತ್ತಾನೆ. ಹನ್ನೊಂದನೇ ಮನೆಯಲ್ಲಿ ಕೇತು ಇದ್ದರೆ ಬಹು ಜನಪ್ರಿಯನಾಗುವನು. ಮಾತಿನಲ್ಲಿ ಹಾಸ್ಯದ ಹೊನಲು ಹರಿಸುತ್ತಿರುತ್ತಾನೆ. ಶೀಲವು ಚೆನ್ನಾಗಿರುವುದಿಲ್ಲ. ಅಸಂಬದ್ಧವಾಗಿ ವಿಪರೀತ ಮಾತಾಡುತ್ತಾನೆ. ದುಷ್ಟ ಬಂಧುಗಳಿರುತ್ತಾರೆ. ಹನ್ನೆರಡರಲ್ಲಿ ಕೇತು ಇದ್ದರೆ ಮನಸ್ಸು ಚಂಚಲ. ಕಣ್ಣಿನ ರೋಗ ಇರುತ್ತದೆ. ವಿದೇಶದಲ್ಲಿ ವಾಸಿಸುವನು. ಅಪಾತ್ರರಲ್ಲಿ ಪ್ರೀತಿಯುಳ್ಳವನಾಗಿರುತ್ತಾನೆ. ಪರದೇಶ ಸಂಚಾರ. ಜನ್ಮಭೂಮಿಯನ್ನು ಬಿಟ್ಟು ಹೋಗುವನು. ಮೋಕ್ಷ ಲಭಿಸುವುದು.

ಮಖೆ, ಮೂಲ, ಅಶ್ವಿನಿ ನಕ್ಷತ್ರಗಳಲ್ಲಿ ಹುಟ್ಟಿದವರಿಗೆ ಜನನ ಕಾಲದಲ್ಲಿ

ಕೇತು ದಶೆ ನಡೆಯುತ್ತದೆ. ಇದರ ಅವಧಿ ಏಳುವರ್ಷಗಳು.

ಕೇತು ದಶೆಯಲ್ಲಿ ದುಃಖ, ಕಷ್ಟ, ಪುತ್ರ ಮನೆ ಕ್ಷೇತ್ರ ಧಾನ್ಯಗಳ ನಾಶ, ರಾಜ ವಿರೋಧ, ದೇಶ ಸಂಚಾರ, ಸ್ವಜನರು ಬಂಧುಗಳಲ್ಲಿ ವಿರೋಧ ಉಂಟಾಗುವುದು.

ಅತಿ ಉಚ್ಚನಾಗಿರುವ ಕೇತುವಿನ ದಶೆಯಲ್ಲಿ ಸುಕೀರ್ತಿ, ಯುದ್ಧದಲ್ಲಿ ಜಯ, ಚಿನ್ನ–ಆಭರಣ–ವಸ್ತ್ರ–ಗೋವು ಆನೆಗಳ ಲಾಭ ಸಂಭವಿಸುವುದು.

ಕೇತು ಉಚ್ಚರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಮನೋವಿಲಾಸ, ತಾಯಿಕೋಪ, ಅಪೂರ್ವಯಾತ್ರೆ, ಮಣಿ, ಚಿನ್ನ ವಸ್ತ್ರಗಳ ಲಾಭ, ಕೀರ್ತಿ, ಜಯ, ರಾಜಪೂಜ್ಯತೆ, ಪುರಾಣ ಗೀತ ಶ್ರವಣ, ವಿನೋದ ಉಂಟು ಮಾಡುವನು. ಅತಿಮಿತ್ರ ರಾಶಿಯಲ್ಲಿರುವ ಕೇತುವಿನ ದಶೆಯಲ್ಲಿ ಪತ್ನಿ ಮಿತ್ರ ಸ್ವಜನ ವೃದ್ಧಿ, ಧನಲಾಭ, ಗ್ರಾಮಾಧಿಪತ್ಯ ಲಭಿಸುವುದು. ಮಿತ್ರರಾಶಿಯಲ್ಲಿರುವ ಕೇತುವಿನ ದಶೆಯಲ್ಲಿ ಶ್ವೇತ ಛತ್ರ ಲಾಭ, ಸುಖ, ಯುದ್ಧದಲ್ಲಿ ಜಯ ಘಟಿಸುವುದು. ಸಮರಾಶಿಯಲ್ಲಿರುವ ಕೇತುವಿನ ದಶೆಯಲ್ಲಿ ಕೊಂಚ ಲಾಭ, ಅಲ್ಪ ಗ್ರಾಮಾಧಿಪತ್ಯ, ಸ್ವಲ್ಪ ಧಾನ್ಯ ಲಾಭ, ಅಲ್ಪ ಮಿತ್ರವೃದ್ಧಿ, ಕೊಂಚ ಶತ್ರುವೃದ್ಧಿ ಉಂಟಾಗುವುದು. ಸ್ವಕ್ಷೇತ್ರದಲ್ಲಿರುವ ಕೇತುವಿನ ದಶೆಯಲ್ಲಿ ಧನ ಭೂಮಿ ವಸ್ತ್ರವೃದ್ಧಿ, ನಾನಾವಿಧ ಮಂತ್ರಸಿದ್ಧಿ, ರಾಜನಿಂದ ಸುಖ, ಬಂಧುಗಳಿಂದ ಅನುಕೂಲ ಉಂಟಾಗುವುದು. ಶತ್ರುಸ್ಥಾನದಲ್ಲಿರುವ ಕೇತುವಿನ ದಶೆಯಲ್ಲಿ ಪತ್ನಿಗೆ ಪೀಡೆ, ಶತ್ರುವೃದ್ಧಿ, ರಾಜಭಯ, ಮನೋ-ವಿಕಾರ, ಕೀರ್ತಿನಾಶ, ಸ್ವಜನರಲ್ಲಿ ಅಪವಾದ ಸಂಭವಿಸುವುದು. ನೀಚರಾಶಿಯಲ್ಲಿರುವ ಕೇತುವಿನ ದಶಾಕಾಲದಲ್ಲಿ ಅಪಕೀರ್ತಿ, ಸ್ಥಾನನಾಶ, ಪತ್ನಿ ಪುತ್ರ ಪೀಡೆ, ಮನೋವಿಕಾರ, ವಿಧವೆಯೊಡನೆ ಜಗಳ, ಆಚಾರ ಹಾನಿ ಉಂಟಾಗುವುದು. ಆರೋಹಿ ಕೇತುವಿನ ದಶೆಯಲ್ಲಿ ಅತೀವ ಸುಖ, ವಿಚಿತ್ರ ವಸ್ತ್ರ ಪ್ರಾಪ್ತಿ, ಕುದುರೆ ಆರೋಹಣ ಪ್ರಾಪ್ತಿ ಸಂಭವಿಸುವುದು. ಅವರೋಹಿ ಕೇತುವಿನ ದಶೆಯಲ್ಲಿ ತಾಯಿಯ ನಾಶ ಅಥವಾ ಸಹೋದರಿಯ ನಾಶ, ಬಂಧು ವಿರೋಧ, ಅತೀವ ಭಯ ಉಂಟಾಗುವುದು. ಕೇತು ಶುಭ ಗ್ರಹದ ಜೊತೆ ಸೇರಿದರೆ ತನ್ನ ದಶಾಕಾಲದಲ್ಲಿ ಉತ್ತಮ ವಸ್ತ್ರ ಆಭರಣಗಳ ಲಾಭ, ಕೀರ್ತಿ, ಪುತ್ರನಿಂದ ಸುಖ, ಜಯ, ಮಣಿ ಲಾಭ, ಕ್ಷೇತ್ರಾರ್ಥವೃದ್ಧಿ ಉಂಟು

ಮಾಡುವನು. ಪಾಪಗ್ರಹದೊಡನೆ ಸೇರಿರುವ ಕೇತುವಿನ ದಶೆಯಲ್ಲಿ ರಾಜ್ಯ ನಾಶ, ಮಿತ್ರವಿರೋಧ, ಪ್ರಾಣಿನಾಶ ಸಂಭವಿಸುವುದು.

ಕೇತು ಮೇಷ ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಕ್ಷೇತ್ರನಾಶ, ರಾಜನೊಡನೆ ಜಗಳ, ಗೋವುಗಳ ನಾಶ, ಸಮಾನಜನ ಕಷ್ಟ, ಕ್ಷೇತ್ರನಾಶ, ಸ್ಥಾನಹಾನಿ ಉಂಟುಮಾಡುವನು. ವೃಷಭದಲ್ಲಿರುವ ಕೇತುವಿನ ದಶೆಯಲ್ಲಿ ಉತ್ತಮ ಮಣಿರತ್ನಗಳ ಲಾಭ, ಶತ್ರುನಿಗ್ರಹ, ರಾಜ್ಯಾಧಿಪತ್ಯ, ಧನಲಾಭ, ಪುಣ್ಯತೀರ್ಥ ಸ್ನಾನ, ದೊಡ್ಡವರ ಪೂಜೆ, ಯಜ್ಞ ಕರ್ಮಸಿದ್ಧಿ ಉಂಟಾಗುವುದು. ಮಿಥುನದಲ್ಲಿರುವ ಕೇತುವಿನ ದಶೆಯಲ್ಲಿ ಗೋವು ಕುದುರೆ ಆನೆಗಳ ಲಾಭ, ಗ್ರಾಮಾಧಿಪತ್ಯ, ನ್ಯಾಯಾಧಿಪತಿತ್ವ, ಮೇಧಾವಿ, ಕೀರ್ತಿ ಲಭಿಸುವುದು. ಕಟಕದಲ್ಲಿರುವ ಕೇತುವಿನ ದಶೆಯಲ್ಲಿ ಗಂಗಾಸ್ನಾನ, ಸ್ಥಾನನಾಶ, ಮಂತ್ರಸಿದ್ಧಿ, ಪಶುನಾಶ, ನೀರಿನಿಂದ ಹುಟ್ಟಿದ ಪದಾರ್ಥದ ಲಾಭ ಉಂಟಾಗುವುದು. ಕೇತು ಸಿಂಹ ರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜಸ್ನೇಹ, ಉತ್ತಮವಾದ ಭೂಷಣ ಲಾಭ, ವೇದಶಾಸ್ತ್ರವಿಚಾರದಿಂದ ಜ್ಞಾನ, ವೇಶ್ಯೆಯ ಸಹವಾಸ, ಗಾನಗೋಷ್ಠಿ ಉಂಟುಮಾಡುವನು. ಕನ್ಯಾದಲ್ಲಿರುವ ಕೇತುವಿನ ದಶೆಯಲ್ಲಿ ಪತ್ನಿಪುತ್ರ ಕ್ಷೇತ್ರಗಳ ನಾಶ. ಬೆಂಕಿ ಶಸ್ತ್ರಗಳಿಂದ ತೊಂದರೆ, ದಾನ ಧರ್ಮಹೀನತೆ, ಉಂಟಾಗುವುದು. ತುಲಾದಲ್ಲಿರುವ ಕೇತುವಿನ ದಶೆಯಲ್ಲಿ ಪತ್ನಿ ಪುತ್ರ ಮಿತ್ರರ ಸುಖ, ಬಂಧು ಜನಗಳ ಆಗಮನ, ಧನಲಾಭ ಉಂಟಾಗುವುದು. ವೃಶ್ಚಿಕದಲ್ಲಿರುವ ಕೇತುವಿನ ದಶೆಯಲ್ಲಿ ಮಾನಭಂಗ, ಸೋಲು, ಕ್ಷೇತ್ರಾರ್ಥಪಶು ನಾಶ, ಶತ್ರು ವೃದ್ಧಿ ಸಂಭವಿಸುವುದು. ಧನಸ್ಸಿನಲ್ಲಿರುವ ಕೇತುವಿನ ದಶೆಯಲ್ಲಿ ರಾಜನ ಸ್ನೇಹ, ವೇದಶಾಸ್ತ್ರದಲ್ಲಿ ಆಸಕ್ತಿ, ಕ್ಷೇತ್ರ ವೃದ್ಧಿ, ಚಿನ್ನ ಮಣಿಗಳ ಲಾಭ, ಪತ್ನೀ ಸುಖ ಲಭ್ಯ. ಮಕರದಲ್ಲಿರುವ ಕೇತುವಿನ ದಶಾಕಾಲದಲ್ಲಿ ಪತ್ನೀಭಾದೆ, ಅಧಿಕಾರ ನಾಶ, ಋಣದ್ರವ್ಯವೃದ್ಧಿ, ವಿಧವೆಯೊಡನೆ ಜಗಳ, ಶಸ್ತ್ರದಿಂದ ಆಘಾತ, ಪುತ್ರನಾಶ, ದಶೆಯ ಕೊನೆಯಲ್ಲಿ ಕಷ್ಟ ಫಲ ಉಂಟಾಗುವುದು. ಕುಂಭದಲ್ಲಿರುವ ಕೇತುವಿನ ದಶೆಯಲ್ಲಿ ವಿಷಶಸ್ತ್ರಗಳ ಭಯ, ಸಮಾನ ಬಂಧುಗಳಲ್ಲಿ ಜಗಳ, ಅತೀವ ಭಯ ಉಂಟಾಗುವುದು. ಕೇತು ಮೀನರಾಶಿಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ರಾಜ ಹಾಗೂ ಸ್ವಜನರಲ್ಲಿ ಪೂಜ್ಯತೆ, ಕೀರ್ತಿ, ಉತ್ತಮಮಣಿ ವಸ್ತ್ರ ಧಾನ್ಯ ಪಶುಗಳ ಲಾಭ, ಕೀರ್ತಿ,

ವಿದ್ಯಾವೃದ್ಧಿ, ಆನೆ ಕುದುರೆ ಆರೋಹಣ ಉಂಟುಮಾಡುತ್ತದೆ.

ಲಗ್ನದಲ್ಲಿರುವ ಕೇತುವಿನ ದಶೆಯಲ್ಲಿ ಕಷ್ಟ, ಮಾನಭಂಗ, ಕ್ರಿಮಿ ಗಳಿಂದಾದ ವ್ರಣದ ಭಾದೆ, ರೋಗ, ಕಾಂತಿಹೀನತೆ, ಮನಸ್ಸಿಗೆ ವ್ಯಾಕುಲ ಉಂಟಾಗುವುದು. ಎರಡರಲ್ಲಿರುವ ಕೇತುವಿನ ದಶೆಯಲ್ಲಿ ಧನಹಾನಿ, ಬಂಧು ವಿರೋಧ, ಕಣ್ಣಿನ ಭಾಧೆ, ಸ್ಥಾನಚಲನ, ಕೆಟ್ಟ ಅನ್ನವನ್ನು ಊಟ ಮಾಡು ವುದು, ಕಷ್ಟ. ಕುಟುಂಬ ಬಾಧೆ ಸಂಭವಿಸುವುದು. ಕೇತು ಮೂರನೇ ಮನೆ ಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಗಾನವಿದ್ಯೆಯಲ್ಲಿ ಕೌಶಲ್ಯ, ಯುದ್ಧದಲ್ಲಿ ಶತ್ರು ನಾಶ, ಧೀರತ್ವ, ಉತ್ತಮ ರತ್ನ ಭೂಷಣ ವಸ್ತ್ರಲಾಭ ಉಂಟುಮಾಡುತ್ತಾನೆ. ನಾಲ್ಕರಲ್ಲಿರುವ ಕೇತುವಿನ ದಶೆಯಲ್ಲಿ ತಾಯಿಗೆ ಕಷ್ಟ. ಬಂಧುವಿರೋಧ, ಕಳ್ಳರ ಭಯ, ಕ್ಷೇತ್ರ ನಾಶ, ಜಿಂಕಿಯಿಂದ ಭಯ ಉಂಟಾಗುವುದು. ಐದರಲ್ಲಿ ರುವ ಕೇತುವಿನ ದಶೆಯಲ್ಲಿ ಪತ್ನಿ ಪುತ್ರ ಸೋದರ ತಂದೆಯ ನಾಶ, ಕಷ್ಟ, ಬುದ್ಧಿ ಭ್ರಮಣೆ, ಕಾಲವಿೂರಿ ಊಟ ಮಾಡುವುದು, ಕುಲಾಚಾರ ಬಿಡು ವುದು, ಕೆಟ್ಟ ಜನರಲ್ಲಿ ಸೇರುವುದು ಸಂಭವಿಸುತ್ತದೆ. ಆರರಲ್ಲಿರುವ ಕೇತುವಿನ ದಶೆಯಲ್ಲಿ ಪತ್ನಿ ಪುತ್ರರಿಗೆ ಅತ್ಯಂತ ಸುಖ, ಬಂಧುಗಳಲ್ಲಿ ಮದುವೆ, ದೊಡ್ಡ ವರಿಗೆ ಪೂಜೆ, ಧನಲಾಭ, ರಾಜನಿಂದ ಸಂತೋಷ, ಶತ್ರುನಿಗ್ರಹ, ಕೀರ್ತಿಲಾಭ ಸಂಭವಿಸುವುದು. ಕೇತು ಏಳನೇ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ಪತ್ನಿ ಪುತ್ರರ ನಾಶ, ಬಂಧುದ್ವೇಷ, ಐಶ್ವರ್ಯ ಹಾನಿ. ಮನೋವ್ಯಥೆ ಉಂಟು ಮಾಡುವನು. ಎಂಟರಲ್ಲಿರುವ ಕೇತುವಿನ ದಶೆಯಲ್ಲಿ ಧನಕ್ಷಯ, ಬುದ್ಧಿ ಭ್ರಮಣೆ, ಗ್ರಹಣೀ ರೋಗ, ಸಮಾನ ಜನ ನಷ್ಟ, ಅತೀವ ಭಯ ಹೊಂದು ವನು. 9ರಲ್ಲಿರುವ ಕೇತುವಿನ ದಶೆಯಲ್ಲಿ ಸುಖ, ತಂದೆ ಗುರುವಿನ ಪೂಜೆ, ದಾನಧರ್ಮಾದಿಗಳ ಹೆಚ್ಚಳ, ಧನಸಮೃದ್ಧಿ. ಕ್ಷೇತ್ರ ಧಾನ್ಯ ವೃದ್ಧಿ, ಶ್ರೇಷ್ಠ ಮಣಿ ಲಾಭ, ವಾಗ್ವಿಲಾಸ ಉಂಟಾಗುವುದು. ಹತ್ತನೇ ಮನೆಯಲ್ಲಿರುವ ಕೇತುವಿನ ದಶೆಯಲ್ಲಿ ಕೀರ್ತಿವೃದ್ಧಿ, ರಾಜಾಧಿಪತ್ಯ, ಛತ್ರ ಚಾಮರಗಳು ವೈಭವ ಉಂಟಾಗುತ್ತದೆ. ಕೇತು ಹನ್ನೊಂದನೆಯ ಮನೆಯಲ್ಲಿದ್ದರೆ ತನ್ನ ದಶಾಕಾಲದಲ್ಲಿ ವಾಹನ ಸುಖ, ಧನಲಾಭ, ಶುಭ, ಜಯ, ಪುತ್ರವೃದ್ಧಿ, ಸುಖ, ಶತ್ರುನಾಶ ಉಂಟುಮಾಡುವನು. ಹನ್ನೆರಡರಲ್ಲಿರುವ ಕೇತುವಿನ ದಶಾಕಾಲದಲ್ಲಿ ಕಷ್ಟ, ರೋಗ, ತನ್ನ ಮತ್ತು ಸಮಾನಜನರ ನಾಶ, ಜಯ,

ದೇಶಾಂತರ ಸಂಚಾರ ಲಭಿಸುವುದು.

ಕೇಂದ್ರದಲ್ಲಿರುವ ಕೇತುವಿನ ದಶೆಯಲ್ಲಿ ರಾಜಪೂಜ್ಯತೆ, ವಸ್ತ್ರ–ಚಿನ್ನಾಭರಣಗಳ–ರತ್ನಗಳ ಲಾಭ, ಪತ್ನಿ ಪುತ್ರರ ಸುಖ, ಉತ್ತಮವಸ್ತು ಲಾಭ ಸುಖ, ಇಷ್ಟಾರ್ಥಸಿದ್ಧಿ, ಸಂಭವಿಸುವುದು. ತ್ರಿಕೋಣದಲ್ಲಿರುವ ಕೇತುವಿನ ದಶೆಯಲ್ಲಿ ಪುತ್ರವೃದ್ಧಿ, ಶುಭಫಲ, ಪುಣ್ಯ, ತೀರ್ಥದಲ್ಲಿ ಪ್ರಾಪ್ತಿ, ಕೀರ್ತಿವೃದ್ಧಿ ಉಂಟಾಗುವುದು. ದುಸ್ಥಾನಗಳಲ್ಲಿರುವ ಕೇತುವಿನ ದಶೆಯಲ್ಲಿ ಅಭಿಮಾನ ಭಂಗ, ಶತ್ರುವೃದ್ಧಿ, ಕ್ಷೇತ್ರಾರ್ಥನಾಶ, ಯತ್ನಕಾರ್ಯದಲ್ಲಿ ಭಂಗ, ಮನೋವಿಕಾರ ಉಂಟಾಗುತ್ತದೆ.

ಗೋಚಾರ

ಗ್ರಹಗಳು ಒಂದು ರಾಶಿಯಿಂದ ಮತ್ತೊಂದಕ್ಕೆ ಸಂಚರಿಸುತ್ತಿರುತ್ತವೆ. ಹೀಗೆ ಸಂಚರಿಸುವಾಗ ಪ್ರತಿಯೊಬ್ಬ ಜಾತಕನಿಗೂ ಸಂದರ್ಭಾನುಸಾರ ಒಳ್ಳೆಯ ಅಥವಾ ಕೆಟ್ಟ ಫಲಗಳು ಉಂಟಾಗುತ್ತವೆ. ಇದನ್ನು ಗೋಚಾರಫಲ ಎಂದರು. ಚಂದ್ರನಿರುವ ರಾಶಿಯಿಂದ ಇದರ ಲೆಕ್ಕಾಚಾರ. ಲಗ್ನದಿಂದಲೂ ನೋಡ ಬಹುದು ಎನ್ನುವ ಮತವೊಂದಿದ್ದರೂ ಹೆಚ್ಚು ಪ್ರಚಲಿತವಾಗಿರುವುದು ಚಂದ್ರ ನಿಂದ ನೋಡುವುದು.

ಗೋಚಾರಫಲ ಹೇಳುವಾಗ ಗ್ರಹದ ಸ್ಥಿತಿ, ಆ ಗ್ರಹಕ್ಕೆ ಬೇರೆ ಯಾವ ಗ್ರಹದ ದೃಷ್ಟಿ ಬೀಳುತ್ತದೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗು ತ್ತದೆ. ಉಚ್ಚರಾಶಿಗೆ ಬಂದಿರತಕ್ಕ ಗ್ರಹ ಒಳ್ಳೆಯ ಫಲ ಕೊಡುವಂತೆ ನೀಚರಾಶಿಗೆ, ಶತ್ರುಕ್ಷೇತ್ರಕ್ಕೆ ಕಾಲಿರಿಸುವ ಗ್ರಹ ಅಶುಭವನ್ನೇ ಉಂಟು ಮಾಡುವುದು. ಮೊದಲೇ ಅಶುಭದಾಯಕವಾಗಿರುವ ಗ್ರಹಕ್ಕೆ ಶನಿ, ಕುಜರ ದೃಷ್ಟಿಯೂ ಬಿದ್ದರೆ ಮತ್ತೂ ಕೇಡುಂಟು ಮಾಡುವುವು. ಗುರುದೃಷ್ಟಿ ಯಾದರೆ ಅಶುಭಫಲ ಕೊಂಚ ಕಡಿಮೆಯಾಗುತ್ತದೆ.

ಗ್ರಹಗಳಿಗೆ ಉಚ್ಚ, ನೀಚ, ಸ್ವಕ್ಷೇತ್ರ, ಮೂಲತ್ರಿಕೋಣ ರಾಶಿಗಳು.

ಗ್ರಹ	ಉಚ್ಚರಾಶಿ	ನೀಚರಾಶಿ	ಸ್ವಕ್ಷೇತ್ರ	ಮೂಲ ತ್ರಿಕೋಣ
ರವಿ	ಮೇಷ	ತುಲಾ	ಸಿಂಹ	ಸಿಂಹ
ಚಂದ್ರ	ವೃಷಭ	ವೃಶ್ಚಿಕ	ಕಟಕ	ವೃಷಭ
ಕುಜ	ಮಕರ	ಕಟಕ	ಮೇಷ, ವೃಶ್ಚಿಕ	ಮೇಷ
ಬುಧ	ಕನ್ಯಾ	ಮೀನ	ಮಿಥುನ, ಕನ್ಯಾ	ಕನ್ಯಾ

1	2	3	4	5
ಗುರು	ಕಟಕ	ಮಕರ	ಧನುಸ್ಸು ಮೀನ	ಧನಸ್ಸು
ಶುಕ್ರ	ಮೀನ	ಕನ್ಯಾ	ವೃಷಭ, ತುಲಾ	ತುಲಾ
ಶನಿ	ತುಲಾ	ಮೇಷ	ಮಕರ, ಕುಂಭ	ಕುಂಭ

ಗೋಚಾರದಲ್ಲಿ ಬಂದಾಗ ಎಲ್ಲಾ ಗ್ರಹಗಳೂ ಆಯಾ ರಾಶಿಯಲ್ಲಿ ತಾವಿರುವಷ್ಟು ಕಾಲವೂ ಫಲ ಕೊಡುತ್ತಾ ಇರುವುದಿಲ್ಲ. "ದಿನಕರ ರುಧಿರೌ ಪ್ರವೇಶಕಾಲೇ। ಗುರು ಭೃಗುಜೌ ಭವನಸ್ಯ ಮಧ್ಯಯಾತೌ। ರವಿಸುತ ಶಶಿನೌ ವಿನಿರ್ಗಮಸೌ । ಶಶಿತನಯ ಫಲದಸ್ತು ಸಾರ್ವಕಾಲಂ॥" ಎಂದರೆ ರವಿ, ಕುಜರು ರಾಶಿಗೆ ಪ್ರವೇಶಿಸಿದ ಮೊದಲಲ್ಲಿ, ಗುರು–ಶುಕ್ರರು ಮಧ್ಯಕಾಲದಲ್ಲಿ, ಶನಿ-ಚಂದ್ರರು ಅಂತ್ಯಭಾಗದಲ್ಲಿಯೂ ಬುಧ ಸರ್ವಕಾಲದಲ್ಲಿಯೂ ಫಲ ಕೊಡುತ್ತಾರೆ ಎಂದರ್ಥ. ಇದಕ್ಕಿಂತಲೂ ಸೂಕ್ಷ್ಮರೀತಿಯಲ್ಲಿ ಫಲ ತಿಳಿಯಬೇಕಾದರೆ ಈ ಪಟ್ಟಿಯನ್ನು ನೋಡಬಹುದು.

ಗ್ರಹ	ವಿಶೇಷ ಫಲಗಳಕಾಲ	ಸಾಧಾರಣ ಫಲಗಳ ಕಾಲ
ರವಿ	ಪ್ರಥಮದಲ್ಲಿ ೫ ದಿನಗಳು	ಒಂದು ತಿಂಗಳು
ಚಂದ್ರ	ಅಂತ್ಯದಲ್ಲಿ ೩ ಘಳಿಗೆಗಳು	ಎರಡೂಕಾಲು ದಿವಸಗಳು
ಕುಜ	ಪ್ರಥಮದಲ್ಲಿ ೮ ದಿನಗಳು	ಒಂದೂವರೆ ತಿಂಗಳು
ಬುಧ	ಸರ್ವದಾ ಫಲವು	ಒಂದು ತಿಂಗಳು
ಗುರು	ಮಧ್ಯದಲ್ಲಿ ೨ ತಿಂಗಳು	ಹನ್ನೆರಡು ತಿಂಗಳು

1	2	3
ಶುಕ್ರ	ಮಧ್ಯದಲ್ಲಿ ೭ ದಿನಗಳು	ಒಂದು ತಿಂಗಳು
ಶನಿ	ಅಂತ್ಯದಲ್ಲಿ ಆರು ತಿಂಗಳು	ಮೂವತ್ತು ತಿಂಗಳು
ರಾಹು ಕೇತು	ಅಂತ್ಯದಲ್ಲಿ ೩ ತಿಂಗಳು	ಹದಿನೆಂಟು ತಿಂಗಳು

ಜನ್ಮ ನಕ್ಷತ್ರವೇ ಸರಿಯಾಗಿ ತಿಳಿಯದೆ ಇರುವಂತಹ ಸಂದರ್ಭಗಳೂ ಉಂಟು. ಕರಾರುವಾಕ್ಕಾಗಿ ಜನನಕಾಲ ತಿಳಿಯದೆ ಇರುವುದು, ತಾರೀಖನ್ನು ಮರೆತುಬಿಡುವುದು, ಶಿಶು ಜನಿಸಿದ ಮೊದಲ ದಿನದಲ್ಲಿಯೇ ಜಾತಕ ಬರೆಸಿಡದೆ ಹೋಗುವುದು—ಹೀಗೆ ಕಾರಣಗಳು ಹಲವಾರು. ಅಂತಹವರು ಭವಿಷ್ಯದ ಫಲ ತಿಳಿದುಕೊಳ್ಳಬೇಕಾದರೆ ನಾಮನಕ್ಷತ್ರದಿಂದ ಎಂದರೆ ಹೆಸರಿನ ಮೊದಲ ಅಕ್ಷರಕ್ಕೆ ಉಕ್ತವಾಗಿರುವ ನಕ್ಷತ್ರ ಪ್ರಕಾರ ಫಲಗಳನ್ನು ಅರಿಯಲು ಅವಕಾಶವಿದೆ.

ನಕ್ಷತ್ರ	೧ ಪಾದ	೨ ಪಾದ	೩ ಪಾದ	೪ ಪಾದ
ಅಶ್ವಿನಿ	ಚು	ಚೆ	ಚೋ	ಲ
ಭರಣಿ	ಲಿ	ಲು	ಲೆ	ಲೋ
ಕೃತ್ತಿಕಾ	ಆ	ಇ	ಉ	ಏ
ರೋಹಿಣಿ	ಒ	ವ	ವಿ	ವು
ಮೃಗಶಿರ	ವೆ	ವೊ	ಕಾ	ಕಿ
ಆರಿದ್ರ	ಕು	ಘ	ಙ	ಛ
ಪುನರ್ವಸು	ಕೆ	ಕೊ	ಹ	ಹಿ
ಪುಷ್ಯ	ಹು	ಹೆ	ಹೊ	ಡ
ಆಶ್ಲೇಷ	ಡಿ	ಡು	ಡೆ	ಡೋ
ಮಖ	ಮ	ಮಿ	ಮು	ಮೆ
ಪುಬ್ಬ	ಮೊ	ಟ	ಟ	ಟು
ಉತ್ತರ	ಟಿ	ಟೋ	ಪೆ	ಪಿ
ಹಸ್ತ	ಪು	ಷ	ಣ	ಠ
ಚಿತ್ತ	ಪೆ	ಪೊ	ರ	ರಿ

ಸ್ವಾತಿ	ರು	ರೆ	ರೊ	ತ
ವಿಶಾಖ	ತಿ	ತು	ತೆ	ತೊ
ಅನೂರಾಧ	ನ	ನಿ	ನು	ನೆ
ಜ್ಯೇಷ್ಠ	ನೂ	ಯ	ಯಿ	ಯು
ಮೂಲ	ಯೆ	ಯೋ	ಬ	ಬಿ
ಪೂರ್ವಾಷಾಢ	ಬು	ಧ	ಭ	ಧ
ಉ.ಷಾಢ	ಬೆ	ಭೋ	ಜ	ಜಿ
ಅಭಿಜಿತ್	ಜು	ಜೆ	ಜೊ	ಶ
ಶ್ರವಣ	ಶಿ	ಶು	ಶೆ	ಶೋ
ಧನಿಷ್ಠ	ಗ	ಗಿ	ಗು	ಗೆ
ಶತಭಿಷ	ಗೊ	ಸ	ಸಿ	ಸು
ಪೂರ್ವಾಭಾದ್ರ	ಸೆ	ಸೋ	ದ	ದಿ
ಉ.ಭಾದ್ರ	ದು	ಖ	ರ್ಖು	ಥ
ರೇವತಿ	ದೆ	ದೋ	ಚ	ಚಿ

ಉದಾಹರಣೆ ಮಮತಾ ಎಂಬ ಹೆಸರಿದ ರೆ ಮುಖ ನಕ್ಷತ್ರದ 1ನೇ ಪಾದ ಆಯಿತು. ಮುಖ ನಕ್ಷತ್ರದ, ಸಿಂಹರಾಶಿಗೆ ಹೇಳಿರುವ ಫಲವನ್ನು ಇವರು ನೋಡಿ ಕೊಳ್ಳಬೇಕು. ರಮೇಶ ಚಿತ್ತ ನಕ್ಷತ್ರ 3ನೆಯ ಪಾದ. ಚಿತ್ತ ನಕ್ಷತ್ರ, ತುಲಾ ರಾಶಿಯ ಫಲಗಳನ್ನು ಇವರು ಗಣನೆಗೆ ತೆಗೆದುಕೊಳ್ಳಬೇಕು.

ರವಿ

ಚಂದ್ರನಿರುವ ರಾಶಿಯಿಂದ ರವಿ 3–6–10–11ನೇ ಸ್ಥಾನದಲ್ಲಿದ್ದರೆ ಶುಭವನ್ನುಂಟುಮಾಡುತ್ತಾನೆ. ಆದರೆ 9–12–4–5ನೆಯ ಸ್ಥಾನಗಳಲ್ಲಿ ಶತ್ರು ಗ್ರಹಗಳು ಇರಬಾರದು. ಇವನ್ನು ವೇಧಸ್ಥಾನಗಳೆಂದು ಹೇಳುತ್ತಾರೆ. ಶನಿ ಮಾತ್ರ ವೇಧೆ ಉಂಟು ಮಾಡುವುದಿಲ್ಲ. ಮಿಕ್ಕ ಎಂಟು ರಾಶಿಗಳಿಗೆ ರವಿ ಬಂದಾಗ ಅಶುಭ ಫಲ ಹೇಳಬೇಕು.

ಚಂದ್ರ ಇರುವ ರಾಶಿಗೆ ರವಿ ಬಂದಾಗ ಸ್ಥಾನ ಚಲನೆ, ಕಾಯಿಲೆ ಹಾಗೂ ಸಂಪತ್ತು ಕಡಿಮೆಯಾಗುವಿಕೆ ಕಂಡುಬರುವುದು. 2ನೇ ರಾಶಿಗೆ ಇಳಿಮುಖ

ವಾದ ಅದಾಯ, ಖರ್ಚು ಏರಿಕೆ, ಮೋಸ, ಕಣ್ಣು ಅಥವಾ ತಲೆ ಕಾಯಿಲೆ ಉಂಟಾಗುವುದು. 3ನೇ ರಾಶಿಯ ರವಿ ಆರೋಗ್ಯ, ಏರಿದ ಆದಾಯ ಕೊಡುವನು. 4ನೇ ರಾಶಿಯಲ್ಲಿ ಅನಾರೋಗ್ಯ, ಕೈ ಹಾಕಿದ ಕೆಲಸಗಳಲ್ಲಿ ನಿಧಾನ, ಸಂಸಾರದಲ್ಲಿ ಅಸಂತೋಷ ಉಂಟಾಗುವುದು. 5ನೇ ರಾಶಿಗೆ ಬಂದರೆ ಶತ್ರುವಿನಿಂದ ಭಯ, ಅನಾರೋಗ್ಯ, ಆತಂಕ ಕಾಡುವುದು. 6ನೇ ಮನೆಗೆ ಬಂದಾಗ ಕೈ ಹಿಡಿದ ಕಾರ್ಯಗಳಲ್ಲಿ ಜಯ, ಆದಾಯದಲ್ಲಿ ಹೆಚ್ಚಳ, ಉತ್ತಮ ಆರೋಗ್ಯ ಲಭ್ಯ. ಕಾಯಿಲೆ, ಪ್ರಯಾಣ, ಹಣದ ಅಡಚಣೆ 7ನೇ ಮನೆಗೆ ರವಿ ಬಂದಾಗ ಉಂಟಾಗುವುದು. 8ನೇ ರಾಶಿಗೆ ಬಂದಲ್ಲಿ ಅಪಘಾತ, ಜಗಳ, ದುಃಖ ಹೊಟ್ಟೆಗೆ ಸಂಬಂಧಿಸಿದ ಕಾಯಿಲೆಗಳು ತೊಂದರೆ ಕೊಡುವುದು. 9ನೆಯ ಮನೆಗೆ ಬಂದ ರವಿ ಅಪಾಯ, ಅನಾರೋಗ್ಯ ಕೊಡುವನು, 10ನೆಯ ರಾಶಿಗೆ ರವಿ ಬಂದಾಗ ಜಯ, ಪ್ರಮುಖ ವ್ಯಕ್ತಿಗಳ ಸ್ನೇಹ ಲಭ್ಯ. 11ನೇ ಮನೆಗೆ ರವಿ ಬಂಡಲ್ಲಿ ವ್ಯಾಪಾರದಲ್ಲಿ ಲಾಭ ಹಾಗೂ ಬಡಾವಣೆ, ಗೌರವ, ಉತ್ತಮ ಆರೋಗ್ಯ ಇರುವುದು. 12ನೆಯ ಮನೆಗೆ ಬಂದ ರವಿ ಅತಿ ಉಷ್ಣ, ಅನವಶ್ಯಕ ತಿರುಗಾಟ ಉಂಟುಮಾಡುವನು.

ಚಂದ್ರ

ಚಂದ್ರ ತಾನಿರುವ ರಾಶಿಯಿಂದ 1–3–6–7–10–11 ರಲ್ಲಿದ್ದರೆ ಒಳ್ಳೆಯ ಫಲ ಕೊಡುತ್ತಾನೆ. 5, 9, 12, 2, 4, 8 ವೇಧಾಸ್ಥಾನಗಳು. ಇಲ್ಲಿ ಶತ್ರು ಗ್ರಹಗಳಿದ್ದರೆ ಶುಭಫಲದಲ್ಲಿ ಕೊರತೆಯುಂಟಾಗುತ್ತದೆ. ಇದಕ್ಕೆ ಅಪವಾದ ಬುಧ. ಬುಧ ಚಂದ್ರನಿಗೆ ಶತ್ರುವಾದರೂ ವೇಧೆಯುಂಟುಮಾಡುವುದಿಲ್ಲ. ಉಳಿದ ರಾಶಿಗಳಲ್ಲಿ ಕೆಟ್ಟ ಫಲ ಕೊಡುವನು.

ಚಂದ್ರ ಒಂದೊಂದು ರಾಶಿಯಲ್ಲೂ ಇರುವ ಅವಧಿಯೇ ಅಲ್ಪ. ಆ ಕಾಲದಲ್ಲಿ ಜೊತೆಯಲ್ಲಿರುವ ಗ್ರಹದ ಒಳ್ಳೆಯ ಅಥವಾ ಕೆಟ್ಟ ಫಲವನ್ನೂ ಸೇರಿಸಿಕೊಂಡು ಫಲ ಕೊಡುವನು.

ಚಂದ್ರ 1ನೆಯ ಮನೆಗೆ ಬಂದಾಗ ಒಳ್ಳೆಯ ಆಹಾರ ಮತ್ತು ನಿದ್ರೆ. ಹೊಸ ಬಟ್ಟೆ, ಒಡವೆಗಳ ಲಾಭ ಉಂಟಾಗುವುದು. 2ನೇ ಮನೆಯಾದರೆ ಅಡಚಣೆ, ನಿಂದೆ, ಏರುವ ವೆಚ್ಚ ಕಂಡುಬರುತ್ತದೆ. ಜಯ, ಲಾಭ, ಉತ್ತಮ

ಆರೋಗ್ಯ ಚಂದ್ರ 3ನೇ ಮನೆಯಲ್ಲಿರುವಾಗ ಲಭಿಸುತ್ತದೆ. 4ನೆಯ ಮನೆಯಲ್ಲಿ ಚಂದ್ರ ಸಂಚರಿಸುವಾಗ ಆತಂಕ. ಅನಾರೋಗ್ಯ, ದುಃಖ, ಮನಸ್ಸು ಕುಗ್ಗುವಿಕೆ ಉಂಟಾಗುವುದು. 6ನೇ ಮನೆಯಲ್ಲಿ ಚಂದ್ರನಿದ್ದರೆ ಸಂಸಾರದಲ್ಲಿ ಸುಖ, ಧನಲಾಭ, ಉತ್ತಮ ಆರೋಗ್ಯ ಲಭಿಸುವುದು. 7ನೇ ಮನೆಗೆ ಚಂದ್ರ ಬಂದರೆ ಲಾಭ, ಸುಖಾನುಭವ ಉಂಟುಮಾಡುವನು. 8ನೆಯ ಮನೆಗೆ ಚಂದ್ರ ಬಂದಾಗ ಅನಾರೋಗ್ಯ, ಜಗಳ, ನಿದ್ರಾನಾಶ, ಆತಂಕ, ಧನನಾಶ ಆಗುತ್ತದೆ. ಚಂದ್ರ 9ನೇ ಮನೆಗೆ ಬಂದಾಗ ಶತ್ರುಭಯ. 10ನೇ ಮನೆಯಲ್ಲಿ ಚಂದ್ರ ಸಂಚರಿಸುವಾಗ ಧನಲಾಭ, ಜಯಲಭ್ಯ. 11ನೆಯ ಮನೆಗೆ ಚಂದ್ರ ಬಂದಾಗ ನೆಂಟರ ಆಗಮನವಾಗುವುದು. 12ನೇ ಮನೆಗೆ ಬಂದ ಚಂದ್ರ ಹೇರಳ ಖರ್ಚು ಉಂಟುಮಾಡುವನು.

ಕುಜ

ಕುಜ ಚಂದ್ರನಿರುವ ರಾಶಿಯಲ್ಲಿ ಸಂಚರಿಸುವಾಗ ಪ್ರಯಾಣ, ಅತೀವ ಉಷ್ಣ, ಶತ್ರುಭಯ, ಮನೋವ್ಯಾಧಿ ಉಂಟಾಗುವುದು. 2ನೇ ಮನೆಗೆ ಬಂದಾಗ ಧನಿಯ ಅಸಂತೋಷ, ಜಗಳ, ಅಪಜಯ ಕಂಡುಬರುವುದು. 3ನೇ ಮನೆಗೆ ಬಂದಲ್ಲಿ ಜಯ, ಶ್ರೇಷ್ಠ ವ್ಯಕ್ತಿಗಳ ಸ್ನೇಹ ಲಭ್ಯ. 4ನೆಯ ಮನೆಗೆ ಕುಜ ಬಂದರೆ ದುಷ್ಟರ ಸಹವಾಸ, ಪೆಟ್ಟು ಉಂಟಾಗುತ್ತದೆ. ಕುಜ 5ನೇ ಮನೆಯಲ್ಲಿ ಸಂಚರಿಸುವಾಗ ಅನಾರೋಗ್ಯ, ಮಕ್ಕಳಿಗೆ ತೊಂದರೆ, ಶತ್ರುಭಯ, ದುಃಖ ಆಗುವುದು. 6ನೆಯ ಮನೆಗೆ ಕುಜ ಬಂದಾಗ ಜಯ, ಸ್ವರ್ಣಲಾಭ ಉಂಟಾಗುತ್ತದೆ. 7ನೆಯ ಮನೆಗೆ ಬಂದಲ್ಲಿ ಸಂಸಾರದಲ್ಲಿ ಕಲಹ, ಧನನಷ್ಟ, ಕಣ್ಣು ಅಥವಾ ಹೊಟ್ಟೆ ತೊಂದರೆ ಕಾಡುವುದು. 8ನೆಯ ಮನೆಗೆ ಬಂದರೆ ಪ್ರಯಾಣ, ಅಪಮಾನ, ದೇಹಕ್ಕೆ ಪೆಟ್ಟು ಆಗುವುದು, ಕುಜ 9ನೇ ಮನೆಯಲ್ಲಿ ಸಂಚರಿಸುವಾಗ ಕೈಹಾಕಿದಕೆಲಸಗಳಲ್ಲಿ ಹಿಂಜರಿತ, ಅನಾರೋಗ್ಯ. ಮೇಲಧಿಕಾರಿಯ ಕೋಪ ಲಭಿಸುವುದು. 10ನೇ ಮನೆಗೆ ಕುಜ ಬಂದರೆ ಲಾಭ, ಜಯ ಉಂಟಾಗುವುದು. 11ನೇ ಮನೆಗೆ ಬಂದಲ್ಲಿ ಒಳ್ಳೆಯ ಫಲಗಳು ನಡೆಯುವುವು. 12ನೇ ಮನೆಗೆ ಬಂದಾಗಕಣ್ಣಿನ ತೊಂದರೆ,ಜಗಳ, ಅತಿ ಹೆಚ್ಚು ಖರ್ಚು, ಅಪ್ರಕೃತ ನಿಂದೆಗಳನ್ನು ಅನುಭವಿಸಬೇಕಾಗುವುದು.

3–6–11ನೇ ರಾಶಿಗಳಲ್ಲಿ ಕುಜ ಶುಭಕರ ವೇಧೆರಾಶಿಗಳು 12, 9, 5

ಬುಧ

ಚಂದ್ರನಿರುವ ರಾಶಿಯಿಂದ 2, 4, 6, 8, 10, 11ನೆಯ ರಾಶಿಗಳಿಗೆ ಬಂದಾಗ ಬುಧ ಶುಭಫಲಗಳನ್ನು ಕೊಡುತ್ತಾನೆ. ಆದರೆ ವೇಧಾಸ್ಥಾನಗಳಾದ 5, 3, 9, 1, 7, 12ರಲ್ಲಿ ಶತ್ರುಗ್ರಹಗಳಿರಬಾರದು. ಚಂದ್ರ ಇದಕ್ಕೆ ಅಪವಾದ. ಏಕೆಂದರೆ ಬುಧ ಚಂದ್ರನ ಮಗ. ಮಿಕ್ಕ ರಾಶಿಗಳಲ್ಲಿ ಬುಧ ಕೊಡುವುದು ಅಶುಭ ಫಲಗಳನ್ನೇ.

1ನೆಯ ಮನೆಗೆ ಬಂದಾಗ ಬುಧ ವಿದ್ಯೆಯಲ್ಲಿ ವಿಘ್ನ, ಬಂಧುಗಳ ಅಸಂತುಷ್ಟಿ ಮತ್ತು ಹಿಡಿತವಿಲ್ಲದ ಮಾತು ಉಂಟುಮಾಡುವನು. ಬುಧ 2ನೇ ಮನೆಯಲ್ಲಿ ಸಂಚರಿಸುವಾಗ ಧನಲಾಭ, ಶ್ರೇಷ್ಠವಾದ ಆಹಾರ, ಭಾಷಣದಿಂದ ಲಾಭ ಕೊಡುವನು. 3ನೇ ಮನೆಗೆ ಬಂದಲ್ಲಿ ಶತ್ರುಗಳಿಂದ ತೊಂದರೆ. ಮೇಲಧಿಕಾರಿಗಳಿಂದ ಕಿರುಕುಳ, ಶತ್ರುಭಯ ಪೀಡಿಸುವುದು. 4ನೆಯ ಮನೆಗೆ ಬಂದಾಗ ಲಾಭ, ಕುಟುಂಬ ಸುಖಗಳು ಲಭಿಸುವುವು. 5ನೇ ಮನೆಗೆ ಬಂದರೆ ಗೃಹಕಲಹ, ಮನೋವೈಕಲ್ಯ, ದುಃಖ ಉಂಟಾಗುವುವು. ಬುಧ 6ನೇ ಮನೆಯಲ್ಲಿ ಸಂಚರಿಸುವಾಗ ಜಯ, ಐಶ್ವರ್ಯ, ಮಾತಿನಿಂದ ಲಾಭ ದೊರಕುವುದು. 7ನೇ ಮನೆಗೆ ಬಂದಲ್ಲಿ ಅಶಕ್ತತೆ, ಪ್ರಿಯರಾದವರಿಂದ ಬೇರೆಯಾಗುವುದು, ಜಗಳ ಅನುಭವಿಸುವಂತಾಗುವುದು. 8ನೆಯ ಮನೆಗೆ ಬಂದಾಗ ಜಯ, ಸುಖ ಲಭಿಸುವುದು. 9ನೇ ಮನೆಗೆ ಬಂದರೆ ನೆಂಟರಲ್ಲಿ ಭಿನ್ನಾಭಿಪ್ರಾಯ, ಅನಾರೋಗ್ಯಗಳು ತೊಂದರೆ ಮಾಡುವುದು. 10ನೇ ಮನೆಯಲ್ಲಿ ಬುಧ ಸಂಚರಿಸುವಾಗ ಆರೋಗ್ಯ, ಆದಾಯದಲ್ಲಿ ಹೆಚ್ಚಳ ಲಭ್ಯ. 11ನೆಯ ಮನೆಗೆ ಬಂದಲ್ಲಿ ಲಾಭ. ಸಂಸಾರದಲ್ಲಿ ಸುಖ ಉಂಟು. 12ನೇ ಮನೆಗೆ ಬುಧ ಬಂದಾಗ ಅಪಮಾನ, ಶತ್ರುಗಳಲ್ಲಿ ಕಲಹ, ಕಾಯಿಲೆ ಉಂಟಾಗುವುವು.

ಗುರು

ಶುಭಗ್ರಹಗಳಲ್ಲಿ ಮುಖ್ಯನಾದವನು ಗುರು. ಗೋಚಾರದಲ್ಲಿ ಗುರು 2, 5, 7, 9, 11ನೇ ರಾಶಿಗಳಿಗೆ ಬಂದಾಗ ಗುರುಬಲ ಬಂದಿದೆ ಎನ್ನುತ್ತಾರೆ. ಗಂಡುಮಕ್ಕಳಿಗೆ ಉಪನಯನ ಮಾಡಬೇಕಾದರೆ ವಟುವಿಗೆ ಗುರುಬಲ ಇರಲೇಬೇಕು.

ಗುರು ಚಂದ್ರನಿರುವ ರಾಶಿಯಿಂದ 2-5-7-9-11ನೇ ರಾಶಿಗಳಲ್ಲಿದ್ದರೆ ಶುಭಪ್ರದನು. ಇವನಿಗೆ ವೇಧಾಸ್ಥಾನಗಳಾದ 12-4-3-10-8ನೇ ರಾಶಿಗಳಲ್ಲಿ ಶತ್ರುಗ್ರಹಗಳಿರಬಾರದು. ಉಳಿದ ರಾಶಿಗಳಲ್ಲಿ ಗುರು ಅಶುಭಕರ.

1ನೇ ಮನೆಯಲ್ಲಿ ಗುರು ಸಂಚರಿಸುವಾಗ ಧನನಾಶ, ಮನೋವ್ಯೆಕಲ್ಯ, ಕೆಲಸ ಕಳೆದುಕೊಳ್ಳುವುದು ಅಥವಾ ಬೇರೆ ಮನೆಗೆ ಹೋಗುವುದು ಸಂಭವಿಸುತ್ತದೆ. 2ನೇ ಮನೆಗೆ ಬಂದರೆ ಲಾಭ, ಸುಖವಾದ ಸಂಸಾರ ಜೀವನ ಲಭಿಸುವುದು. 3ನೆಯ ಮನೆಯಾವರೆ ಅಪಾಯ. 4ನೇ ಮನೆಗೆ ಬಂದಾಗ ಅಸಹಜ ಖರ್ಚುಗಳು, ಬಂಧುಗಳ ಮರಣ ಘಟಿಸುವುದು. 5ನೆಯ ಮನೆಗೆ ಬಂದಲ್ಲಿ ಗೌರವ, ಉದ್ಯೋಗದಲ್ಲಿ ಬಡ್ತಿ, ಐಶ್ವರ್ಯ ಹಾಗೂ ಒಡವೆಗಳ ಲಾಭ ಉಂಟಾಗುವುದು. ಗುರು 6ನೇ ಮನೆಯಲ್ಲಿ ಸಂಚರಿಸುವಾಗ ಧನನಷ್ಟ, ಉದ್ಯೋಗದಲ್ಲಿ ಬದಲಾವಣೆ, ಅನಾರೋಗ್ಯ ಲಭ್ಯ. 7ನೆಯ ಮನೆಗೆ ಬಂದರೆ ಕೈಹಿಡಿದ ಕೆಲಸಗಳಲ್ಲಿ ಜಯ, ಅನಾರೋಗ್ಯ ಉಂಟಾಗುವುದು. 8ನೇ ಮನೆಗೆ ಬಂದಾಗ ಪತಿ ಪುತ್ರರಿಗೆ ದೇಹಾಲಸ್ಯ, ಮನೆಯಲ್ಲಿ ದುರಂತ, ಕಾರಾಗೃಹವಾಸ, ಅಲಿತ ಸಂಭವಿಸುವುದು. 9ನೇ ಮನೆಗೆ ಬಂದಲ್ಲಿ ಸ್ನೇಹದಿಂದ ಲಾಭ, ಬಡ್ತಿ, ದಾನ ಶೀಲತೆ ಕಂಡುಬರುವುದು. ಗುರು 10ನೇ ಮನೆಯಲ್ಲಿ ಸಂಚರಿಸುವಾಗ ನಡೆಯುತ್ತಿರುವ ಕೆಲಸದಲ್ಲಿ ವಿಘ್ನ, ಧನನಾಶ, ಅಪಮಾನ ಉಂಟುಮಾಡುವನು. 11ನೇ ಮನೆಗೆ ಬಂದಾಗ ಉದ್ಯೋಗದಲ್ಲಿ ಮೇಲಿನ ದರ್ಜೆಗೆ ಏರಿಕೆ, ಲಾಭ ಆಗುವುದು. 12ನೆಯ ಮನೆಗೆ ಬಂದಲ್ಲಿ ಪತ್ನಿಗೆ ಪ್ರಯಾಣ, ಖರ್ಚು ಉಂಟಾಗುವುವು.

ಶುಕ್ರ

ಚಂದ್ರನಿರುವ ರಾಶಿಯಿಂದ 1, 2, 3, 4, 5, 8, 9, 11, 12ನೆಯ ರಾಶಿಗಳಲ್ಲಿ ಶುಕ್ರ ಉತ್ತಮ ಫಲಗಳನ್ನು ಕೊಡುತ್ತಾನೆ. ವೇಧಾಸ್ಥಾನಗಳು 8, 7, 10, 9, 5, 11, 6, 3. ಉಳಿದ ಸ್ಥಾನಗಳಲ್ಲಿ ಶುಕ್ರ ಅಶುಭನು.

ಶುಕ್ರ 1ನೇ ಮನೆಯಲ್ಲಿ ಸಂಚರಿಸುವಾಗ ಸುಭೋಜನ, ನಿದ್ದೆ, ಸುಖಾನುಭವಗಳು ಉಂಟಾಗುವುವು. 2ನೇ ಮನೆಯಲ್ಲಿರುವಾಗ ಸಾಂಸಾರಿಕ ಸುಖ, ಉತ್ಪತ್ತಿ ಹೆಚ್ಚುವಿಕೆ ಸಂಭವಿಸುವುದು. 3ನೇ ಮನೆಗೆ ಬಂದರೆ ಸ್ನೇಹಿತ

ರಿಂದ ಲಾಭ ಉಂಟಾಗುವುದು. 4ನೇ ಮನೆಗೆ ಬಂದಲ್ಲಿ ಬಂಧುಗಳಿಂದ ಮರ್ಯಾದೆ, ವಾಸದ ಮನೆಯನ್ನು ಅನುಕೂಲವಾಗಿ ಮಾರ್ಪಡಿಸಿಕೊಳ್ಳುವುದು ನಡೆಯುತ್ತದೆ. 5ನೆಯ ಮನೆಗೆ ಬಂದಾಗ ಪುತ್ರನು ಚೆನ್ನಾಗಿರುವನು, ತಂದೆ ತಾಯಿಗಳ ಸಂತೋಷ ಲಭ್ಯ. ಶುಕ್ರ 6ನೆಯ ಮನೆಯಲ್ಲಿ ಸಂಚರಿಸುವಾಗ ಪತ್ನಿಗೆ ಕಾಯಿಲೆ, ಅಪಮಾನ ಉಂಟಾಗುವುದು. 7ನೆಯ ಮನೆಗೆ ಬಂದರೆ ಮನೆಯಲ್ಲಿ ಶಾಂತಿ ಇರುವುದಿಲ್ಲ, ಹೆಂಗಸರೊಡನೆ ಜಗಳ ನಡೆಯುತ್ತಿರುತ್ತದೆ. 8ನೇ ಮನೆಗೆ ಬಂದಲ್ಲಿ ಐಶ್ವರ್ಯ ಲಾಭ, ಭೂ ಅಭಿವೃದ್ಧಿ, ವಿಷಯ ಸುಖಗಳು ಲಭಿಸುವುವು. 9ನೇ ಮನೆಗೆ ಬಂದಾಗ ದಾನಧರ್ಮಗಳು ನಡೆಸುವುದು, ಪ್ರಯಾಣಸಕ್ತಿ ಕಂಡುಬರುತ್ತದೆ. ಶುಕ್ರ 10ನೇ ಮನೆಯಲ್ಲಿ ಸಂಚರಿಸುವಾಗ ಕೈ ಹಿಡಿದ ಕೆಲಸಗಳಲ್ಲಿ ಅಪಜಯ, ಜಗಳ, ಅಪಮಾನ ಉಂಟಾಗುತ್ತದೆ. 11ನೇ ಮನೆಗೆ ಬಂದರೆ ಲಾಭ, ಸಂಚಾರ ಸುಖ ಲಭ್ಯ. 12ನೇ ಮನೆಯಲ್ಲಿರುವಾಗ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳುವ ಆಸೆಯಾಗುತ್ತದೆ.

ಶನಿ

ಪಾಪಗ್ರಹಗಳಲ್ಲಿ ಅದ್ವಿತೀಯನಾದವನು ಶನಿ. ಜನ ಏನೇ ತೊಂದರೆ ಬಂದರೂ ಶನಿಯನ್ನು ಹೊಣೆಮಾಡಿ ಮಾತಾಡುತ್ತಾರೆ. ಚಂದ್ರನಿರುವ ರಾಶಿಯಿಂದ 12–1–2ನೇ ಮನೆಗಳಲ್ಲಿ ಶನಿ ಸಂಚರಿಸುವ ಏಳೂವರೆ ವರ್ಷಗಳ ಅವಧಿಗೆ ಏಳರಾಟ ಶನಿ ಎಂದರು. ಈ ಕಾಲದಲ್ಲಿ ದೈಹಿಕ, ಆರ್ಥಿಕ, ಮಾನಸಿಕ ತೊಂದರೆಗಳು ಪೀಡಿಸುವುವು. ಚಂದ್ರನಿರುವ ರಾಶಿಯಿಂದ 5ನೇ ಮನೆಗೆ ಬಂದಾಗ ಪಂಚಮ ಶನಿ ಎಂತಲೂ, 8ನೇ ಮನೆಗೆ ಬಂದಾಗ ಅಷ್ಟಮ ಶನಿ ಎಂತಲೂ ಕರೆಯುತ್ತಾರೆ. ಇವೂ ಕ್ರೂರ ಕಾಲಗಳೇ.

ಶನಿ ಚಂದ್ರನಿಂದ 3–6–11ನೆಯ ಮನೆಗಳಲ್ಲಿದ್ದರೆ ಶುಭದಾಯಕ. ವೇಧಾಸ್ಥಾನಗಳು 12–9–5. ರವಿಯೊಬ್ಬ ಶತ್ರುವಾದರೂ ತಂದೆಯಾದುದರಿಂದ ಅಶುಭವುಂಟುಮಾಡುವುದಿಲ್ಲ. ಉಳಿದ ರಾಶಿಗಳಲ್ಲಿ ಶನಿ ಕೆಟ್ಟದ್ದನ್ನು ಮಾಡುವನು.

ಶನಿ 1ನೇ ಮನೆಗೆ ಬಂದಾಗ ಪತ್ನಿ, ಪುತ್ರ ಸಮೀಪ ಬಂಧುಗಳಿಗೆ

ದೇಹಾಲಸ್ಯ, ಅಸಮರ್ಪಕ ಆಹಾರ, ಶತ್ರು ಭೀತಿ, ವಿವಾದ ಉಂಟಾಗುವುದು. 2ನೆಯ ಮನೆಗೆ ಬಂದಲ್ಲಿ ಅನಾರೋಗ್ಯ, ದನಗಳ ನಾಶ, ವಿವಾದದಿಂದ ಜಗಳ, ಸಂಚಾರ ಕಂಡುಬರುವುದು. ಶನಿ 3ನೇ ಮನೆಯಲ್ಲಿ ಸಂಚರಿಸುವಾಗ ವಿಜಯ, ಲಾಭ, ಸಂತೋಷ ಸಮಾರಂಭಗಳು ನಡೆಯುವುವು, ಉತ್ತಮ ಗುಣಗಳಿಗೆ ಪುರಸ್ಕಾರ ದೊರೆಯುವುದು. 4ನೇ ಮನೆಗೆ ಬಂದರೆ ಅನಾರೋಗ್ಯ, ಬಂಧುಗಳಿಗಾಗಿ ದುಃಖ, ತಂದೆತಾಯಿಗೆ ದೇಹಾಲಸ್ಯ ಸಂಭವಿಸುವುದು. 5ನೇ ಮನೆಗೆ ಬಂದಾಗ ಧನನಾಶ, ಅಪ್ರಕೃತ ಅಪಾದನೆಗಳು, ಕಾಯಿಲೆ, ಜಗಳ ಉಂಟಾಗುವುದು. 6ನೆಯ ಮನೆಗೆ ಬಂದಲ್ಲಿ ಲಾಭ, ನಡೆಸುತ್ತಿರುವ ಕೆಲಸಗಳಲ್ಲಿ ಜಯ ಲಭಿಸುವುದು. ಶನಿ 7ನೇ ಮನೆಯಲ್ಲಿ ಸಂಚರಿಸುವಾಗ ಪ್ರಯಾಣ, ಖರ್ಚು, ಪ್ರೀತಿಪಾತ್ರರಿಂದ ಬೇರ್ಪಡುವುದು ಘಟಿಸುತ್ತದೆ. 8ನೇ ಮನೆಗೆ ಬಂದರೆ ಸಮೀಪ ಬಂಧುಗಳ ಸಾವು, ಸಾರ್ವಜನಿಕ ಅಸಮ್ಮತಿ, ಬಂಧನ ಸಂಭವಿಸುವುದು. 9ನೇ ಮನೆಗೆ ಬಂದಾಗ ಆದಾಯ ಇಳಿಮುಖವಾಗುವುದು. 10ನೆಯ ಮನೆಗೆ ಬಂದಲ್ಲಿ ಕಾಯಿಲೆ, ಅಪಮಾನ, ಸಂಚಾರ ಲಭಿಸುತ್ತದೆ. 11ನೇ ಮನೆಯಲ್ಲಿರುವಾಗ ಧನ ಮತ್ತು ಸ್ತ್ರೀ ಲಾಭ, ಬಹುಮಾನ ದೊರಕುವುದು. 12ನೆಯ ಮನೆಗೆ ಬಂದಲ್ಲಿ ಅಪಘಾತ, ದುಃಖ ಖರ್ಚುಗಳು ಒದಗುವುವು.

ರಾಹು–ಕೇತು

ರಾಹು, ಕೇತುಗಳು ಪಾಪಗ್ರಹಗಳು. ಗೋಚಾರದಲ್ಲಿ ಇವರು ಕುಜ, ಶನಿಗಳಂತೆ ಫಲಕೊಡುತ್ತಾರೆಂಬ ಮತವೂ ಇದೆ. ಇವರೇ ಬೇರೆಯಾಗಿ ಫಲ ಕೊಡುವರೆಂದೂ ಹೇಳುತ್ತಾರೆ. ಎರಡನೆಯ ಅಭಿಪ್ರಾಯ ಹೆಚ್ಚು ಮಾನ್ಯವಾಗಿದೆ.

ರಾಹು–ಕೇತುಗಳಿಗೆ ಬುಧ, ಶುಕ್ರ, ಶನಿ ಮಿತ್ರರು. ಗುರು ಸಮನು. ರವಿ, ಚಂದ್ರ, ಕುಜರು ಶತ್ರುಗಳು. ಈ ಗ್ರಹಗಳಿಗೆ ಮೀಸಲಾದ 8–9ನೇ ಅಧ್ಯಾಯಗಳಲ್ಲಿ ಈ ವಿಚಾರವನ್ನು ಹೇಳಲಿಲ್ಲವಾಗಿ ಇಲ್ಲಿ ಪ್ರಸ್ತಾಪಿಸ ಬೇಕಾಯಿತು.

ಚಂದ್ರನಿರುವ ರಾಶಿಯಲ್ಲಿ ಸಂಚರಿಸುವಾಗ ರಾಹು ಕೇತುಗಳು ಅನಾರೋಗ್ಯ, ಧನಹಾನಿ, ಮಾನಸಿಕ ಯಾತನೆ, ಭಯ ಉಂಟುಮಾಡುವರು.

2ನೆಯ ಮನೆಗೆ ಬಂದಾಗ ಜಗಳ, 3ನೇ ಮನೆಗೆ ಬಂದರೆ ಉತ್ಕರ್ಷ, ಸೌಭಾಗ್ಯ; ಧನ ಸುಖ ಒದಗಿ ಬರುವುದು. 4ನೇ ಮನೆಗೆ ಬಂದಲ್ಲಿ ತಂದೆ ತಾಯಿಗಳಿಗೆ ವಿರೋಧವಾಗಿ ಕೆಲಸ ಮಾಡುವುದು, ಮಾನನಷ್ಟ ಜರುಗುವುದು. 5ನೇ ಮನೆಗೆ ಬರುವಲ್ಲಿ ಧನಹಾನಿ, ಬುದ್ಧಿ ವೈಪರೀತ್ಯ ಕಾಣಬರುವುದು. ರಾಹು ಕೇತುಗಳು 6ನೇ ಮನೆಯಲ್ಲಿ ಸಂಚರಿಸುವಾಗ ಅತೀವ ಸುಖ ಲಭ್ಯ. 7ನೆಯ ಮನೆಗೆ ಬಂದಾಗ ಅತೀವ ದುಃಖ, ಸ್ತ್ರೀನಾಶ, ರಾಜಭೀತಿ ಉಂಟಾಗುವುವು. 8ನೇ ಮನೆಗೆ ಬಂದರೆ ಅಪಾರ ನಷ್ಟ, ಸ್ತ್ರೀನಾಶ, ಅತಿ ದುಃಖ ಸಂಭವಿಸುವುದು. 9ನೇ ಮನೆಗೆ ಬಂದಲ್ಲಿ ಭಾಗ್ಯದಲ್ಲಿ ಏರಿಳಿತ, ಸಂತಾಪ, ಬುದ್ಧಿ ವೈಪರೀತ್ಯ ಉಂಟಾಗುವುವು. ರಾಹು ಕೇತುಗಳು 10ನೆಯ ಮನೆಯಲ್ಲಿ ಸಂಚರಿಸುವಾಗ ಕಲಹ, ಧನಾನುಕೂಲ, ಅಭಿವೃದ್ಧಿ ಉಂಟಾಗುವುದು. 11ನೇ ಮನೆಗೆ ಬಂದಾಗ ಉನ್ನತಿ ಹೊಂದುವ ಕಾಲ. ಅಧಿಕ ಧನ ಒದಗಿ ಬರುವುದು. 12ನೇ ಮನೆಗೆ ಬಂದಲ್ಲಿ ವಿಪರೀತ ದುಃಖ, ವಿನಾಶಗಳುಂಟಾಗುವುವು.

ಅನುಬಂಧ

ಭಾರತೀಯ ಕಾಲಮಾನ ಗಣನೆಗೆ ಅನುಸರಿಸಿರುವ ವಿಧಾನ ಸರಳವಾಗಿದೆ. 60 ವಿಘಳಿಗೆಗೆ 1 ಘಳಿಗೆ, 60 ಘಳಿಗೆಗೆ 1 ದಿನ. 7 ದಿನಕ್ಕೆ 1 ವಾರ. 365¼ ದಿವಸಗಳಿಗೆ ಒಂದು ವರ್ಷ. ಅರವತ್ತು ಸಂವತ್ಸರಗಳಿವೆ.

೧. ಪ್ರಭವ	೨೧. ಸರ್ವಜಿತು	೪೧. ಪ್ಲವಂಗ
೨. ವಿಭವ	೨೨. ಸರ್ವಧಾರಿ	೪೨. ಕೀಲಕ
೩. ಶುಕ್ಲ	೨೩. ವಿರೋಧಿ	೪೩. ಸೌಮ್ಯ
೪. ಪ್ರಮೋದೂತ	೨೪. ವಿಕೃತಿ	೪೪. ಸಾಧಾರಣ
೫. ಪ್ರಜೋತ್ಪತ್ತಿ	೨೫. ಖರ	೪೫. ವಿರೋಧಿಕೃತ್
೬. ಅಂಗಿರಸ	೨೬. ನಂದನ	೪೬. ಪರೀಧಾವಿ
೭. ಶ್ರೀಮುಖ	೨೭. ವಿಜಯ	೪೭. ಪ್ರಮಾದೀಚ
೮. ಭಾವ	೨೮. ಜಯ	೪೮. ಆನಂದ
೯. ಯುವ	೨೯. ಮನ್ಮಥ	೪೯. ರಾಕ್ಷಸ
೧೦. ಧಾತೃ	೩೦. ದುರ್ಮುಖಿ	೫೦. ನಳ
೧೧. ಈಶ್ವರ	೩೧. ಹೇವಿಳಂಬಿ	೫೧. ಪೈಂಗಳ
೧೨. ಬಹುಧಾನ್ಯ	೩೨. ವಿಳಂಬಿ	೫೨. ಕಾಳಯುಕ್ತಿ
೧೩. ಪ್ರಮಾಥಿ	೩೩. ವಿಕಾರಿ	೫೩. ಸಿದ್ಧಾರ್ಥಿ
೧೪. ವಿಕ್ರಮ	೩೪. ಶಾರ್ವರಿ	೫೪. ರೌದ್ರಿ
೧೫. ವೃಷ	೩೫. ಪ್ಲವ	೫೫. ದುರ್ಮತಿ
೧೬. ಚಿತ್ರಭಾನು	೩೬. ಶುಭಕೃತು	೫೬. ದುಂದುಭಿ
೧೭. ಸ್ವಭಾನು	೩೭. ಶೋಭಕೃತು	೫೭. ರುಧಿರೋದ್ಗಾರಿ
೧೮. ತಾರಣ	೩೮. ಕ್ರೋಧಿ	೫೮. ರಕ್ತಾಕ್ಷಿ
೧೯. ಪಾರ್ಥಿವ	೩೯. ವಿಶ್ವಾವಸು	೫೯. ಕ್ರೋಧನ
೨೦. ವ್ಯಯ	೪೦. ಪರಾಭವ	೬೦. ಅಕ್ಷಯ

ಒಂದು ಸಂವತ್ಸರಕ್ಕೆ ಹನ್ನೆರಡು ತಿಂಗಳುಗಳು. ಚೈತ್ರ, ವೈಶಾಖ,

ಜ್ಯೇಷ್ಠ, ಆಶಾಢ, ಶ್ರಾವಣ, ಭಾದ್ರಪದ, ಆಶ್ವಯುಜ ಕಾರ್ತಿಕ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ.

ತಿಂಗಳೊಂದಕ್ಕೆ ಮೂವತ್ತು ದಿವಸಗಳು. ಮೊದಲ ಹದಿನೈದು ದಿವಸಗಳು ಶುಕ್ಲಪಕ್ಷ, ಅನಂತರದ್ದು ಕೃಷ್ಣಪಕ್ಷ, ಪ್ರತಿ ದಿವಸಕ್ಕೂ ಒಂದು ಹೆಸರು ಇದ್ದು ಅದನ್ನು ತಿಥಿ ಎನ್ನುತ್ತಾರೆ. ಪಾಡ್ಯ, ಬಿದಿಗೆ, ತದಿಗೆ, ಚೌತಿ, ಪಂಚಮಿ, ಷಷ್ಠೀ, ಸಪ್ತಮಿ, ಅಷ್ಟಮಿ, ನವಮಿ, ದಶಮಿ, ಏಕಾದಶಿ, ದ್ವಾದಶಿ, ತ್ರಯೋದಶಿ, ಚತುರ್ದಶಿ, ಪೂರ್ಣಿಮಾ. ಮತ್ತೆ ಪಾಡ್ಯದಿಂದ ಆರಂಭವಾಗಿ ಹದಿನೈದನೇ ದಿವಸ ಅಮಾವಾಸ್ಯೆ.

ನಕ್ಷತ್ರಗಳು ಇಪ್ಪತ್ತೇಳು

೧.	ಅಶ್ವಿನಿ	೧೦.	ಮಖಾ	೧೯.	ಮೂಲ
೨.	ಭರಣಿ	೧೧.	ಪುಬ್ಬಾ	೨೦.	ಪೂರ್ವಾಷಾಢ
೩.	ಕೃತ್ತಿಕಾ	೧೨.	ಉತ್ತರಾ	೨೧.	ಉತ್ತರಾಷಾಢ
೪.	ರೋಹಿಣಿ	೧೩.	ಹಸ್ತ	೨೨.	ಶ್ರವಣ
೫.	ಮೃಗಶಿರಾ	೧೪.	ಚಿತ್ತಾ	೨೩.	ಧನಿಷ್ಠ
೬.	ಆರಿದ್ರಾ	೧೫.	ಸ್ವಾತಿ	೨೪.	ಶತಭಿಷ
೭.	ಪುನರ್ವಸು	೧೬.	ವಿಶಾಖಾ	೨೫.	ಪೂರ್ವಾಭಾದ್ರ
೮.	ಪುಷ್ಯ	೧೭.	ಅನೂರಾಧ	೨೬.	ಉತ್ತರಾಭಾದ್ರ
೯.	ಆಶ್ಲೇಷ	೧೮.	ಜ್ಯೇಷ್ಠ	೨೭.	ರೇವತಿ

ಒಂದೊಂದು ನಕ್ಷತ್ರಕ್ಕೂ ನಾಲ್ಕು ಪಾದಗಳು. ಹನ್ನೆರಡು ರಾಶಿಗಳಲ್ಲಿ ಪ್ರತಿಯೊಂದಕ್ಕೆ ಒಂಬತ್ತು ಪಾದಗಳು—ಎಂದರೆ $2\frac{1}{4}$ ನಕ್ಷತ್ರದಂತೆ ಹಂಚಲಾಗಿದೆ.

ಇಪ್ಪತ್ತೇಳು ಯೋಗಗಳನ್ನು ಹೇಳಿದ್ದಾರೆ.

೧.	ವಿಷ್ಕಂಭ	೫.	ಶೋಭನ	೯.	ಶೂಲ
೨.	ಪ್ರೀತಿ	೬.	ಅತಿಗಂಡ	೧೦.	ಗಂಡ
೩.	ಆಯುಷ್ಮಾನ್	೭.	ಸುಕರ್ಮ	೧೧.	ವೃದ್ಧಿ
೪.	ಸೌಭಾಗ್ಯ	೮.	ಧೃತಿ	೧೨.	ಧ್ರುವ

೧೩. ವ್ಯತೀಪಾತ	೧೮. ವರಿಯಾನ್	೨೩. ಶುಭ
೧೪. ಹರ್ಷಣ	೧೯. ಪರಿಘ	೨೪. ಶುಕ್ಲ
೧೫. ವಜ್ರ	೨೦. ಶಿವ	೨೫. ಬ್ರಹ್ಮ
೧೬. ಸಿದ್ಧಿ	೨೧. ಸಿದ್ಧ	೨೬. ಐಂದ್ರ
೧೭. ವ್ಯತೀಪಾತ	೨೨. ಸಾಧ್ಯ	೨೭. ವೈಧೃತಿ

ಕರಣಗಳು ಹನ್ನೊಂದು

೧. ಬವ	೪. ತೈತುಲ	೭. ಭದ್ರೆ	೧೦. ನಾಗವಾನ್
೨. ಬಾಲವ	೫. ಗರಜೆ	೮. ಶಕುನಿ	೧೧. ಕಿಂಸ್ತುಘ್ನ
೩. ಕೌಲವ	೬. ವಣಿಕ್	೯. ಚತುಷ್ಪಾತ್	

ವಾರ, ತಿಥಿ, ನಕ್ಷತ್ರ, ಯೋಗ ಮತ್ತು ಕರಣಗಳೆಂಬ ಪಂಚ (ಐದು) ಅಂಗಗಳನ್ನೊಳಗೊಂಡಿರುವುದು ಪಂಚಾಂಗ.

ರಾಶಿಚಕ್ರವನ್ನು ಹನ್ನೆರಡು ರಾಶಿಗಳನ್ನಾಗಿ ವಿಭಾಗಿಸಿದಾರೆ. ಒಂದೊಂದು ರಾಶಿಗೂ ಇಷ್ಟಿಷ್ಟು ಘಳಿಗೆ–ವಿಘಳಿಗೆಗಳ ಕಾಲಾವಧಿ ಆಯಾ ಸ್ಥಳದ ಅಕ್ಷಾಂಶದ ಮೇಲೆ ನಿರ್ಧರಿಸಲಾಗಿದೆ. ಜಾತಕ ಬರೆಯುವುದಕ್ಕೆ ರಾಶಿ ಚಕ್ರವೇ ಮೂಲಾಧಾರ. ಮಗು ಜನನವಾದ ತಿಂಗಳಲ್ಲಿ ಸೂರ್ಯ ಯಾವ ರಾಶಿಯಲ್ಲಿ ಸಂಚರಿಸುತ್ತಿರುವನೋ ಆ ರಾಶಿಯಿಂದ ಜನನ ಘಳಿಗೆಯ ಪರ್ಯಂತ ಎಷ್ಟು ಸಮಯ ಕಳೆದಿರುತ್ತದೆಯೋ ಅದಕ್ಕನುಸಾರವಾಗಿ ಲಗ್ನವನ್ನು ನಿರ್ಧರಿಸುತ್ತಾರೆ. ನವಾಂಶ ಕುಂಡಲಿಗಾದರೂ ಅಷ್ಟೆ. ಈ ಚಕ್ರದಲ್ಲಿ ಇರುವಂತೆ ರಾಶಿಗಳು ಪ್ರತಿ ರಾಶಿಗೂ ಒಂದೊಂದು ಗ್ರಹ ಅಧಿಪತಿ. ಲಗ್ನದ ಮನೆಯನ್ನು ಒಂದನೆಯ ಮನೆಯೆಂದು ಗಣಿಸಿ ಅಲ್ಲಿಂದ ಮುಂದಕ್ಕೆ ಲೆಕ್ಕ ಹಾಕಿಕೊಂಡು ಹೋಗಬೇಕು.

12 ಮೀನ ಗುರು	1 ಮೇಷ ಕುಜ	2 ವೃಷಭ ಶುಕ್ರ	3 ಮಿಥುನ ಬುಧ
11 ಕುಂಭ ಶನಿ	ರಾಶಿ ಚಕ್ರ		4 ಕಟಕ ಚಂದ್ರ
10 ಮಕರ ಶನಿ			5 ಸಿಂಹ ರವಿ
9 ಧನಸ್ಸು ಗುರು	8 ವೃಶ್ಚಿಕ ಕುಜ	7 ತುಲಾ ಶುಕ್ರ	6 ಕನ್ಯಾ ಬುಧ

ಒಂಬತ್ತು ಗ್ರಹಗಳಿಗೂ ಜನ್ಮಭೂಮಿ, ಗೋತ್ರ, ವರ್ಣ, ರತ್ನ, ಧಾನ್ಯ ವಸ್ತ್ರ, ಫಲ, ಪುಷ್ಪ ಮೊದಲಾದುವುಗಳನ್ನು ತಿಳಿದಿರುವುದು ಒಳ್ಳೆಯದು. ಅದರ ಪಟ್ಟಿ ಮುಂದಿನ ಪುಟದಲ್ಲಿ ಕೊಟ್ಟಿದೆ.



ವಿವರಣೆ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರಾಹು	ಕೇತು
ಜನ್ಮಭೂಮಿ	ಕಳಿಂಗ	ಯಮು ನಾ	ಅವಂತಿ	ಮಗಧ	ಸೈಂಧವ	ಭೋಜ ಕಟ	ಸೌರಾಷ್ಟ್ರ	ವರ್ವರಕ	ಅಂತ ರ್ವೇದಿ
ದೇವತೆ	ಶಿವ	ಉಮಾ	ಸ್ಕಂದ	ನಾರಾ ಯಣ	ಬ್ರಹ್ಮ	ಇಂದ್ರ	ಯಮ	ಕಾಲ	ಚಿತ್ರ ಗುಪ್ತ
ಗೋತ್ರ	ಕಶ್ಯಪ	ಅತ್ರಿ	ಭರದ್ವಾಜ	ಅತ್ರಿ	ಆಂಗಿರಸ	ಭೃಗು	ಕಶ್ಯಪ	ಪೈಠೀನಸಿ	ಜೈಮಿನಿ
ವರ್ಣ	ಕೆಂಪು	ಬಿಳಿ	ಕೆಂಪು	ಹಳದಿ	ಹಳದಿ	ಬಿಳಿ	ಕಪ್ಪು	ಕಪ್ಪು	ಬಣ್ಣಬಣ್ಣ
ಆಕಾರ	ವರ್ತುಲ	ಅರ್ಧ ಚಂದ್ರ	ತ್ರಿಕೋಣ	ಧನಸ್ಸು	ಪದ್ಮ	ಚೌಕ	ಸರ್ಪ	ಮಕರ	ಖಡ್ಗ
ಮಂಡಲದಲ್ಲಿಸ್ಥಾನ	ಮಧ್ಯ	ಪೂರ್ವ ದಕ್ಷಿಣ	ದಕ್ಷಿಣ	ಪೂರ್ವೋ ತ್ತರ	ಉತ್ತರ	ಪೂರ್ವ	ಪಶ್ಚಿಮ	ದಕ್ಷಿಣ ಪಶ್ಚಿಮ	ಪಶ್ಚಿಮೋ ತ್ತರ

* ವಾಹನ	ಸಪ್ತಾಶ್ವ ರಥ	ದಶಾಶ್ವ ರಥ	ಮೇಷ	ಸಿಂಹ	ಆನೆ	ಕುದುರೆ	ಗೃಧ್ರ	ಸಿಂಹ	ಗೃಧ್ರ
ರತ್ನ	ಮಾಣಿಕ್ಯ	ಮುತ್ತು	ಹವಳ	ಪಚ್ಚೆ	ಪುಷ್ಯರಾಗ	ವಜ್ರ	ನೀಲ	ಗೋಮೇಧಿಕ	ವೈಢೂರ್ಯ
ಧಾನ್ಯ	ಗೋಧಿ	ಭತ್ತ	ತೊಗರಿ	ಹೆಸರು	ಕಡಲೆ	ಅವರೆ	ಎಳ್ಳು	ಉದ್ದು	ಹುರುಳಿ
ವಸ್ತ್ರ	ಕೆಂಪು	ಬಿಳಿ	ಕೆಂಪು	ಹಳದಿ	ಹಳದಿ	ಬಿಳಿ	ಕಪ್ಪು	ಕಪ್ಪು	ಬಣ್ಣಬಣ್ಣ
ಫಲ	ದ್ರಾಕ್ಷಿ	ಕಬ್ಬು	ಅಡಿಕೆ	ಕಿತ್ತಲೆ	ನೇರಳೆ	ಬೇಲ	ಜಾಯಿ ಕಾಯಿ	ತೆಂಗಿನ ಕಾಯಿ	ದಾಳಿಂಬೆ
ಪುಷ್ಪ	ಕೆನ್ನೈದಿಲೆ	ನೈದಿಲೆ	ದಾಸವಾಳ	ಸಂಪಿಗೆ	ತಾವರೆ	ಜಾಜಿ	ಮಲ್ಲಿಗೆ	ಮೊಲ್ಲೆ	ಮಲ್ಲಿಗೆ

ಎಲ್ಲಾ ಗ್ರಹಗಳೂ ಸಂಚರಿಸುವ ವೇಗ ಏಕಪ್ರಕಾರವಾಗಿಲ್ಲ. ಒಂದು ರಾಶಿಯನ್ನು ಕ್ರಮಿಸಲು ಒಂದೊಂದು ಗ್ರಹವೂ ತನ್ನದೇ ಆದ ಕಾಲ ತೆಗೆದು ಕೊಳ್ಳುತ್ತದೆ.

ಗ್ರಹ	ಕಾಲ
ರವಿ	ಒಂದು ತಿಂಗಳು
ಚಂದ್ರ	ಎರಡೂ ಕಾಲು ದಿನಗಳು (54 ಘಂಟೆಗಳು)
ಕುಜ	ಮೂರು ಪಕ್ಷಗಳು
ಬುಧ	ಹದಿನೆಂಟು ದಿನಗಳು
ಗುರು	ಒಂದು ವರ್ಷ
ಶುಕ್ರ	ಇಪ್ಪತ್ತೆಂಟು ದಿನಗಳು
ಶನಿ	ಎರಡೂವರೆ ವರ್ಷಗಳು (ಮೂವತ್ತು ತಿಂಗಳುಗಳು)
ರಾಹು ಕೇತು	ಒಂದೂವರೆ ವರ್ಷ (ಹದಿನೆಂಟು ತಿಂಗಳು)

ಒಬ್ಬ ಜಾತಕನಿಗೆ ಯಾವುದಾದರೂ ಗ್ರಹ ಕ್ರೂರವಾಗಿದ್ದರೆ ಆ ಗ್ರಹದ ಶಾಂತಿಗಾಗಿ ಪೂಜೆ ಮಾಡಿಸುವುದು ರೂಢಿ. ಇದರೊಡನೆ ಗ್ರಹದಕ್ಷಿಣೆಗಾಗಿ ದಾನ ಕೊಡುತ್ತಾರೆ. ಪ್ರತಿಯೊಂದು ಗ್ರಹಕ್ಕೂ ಒಂದೊಂದು ವಸ್ತು ದಾನ ಕೊಡುವುದಕ್ಕೆ ಶ್ರೇಷ್ಠವೆಂದು ಹೇಳಲ್ಪಟ್ಟಿದೆ.

ಗ್ರಹ	ಗ್ರಹ ದಕ್ಷಿಣಗೆ ಕೊಡುವ ದಾನ
ರವಿ	ಕೆಂದು ಕಪ್ಪು ಬಣ್ಣದ ಹಸು
ಚಂದ್ರ	ಶಂಖ
ಕುಜ	ಕೆಂಪು ಎತ್ತು
ಬುಧ	ಸುವರ್ಣ
ಗುರು	ಹಳದಿಯ ವಸ್ತ್ರ
ಶುಕ್ರ	ಬಿಳಿಯ ಕುದುರೆ
ಶನಿ	ಕಪ್ಪು ಹಸು
ರಾಹು	ಕಬ್ಬಿಣದ ಆಯುಧ
ಕೇತು	ಹೋತ

ಕೇಂದ್ರ–ತ್ರಿಕೋಣಗಳು ಶುಭಸ್ಥಾನಗಳು. 3-6-8-12 ದುಸ್ಥಾನಗಳು. ದಶೆಯ ಫಲವನ್ನು ತಿಳಿದುಕೊಳ್ಳುವುದಕ್ಕೆ ಇದು ಬಹು ಅಗತ್ಯ. ದಶಾನಾಥನಿಗೆ ಭುಕ್ತಿನಾಥ ಕೇಂದ್ರ ಅಥವಾ ತ್ರಿಕೋಣದಲ್ಲಿದ್ದರೆ ಒಳ್ಳೆಯ ಫಲ ಉಂಟು ಮಾಡುತ್ತಾರೆ. ಹಾಗೆಯೇ ಅವರು ಪರಸ್ಪರ ದುಸ್ಥಾನಗಳಲ್ಲಿದ್ದರೆ ಕಷ್ಟ ಫಲ

ಗಳೇ ಎದುರಾಗುವವು. ರವಿ, ಚಂದ್ರ, ಕುಜ, ರಾಹು, ಗುರು, ಶನಿ, ಬುಧ, ಕೇತು ಮತ್ತು ಶುಕ್ರ ದಶೆಗಳು ಕ್ರಮವಾಗಿ ನಡೆಯುವುವು. ಆಯಾ ವ್ಯಕ್ತಿಯ ಜನ್ಮನಕ್ಷತ್ರಕ್ಕೆ ಉಕ್ತವಾಗಿರುವ ಗ್ರಹದ ದಶೆ ಮೊದಲು ನಡೆಯುವುದು. ಅಲ್ಲಿಂದ ಮುಂದೆ ಮೇಲೆ ಹೇಳಿರುವ ಪ್ರಕಾರ ದಶೆ ಆರಂಭ. ಯಾವ ಗ್ರಹದ ದಶೆಯೋ ಆ ಗ್ರಹದ ಭುಕ್ತಿ ಮೊದಲು. ಉದಾಹರಣೆಗೆ ಶುಕ್ರ ದಶೆಯಲ್ಲಿ ಮೊದಲು ಶುಕ್ರ ಭುಕ್ತಿ. ಅನಂತರ ರವಿ, ಚಂದ್ರ, ಕುಜರ ಭುಕ್ತಿಗಳು ಕ್ರಮವಾಗಿ ನಡೆದು ಕೊನೆಗೆ ಕೇತು ಭುಕ್ತಿಯಲ್ಲಿ ಮುಕ್ತಾಯವಾಗುವುದು.

ಗೋಚಾರದಲ್ಲಿ ಚಂದ್ರನಿಂದ ಕೇಂದ್ರ–ತ್ರಿಕೋಣಕ್ಕೆ ಬಂದ ಗ್ರಹ ಶುಭವುಂಟುಮಾಡುವಂತೆ 3–6–8–12ಕ್ಕೆ ಬಂದ ಗ್ರಹಗಳು ಮಾಡಲಾರವು. ಪಾಪಗ್ರಹಗಳಾದ ಶನಿ, ಕುಜ, ರಾಹು, ಕೇತು, ಪಾಪಗ್ರಹಯುತನಾದ ಬುಧ, ಕ್ಷೀಣ ಚಂದ್ರ ದುಸ್ಥಾನಗಳಲ್ಲಿ ಪ್ರಬಲರಾಗುವುದರಿಂದ ಆಗ ಶುಭವನ್ನೇ ಉಂಟುಮಾಡುತ್ತಾರೆ.

ನಿತ್ಯಜೀವನದಲ್ಲಿ ಉಪಯೋಗಕ್ಕೆ ಬರುವಂತಹ ಎರಡು ಸಂಗತಿಗಳಿವೆ. ಅದನ್ನು ಹೇಳಿ ಈ ಗ್ರಂಥವನ್ನು ಮುಗಿಸುತ್ತೇನೆ. ಪಂಚಾಂಗಗಳು ಕೆಲವಲ್ಲಿ ಈ ವಿಚಾರಗಳನ್ನು ಕೊಟ್ಟಿರುತ್ತಾರಾದರೂ ಇಲ್ಲಿಯೂ ಹೇಳುವುದು ಅಪ್ರಕೃತವಾಗಲಾರದು.

ಏನಾದರೊಂದು ಕೆಲಸ ಮಾಡಹೊರಟಾಗ, ಪ್ರಯಾಣ ಹೊರಡುವ ಆಲೋಚನೆ ಬಂದಾಗ ಆ ದಿನ ಹೇಗಿದೆ ಎಂದು ನೋಡುವುದು ವಾಡಿಕೆ. ಜನ್ಮನಕ್ಷತ್ರ, ಆ ದಿನದ ನಕ್ಷತ್ರಗಳಿಗೆ ಅಮೃತಾದಿಯೋಗ ಎನ್ನುವ ಪಟ್ಟಿಯನ್ನು ನೋಡಿ. ಅದರಲ್ಲಿ ಆ ವಾರಕ್ಕೆ ಅಮೃತ, ಸಿದ್ಧಿ, ಅಮೃತಸಿದ್ಧಿ ಎಂದಿದ್ದು ಜೊತೆಗೆ ತಾರಾಬಲವೂ ಇದ್ದರೆ ಕೈಗೊಂಡ ಕೆಲಸ ಸಿದ್ಧಿಯಾಗುವುದು. ತಾರಾಬಲವೂ ಇಲ್ಲದೆ ಮೃತ್ಯು, ಪ್ರಬಲಾರಿಷ್ಟ, ಮರಣ ಎಂದಿದ್ದರೆ ಕೆಲಸಕ್ಕೆ ಆರಂಭಿಸದಿರುವುದು ಸೂಕ್ತ. ಪ್ರಯಾಣ ಹೊರಡುವವರು ಮುಂಚಿತವಾಗಿ ಆಲೋಚಿಸಿಯೇ ಇರುತ್ತಾರೆ. ಆದುದರಿಂದ ಪ್ರಯಾಣಕ್ಕೆ ದಿನ ನಿರ್ಧರಿಸುವ ಮೊದಲು ತಾರಾಬಲ, ಪ್ರಯಾಣಕ್ಕೆ ಅನುಕೂಲವಾದ ಆನಂದಾದಿ ಯೋಗಗಳು ಎನ್ನುವ ಪಟ್ಟಿಯಲ್ಲಿ ತಮ್ಮ ಜನ್ಮನಕ್ಷತ್ರ, ಆ ಪ್ರಯಾಣ ಹೊರಡುವ ದಿವಸದ ನಕ್ಷತ್ರಕ್ಕೆ ಶುಭ ಫಲವಿದೆಯೇ ಎಂಬುದನ್ನು ನೋಡಿಕೊಳ್ಳು

ವುದು ಉತ್ತಮ. ಸಾಧ್ಯವಾದರೆ ಚಂದ್ರಬಲವನ್ನೂ ನೋಡುವುದೊಳ್ಳೆಯದು.

ತಾರಾಬಲ

ಜನ್ಮನಕ್ಷತ್ರ ಮೊದಲು ಆ ದಿನದ ನಕ್ಷತ್ರದವರೆಗೆ ಎಣಿಸಿ ೯ರಿಂದ ಭಾಗಿಸಿ ಬಂದ ಶೇಷ ೧ ಆದರೆ ಜನ್ಮತಾರೆ, ೨ ಸಂಪತ್ತಾರೆ, ೩ ವಿಪತ್ತಾರೆ, ೪ ಕ್ಷೇಮ ತಾರೆ, ೫ ಪ್ರತ್ಯಕ್ ತಾರೆ ೬ ಸಾಧಕತಾರೆ, ೭ ನೈಧನತಾರೆ, ೮ ಮಿತ್ರ ತಾರೆ, ೯ ಅಥವಾ (೦) ಬಂದರೆ ಪರಮಮೈತ್ರ ತಾರೆ. ೨, ೪, ೬, ೭, ೮, ೦ ಇವು ಶುಭತಾರೆಗಳು, ಮಿಕ್ಕವು ದುಷ್ಟತಾರೆಗಳು. ಇವುಗಳಲ್ಲಿ ಯಾವ ಕೆಲಸವನ್ನೂ ಮಾಡಕೂಡದು. ಅನಿರ್ವಾಹ ಪಕ್ಷದಲ್ಲಿ ಜನ್ಮತಾರೆಗೆ ತರಕಾರಿ, ವಿಪತ್ತಾರೆಗೆ ಬೆಲ್ಲ, ಪ್ರತ್ಯಕ್ ತಾರೆಗೆ ಉಪ್ಪು, ನೈಧನತಾರೆಗೆ ಎಳ್ಳು, ಚಿನ್ನ ವಸ್ತ್ರ ಇತ್ಯಾದಿ ದಾನ ಮಾಡಿದರೆ ಶುಭತ್ವ ಉಂಟಾಗುತ್ತದೆ.

ಚಂದ್ರಬಲ

ಜನ್ಮರಾಶಿಯಿಂದ ಚಂದ್ರನಿರುವ ರಾಶಿಯವರೆಗೆ ಎಣಿಸಿ (ಎರಡು ಸೇರಿ) ಆ ಸಂಖ್ಯೆಯ ಮೊತ್ತವು ೧ ಆದರೆ ದೇಹಸೌಖ್ಯ, ೨ ಕಲಹ, ೩ ದ್ರವ್ಯಲಾಭ, ೪ ರೋಗಭೀತಿ, ೫ ಕಾರ್ಯನಾಶ, ೬ ಶತ್ರುನಾಶ, ೭ ಸೌಖ್ಯಪ್ರದ, ೮ ಆರೋಗ್ಯಕರ, ೯ ಕಾರ್ಯಹಾನಿ, ೧೦ ಉದ್ಯೋಗಲಾಭ, ೧೧ ಇಷ್ಟಸಿದ್ಧಿ, ೧೨ ಧನವ್ಯಯ. ೧, ೩, ೬, ೭, ೧೦, ೧೧ ಇವು ಎಲ್ಲಾ ಕೆಲಸಗಳಿಗೂ ಪ್ರಶಸ್ತ. ಇನ್ನುಳಿದ ಸಂಖ್ಯಾರಾಶಿಯು ನಿಶ್ಫಲವು. ಶುಕ್ಲಪಕ್ಷದಲ್ಲಿ ೨, ೪, ೬, ೯, ಕೃಷ್ಣಪಕ್ಷದಲ್ಲಿ ೪, ೮, ೧೨ ಇವುಗಳು ಶುಭವೆಂದು ಕೆಲವರ ಮತ. ಅನಿರ್ವಾಹ ಪಕ್ಷದಲ್ಲಿ ಚಂದ್ರಗ್ರಹ ಜಪ, ಅಕ್ಕಿದಾನದಿಂದ ದೋಷಪರಿಹಾರ. ಶುಕ್ಲಪಕ್ಷದಲ್ಲಿ ತಾರಾಬಲವನ್ನೂ, ಕೃಷ್ಣಪಕ್ಷದಲ್ಲಿ ಚಂದ್ರಬಲವನ್ನೂ ನೋಡುವುದು.


ಅಮೃತಾದಿಯೋಗ

ನಕ್ಷತ್ರ	ಆದಿ	ಸೋ	ಮಂ	ಬುಧ	ಗುರು	ಶುಕ್ರ	ಶನಿ
ಅಶ್ವಿನಿ	ಅ	ಸಿ	ಅಸಿ	ಮೃ	ಅ	ಅಸಿ	ಅ
ಭರಣಿ	ಪ್ರ	ಸಿ	ಅಸಿ	ಮೃ	ಅ	ಸಿ	ಸಿ
ಕೃತ್ತಿಕ	ಸಿ	ಮೃ	ಸಿ	ಅಸಿ	ಮೃ	ಸಿ	ಅ
ರೋಹಿಣಿ	ಅ	ಅಸಿ	ಅ	ಸಿ	ಉ	ಮೃ	ಅಸಿ
ಮೃಗಶಿರ	ಅ	ಅಸಿ	ಸಿ	ಅ	ಮೃ	ಅ	ಸಿ
ಆರ್ದ್ರ	ಸಿ	ಸಿ	ಮೃ	ಸಿ	ಮೃ	ಅ	ಸಿ
ಪುನರ್ವಸು	ಅ	ಅಸಿ	ಅ	ಸಿ	ಅ	ಸಿ	ಅ
ಪುಷ್ಯ	ಅಸಿ	ಅ	ಅ	ಮೃ	ಅಸಿ	ಉ	ಸಿ
ಆಶ್ಲೇಷ	ಸಿ	ಅ	ಅ	ಸಿ	ಸಿ	ಮೃ	ಮೃ
ಮಘ	ಮೃ	ಮೃ	ಸಿ	ಸಿ	ಅ	ಮೃ	ಅ
ಪುಬ್ಬ	ಅ	ಅ	ಸಿ	ಅಸಿ	ಸಿ	ಸಿ	ಸಿ
ಉತ್ತರ	ಅಸಿ	ಸಿ	ಅ	ಅ	ಮೃ	ಅ	ಉ
ಹಸ್ತ	ಅಸಿ	ಮೃ	ಅ	ಅ	ಮ	ಅ	ಮೃ
ಚಿತ್ತ	ಅ	ಪ್ರ	ಸಿ	ಸಿ	ಸಿ	ಅ	ಮ
ಸ್ವಾತಿ	ಸಿ	ಅ	ಅ	ಸಿ	ಅ	ಅಸಿ	ಅಸಿ
ವಿಶಾಖ	ಉ	ಮೃ	ಮೃ	ಅಸಿ	ಅ	ಸಿ	ಅ
ಅನೂರಾಧ	ಮೃ	ಮೃ	ಸಿ	ಅಸಿ	ಅ	ಸಿ	ಅ
ಜ್ಯೇಷ್ಠ	ಮೃ	ಸಿ	ಉ	ಸಿ	ಪ್ರ	ಮ	ಸಿ
ಮೂಲ	ಅಸಿ	ಸಿ	ಅ	ಮೃ	ಸಿ	ಅ	ಸಿ
ಪೂರ್ವಾಷಾಢ	ಅ	ಉ	ಸಿ	ಅ	ಅ	ಪ್ರ	ಸಿ
ಉತ್ತರಾಷಾಢ	ಅ	ಮೃ	ಪ್ರ	ಅ	ಸಿ	ಅಸಿ	ಸಿ
ಶ್ರವಣ	ಅಸಿ	ಅಸಿ	ಸಿ	ಅ	ಅ	ಮೃ	ಸಿ
ಧನಿಷ್ಠ	ಮ	ಮ	ಸಿ	ಪ್ರ	ಸಿ	ಅಸಿ	ಸಿ
ಶತಭಿಷ	ಸಿ	ಸಿ	ಮೃ	ಅಸಿ	ಮೃ	ಅ	ಅ
ಪೂರ್ವಾಭಾದ್ರ	ಸಿ	ಸಿ	ಮೃ	ಅ	ಅಸಿ	ಅ	ಮೃ
ಉತ್ತರಾಭಾದ್ರ	ಅ	ಸಿ	ಅಸಿ	ಸಿ	ಸಿ	ಅ	ಅಮೃ
ರೇವತಿ	ಅ	ಸಿ	ಸಿ	ಸಿ	ಸಿ	ಅಸಿ	ಪ್ರ

ಅ—ಅಮೃತ, ಸಿ—ಸಿದ್ಧಿ, ಅಸಿ—ಅಮೃತಸಿದ್ಧಿ, ಇವುಗಳು ಶುಭಫಲಗಳು.
ಉ—ಉತ್ಪಾತ, ಮೃ—ಮೃತ್ಯು, ಪ್ರ—ಪ್ರಬಲಾರಿಷ್ಟ, ಮ—ಮರಣ.
ಇವುಗಳು ಅಶುಭಫಲಗಳು.

ಪ್ರಯಾಣಕ್ಕೆ ಅನುಕೂಲವಾದ ಆನಂದಾದಿ ಯೋಗಗಳು

ಭಾನು	ಸೋ	ಮಂ	ಬುಧ	ಗುರು	ಶುಕ್ರ	ಶನಿ	ಯೋಗ ಮತ್ತು ಫಲ
ಅಶ್ವಿನಿ	ಮೃ	ಆಶ್ಲೇ	ಹಸ್ತ	ಅನೂ	ಉಷಾ	ಶತಭಿಷ	ಆನಂದ–ಕಾರ್ಯಸಿದ್ಧಿ
ಭರಣಿ	ಆರ್ದ್ರ	ಮಖಿ	ಚಿತ್ತ	ಜ್ಯೇ	ಅಭಿ	ಪೂಭಾ	ಕಾಲದಂಡ–ಮೃತ್ಯು
ಕೃತ್ತಿಕ	ಪುನ	ಪುಬ್ಬ	ಸ್ವಾತಿ	ಮೂಲ	ಶ್ರವಣ	ಉಭಾ	ಧೂಮ್ರ–ಅಶುಭ
ರೋಹಿಣಿ	ಪುಷ್ಯ	ಉತ್ತ	ವಿಶಾ	ಪೂಷಾ	ಧನಿ	ರೇವತಿ	ಪ್ರಜಾಪತಿ–ಸೌಭಾಗ್ಯ
ಮೃಗಶಿರ	ಆಶ್ಲೇಷ	ಹಸ್ತ	ಅನೂ	ಉಷಾ	ಶತಭಿ	ಅಶ್ವಿನಿ	ಸೌಮ್ಯ–ಸೌಖ್ಯ
ಆರ್ದ್ರ	ಮಖಿ	ಚಿತ್ತ	ಜ್ಯೇ	ಅಭಿ	ಪೂಭಾ	ಭರಣಿ	ದ್ವಾಂಕ್ಷ–ಧನವ್ಯಯ
ಪುನರ್ವಸು	ಪುಬ್ಬ	ಸ್ವಾತಿ	ಮೂಲ	ಶ್ರವಣ	ಉಭಾ	ಕೃತ್ತಿಕ	ಧ್ವಜ–ಶುಭ
ಪುಷ್ಯ	ಉತ್ತ	ವಿಶಾ	ಪೂಷಾ	ಧನಿ	ರೇವತಿ	ರೋ	ಶ್ರೀವತ್ಸ–ಸಂಪತ್ತಿ
ಆಶ್ಲೇಷ	ಹಸ್ತ	ಅನೂ	ಉಷಾ	ಶತಭಿ	ಅಶ್ವಿನಿ	ಮೃಗ	ವಜ್ರ–ಕ್ಷಯ
ಮಖಿ	ಚಿತ್ತ	ಜ್ಯೇಷ್ಠ	ಅಭಿ	ಪೂಭಾ	ಭರಣಿ	ಆರ್ದ್ರ	ಮುದ್ಗರ–ಸಂಪತ್ತಿನಾಶ
ಪುಬ್ಬ	ಸ್ವಾತಿ	ಮೂಲ	ಶ್ರವಣ	ಉಭಾ	ಕೃತ್ತಿಕ	ಪುನ	ಛತ್ರ–ರಾಜಸನ್ಮಾನ
ಉತ್ತರ	ವಿಶಾ	ಪೂಷಾ	ಧನಿ	ರೇವತಿ	ರೋ	ಪುಷ್ಯ	ಮಿತ್ರ–ದೇಹಪುಷ್ಟಿ
ಹಸ್ತ	ಅನೂ	ಉಷಾ	ಶತಭಿ	ಅಶ್ವಿನಿ	ಮೃಗ	ಆಶ್ಲೇ	ಮಾನಸ–ಸಂತುಷ್ಟಿ
ಚಿತ್ತ	ಜ್ಯೇಷ್ಠ	ಅಭಿ	ಪೂಭಾ	ಭರಣಿ	ಆರ್ದ್ರ	ಮಖಿ	ಪದ್ಮ–ಧನಪ್ರಾಪ್ತಿ
ಸ್ವಾತಿ	ಮೂ	ಶ್ರವಣ	ಉಭಾ	ಕೃತ್ತಿಕ	ಪುನ	ಪುಬ್ಬ	ಲಂಬಕ–ಧನಹಾನಿ
ವಿಶಾಖ	ಪೂಷಾ	ಧನಿ	ರೇವತಿ	ರೋ	ಪುಷ್ಯ	ಉತ್ತ	ಉತ್ಪಾತ–ಪ್ರಾಣನಾಶ
ಅನೂರಾಧ	ಉಷಾ	ಶತಭಿ	ಅಶ್ವಿನಿ	ಮೃಗ	ಆಶ್ಲೇ	ಹಸ್ತ	ಮೃತ್ಯು–ಮರಣ
ಜ್ಯೇಷ್ಠ	ಅಭಿ	ಪೂಭಾ	ಭರಣಿ	ಆರ್ದ್ರ	ಮಖಿ	ಚಿತ್ತ	ಕಾಣ–ಕ್ಲೇಶ
ಮೂಲ	ಶ್ರವಣ	ಉಭಾ	ಕೃತ್ತಿಕ	ಪುನ	ಪುಬ್ಬ	ಸ್ವಾತಿ	ಸಿದ್ಧಿ–ಕಾರ್ಯಸಿದ್ಧಿ
ಪೂ.ಷಾಢ	ಧನಿಷ್ಠ	ರೇವ	ರೋ	ಪುಷ್ಯ	ಉತ್ತ	ವಿಶಾ	ಶುಭ–ಕಲ್ಯಾಣ
ಉ.ಷಾಢ	ಶತ	ಅಶ್ವಿ	ಮೃಗ	ಆಶ್ಲೇ	ಹಸ್ತ	ಅನೂ	ಅಮೃತ–ಲಾಭ
ಅಭಿಜಿತ್	ಪೂಭಾ	ಭರಣಿ	ಆರ್ದ್ರ	ಮಖಿ	ಚಿತ್ತ	ಜ್ಯೇ	ದುಸಲ–ಧನಕ್ಷಯ
ಶ್ರವಣ	ಉಭಾ	ಕೃತ್ತಿಕ	ಪುನ	ಪುಬ್ಬ	ಸ್ವಾತಿ	ಮೂಲ	ಗದಾ–ಭಯ
ಧನಿಷ್ಠ	ರೇವ	ರೋಹಿ	ಪುಷ್ಯ	ಉತ್ತ	ವಿಶಾ	ಪೂಷಾ	ಮಾತಂಗ-ಕುಲವೃದ್ಧಿ
ಶತಭಿಷ	ಅಶ್ವಿನಿ	ಮೃಗ	ಆಶ್ಲೇ	ಹಸ್ತ	ಅನೂ	ಉಷಾ	ರಾಕ್ಷಸ–ಮಹಾರಿಷ್ಟ
ಪೂಭಾದ್ರ	ಭರಣಿ	ಆರ್ದ್ರ	ಮಖಿ	ಚಿತ್ತ	ಜ್ಯೇ	ಅಭಿ	ಜರ–ಕಾರ್ಯನಾಶ
ಉ.ಭಾದ್ರ	ಕೃತ್ತಿಕ	ಪುನ	ಪುಬ್ಬ	ಸ್ವಾತಿ	ಮೂಲ	ಶ್ರವಣ	ಸ್ಥಿರ–ಕಾರ್ಯಲಾಭ
ರೇವತಿ	ರೋಹಿ	ಪುಷ್ಯ	ಉತ್ತ	ವಿಶಾ	ಪೂಷಾ	ಧನಿ	ವರ್ಧಮಾನ-ಸಮೃದ್ಧಿ



5681

'ಜ್ಯೋತಿಷ ಚಿಂತಾಮಣಿ'...

ಇದರಲ್ಲಿ ಜನ್ಮಕಾಲದಲ್ಲಿ ಗ್ರಹಗಳು ಇರುವ ರಾಶಿಫಲ ಮತ್ತು ಭಾವಫಲ, ದಶಾಭುಕ್ತಿಫಲ, ಗೋಚಾರಫಲ ಮುಂತಾದವುಗಳಿರುತ್ತವೆ. ಫಲವನ್ನು ತಿಳಿದುಕೊಳ್ಳಬೇಕೆಂಬುವವರಿಗೂ, ಹೇಳುವವರಿಗೂ ಕೈಗನ್ನಡಿಯಾಗಿರುತ್ತದೆ. ಈ ಗ್ರಂಥಕ್ಕೆ ಜ್ಯೋತಿಷ ಸ್ವಯಂಬೋಧಿನೀ ಎಂಬ ಹೆಸರು ಅನ್ವರ್ಥವಾಗಿದೆ.

ಜ್ಯೋತಿಸ್ಸಿದ್ಧಾಂತ ಕೇಸರೀ
ವೆಂಕಟಸುಬ್ಬಾಶಾಸ್ತ್ರೀ
ಕೊಳ್ಳೇಗಾಲ

ಪ್ರಕೃತ ಶ್ರೀಮತಿಯವರು ಹಲವು ಗ್ರಂಥಗಳಲ್ಲಿ ನಿರೂಪಿಸಿದಂತೆ ಗ್ರಹ ನಕ್ಷತ್ರ ರಾಶಿಗಳ ಸ್ವರೂಪ ಫಲ, ಗೋಚಲಫಲ ಮೊದಲಾದುವುಗಳನ್ನು ವಿಸ್ತಾರವಾಗಿ ಬರೆದಿದ್ದಾರೆ.

ವಾಸುದೇವ ಸೋಮಯಾಜಿ
ಧರ್ಮಶಾಸ್ತ್ರ ಪ್ರಾಧ್ಯಾಪಕರು
ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ
ಮೈಸೂರು

ಈ ಗ್ರಂಥವು ಸ್ವಲ್ಪ ಮಾತ್ರ ಜಾತಕ ಪರಿಚಯವಿರುವವರಿಗೂ ಕೂಡ ತಮ್ಮ ಜೀವಿತಕಾಲದ ಶುಭಾಶುಭಫಲ ಸಮಯವನ್ನು ನಿರ್ಣಯಿಸಿಕೊಳ್ಳಲು ಕೈಗನ್ನಡಿಯಂತಿದೆ ಎಂತ ಹೇಳುವಲ್ಲಿ ಅನುಮಾನವಿಲ್ಲ.

ಎಚ್. ಕೆ. ಕೃಷ್ಣಮೂರ್ತಿ
ಜ್ಯೋತಿಷ ಪ್ರಾಧ್ಯಾಪಕರು
ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲಾ
ಮೈಸೂರು

ಡಿ. ವಿ. ಕೆ. ಮೂರ್ತಿ : : ಪ್ರಕಾಶಕರು : : ಮೈಸೂರು ೪